ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಪ್ರಧಾನಿ ನರೇಂದ್ರ ಮೋದಿ ಅವರು ಮೂರು ದಿನಗಳ ಪ್ರವಾಸಕ್ಕಾಗಿ ಶನಿವಾರ ಪೂರ್ವ ಆಫ್ರಿಕಾದ ರಾಷ್ಟ್ರ ಸೆಶೆಲ್ಸ್‌ಗೆ ಭೇಟಿ ನೀಡಿದ್ದಾರೆ.

28 ಜೂನ್, 2026 ಭಾನುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 109 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ಸುಯ್ಯೆಂದು ಹಾಡುವ ಸೊಳ್ಳೆಯ ಸುದ್ದಿ » 2


ಕೆಂಪೇಗೌಡರ ಆದರ್ಶಗಳು ಇಂದಿನ ಪೀಳಿಗೆಗೆ ದಾರಿದೀಪ » 3


ಬೆಂಗಳೂರು ಅಭಿವೃದ್ಧಿಯ ಹರಿಕಾರ ಕೆಂಪೇಗೌಡ » 4

# ಟೌನ್‌ಶಿಪ್‌ಗೆ ಮರುಜೀವ ನೀಡಿದ್ದೇ ಕಾಂಗ್ರೆಸ್

## ಚರ್ಚೆಗೆ ಬಾರದ ಮುಖ್ಯಮಂತ್ರಿ | ಸರ್ಕಾರದ ವಿರುದ್ಧ ಹೆಚ್.ಡಿ.ಕೆ. ವಾಗ್ದಾಳಿ

• ಪ್ರಜೋದಯ ವರದಿ

**ಬೆಂಗಳೂರು:** ಬಿಡದಿ ಟೌನ್‌ಶಿಪ್ ವಿಚಾರವಾಗಿ ರೈತರ ಸಮ್ಮುಖದಲ್ಲೇ ಬಹಿರಂಗ ಚರ್ಚೆಗೆ ಪಂಥಾಹ್ವಾನದ ಪತ್ರಗಳ ಸವಾಲಿನ ಮಧ್ಯೆ ಶನಿವಾರ ಭೈರಮಂಗಲಕ್ಕೆ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಭೇಟಿ ನೀಡಿದರಾದರೂ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಗೈರು ಹಾಜರಾದರು.

ಸ್ಥಳದಲ್ಲಿ ಯೋಜನೆ ಪರ ವಿರೋಧದವರ ಧ್ವನಿಯೂ ತಾರಕಕ್ಕೇ ಏರಿದ್ದು, ಹೆಚ್.ಡಿ. ಕುಮಾರಸ್ವಾಮಿ ಅವರು ರೈತರೊಂದಿಗೆ ಚರ್ಚೆ ನಡೆಸಿದರು ಮಾತ್ರವಲ್ಲದೆ ರಾಜ್ಯ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕುಮಾರಸ್ವಾಮಿ ಅವರು, 2007ರಲ್ಲೇ ಸ್ಥಗಿತಗೊಳಿಸಲಾಗಿದ್ದ ಬಿಡದಿ ಟೌನ್‌ಶಿಪ್ ಯೋಜನೆಗೆ ಮರುಜೀವ ನೀಡಿ 2025ರಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ್ದು ಕಾಂಗ್ರೆಸ್ ಸರ್ಕಾರ ಎಂದು ಆರೋಪಿಸಿದರು.

ಕಾಂಗ್ರೆಸ್ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ, ಧರಂ ಸಿಂಗ್, ಡಿ.ಕೆ.ಶಿವಕುಮಾರ್ ಅವರು 2007ರ ಜುಲೈನಲ್ಲಿ ನಡೆದ ವಿಧಾನಸಭೆ ಕಲಾಪದಲ್ಲಿ ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ಆ ಸಂದರ್ಭದಲ್ಲಿ ಮುಖ್ಯಮಂತ್ರಿಯಾಗಿದ್ದ ನಾನು ರೈತರನ್ನು ಒಕ್ಕಲೆಬ್ಬಿಸಿ ಟೌನ್‌ಶಿಪ್ ಮಾಡುವ ಅಗತ್ಯವಿಲ್ಲವೆಂದು ಸ್ಪಷ್ಟಪಡಿಸಿ ಯೋಜನೆ ಸ್ಥಗಿತಗೊಳಿಸಲಾಗಿತ್ತು ಎಂದರು.



2025ರಲ್ಲಿ ಬಿಡದಿ ಟೌನ್‌ಶಿಪ್‌ಗೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿ 2026ರಲ್ಲಿ ಅಂತಿಮ ಅಧಿಸೂಚನೆಯನ್ನು ಕಾಂಗ್ರೆಸ್ ಸರ್ಕಾರ ಹೊರಡಿಸಿದೆ. ರೈತರ ಪರವಾಗಿ ಡಿನೋಟಿಫಿಕೇಷನ್ ಮಾಡಿದರೆ ಜೈಲಿಗೆ ಹೋಗ'ಬೇಕಾಗಿಲ್ಲ. ಯೋಜನೆಯನ್ನೇ ಕೈಬಿಟ್ಟು ರೈತರ ಹಿತ ಕಾಪಾಡಬಹುದೆಂದರು.

ಅತ್ಯಂತ ವೇಗವಾಗಿ ಸರ್ಕಾರದಲ್ಲಿ ಬಿಡದಿ ಟೌನ್‌ಶಿಪ್ ವಿಚಾರದ ಬೆಳವಣಿಗೆಗಳು ಆಗುತ್ತಿವೆ. ಈ ಟೌನ್‌ಶಿಪ್ ಪಿತಾಮಹ ಎಂದು ನನ್ನನ್ನು ಕರೆದಿದ್ದಾರೆ. ವಿಧಾನಸಭಾ ಕಲಾಪದಲ್ಲಿ ಕಾಂಗ್ರೆಸ್ ನಾಯಕರು ಟೌನ್‌ಶಿಪ್ ವಿರೋಧಿಸಿ ಮಾಡಿದ್ದ ಭಾಷಣದ ಪ್ರಮುಖ ಅಂಶಗಳನ್ನು ಉಲ್ಲೇಖಿಸಿದರು.

ಜೆಡಿಎಸ್-ಬಿಜೆಪಿ ಮೈತ್ರಿ ಸರ್ಕಾರ ಪತನವಾಗಿ ರಾಷ್ಟ್ರಪತಿ ಆಳ್ವಿಕೆ ಬಂದ ಸಂದರ್ಭದಲ್ಲಿ ಸ್ಥಗಿತವಾಗಿದ್ದ ಯೋಜನೆಗೆ ಚಾಲನೆ ನೀಡಲಾಗಿದೆ. 2009ರಲ್ಲಿದ್ದ ಬಿಜೆಪಿ ಸರ್ಕಾರ ಯೋಜನೆ ಸ್ಥಗಿತಗೊಳಿಸಲು ನಿರ್ಧರಿಸಿ ಡಿಎಲ್‌ಎಫ್ ಬಡ್ಡಿ ಸಹಿತ ಹಣ ನೀಡಿದೆ. ಅಲ್ಲಿಗೆ ಈ ಯೋಜನೆ ಮುಕ್ತಾಯಗೊಂಡಿತ್ತು.

2018ರಲ್ಲಿ ನಾನು 2ನೇ ಬಾರಿಗೆ ಮುಖ್ಯಮಂತ್ರಿಯಾಗಿದ್ದಾಗ ಯೋಜನೆ ಮುಂದುವರಿಸ ಬಹುದಿತ್ತು. ಆದರೆ, ಆ ಕಾರ್ಯ ಮಾಡಲಿಲ್ಲ. 20 ವರ್ಷಗಳ ನಂತರ ಕಾಂಗ್ರೆಸ್ ಈ ಯೋಜನೆಯನ್ನು ಕಾರ್ಯಗತಗೊಳಿಸಲು ಮುಂದಾಗಿದೆ ಎಂದು ಆರೋಪಿಸಿದರು.

ರೈತರ ಪರವಾಗಿ ಡಿನೋಟಿಫಿಕೇಷನ್ ಮಾಡಿ ಜೈಲಿಗೆ ಹೋಗುವುದಿಲ್ಲವೆಂದು ಮುಖ್ಯಮಂತ್ರಿ ಹೇಳುತ್ತಾರೆ. ಆದರೆ ರೀಡೂ

### ಪಲಾಯನ ಬಿಡಿ ಚರ್ಚೆಗೆ ಬನ್ನಿ

ಬಿಡದಿ ಟೌನ್‌ಶಿಪ್ ನಮಗೆ ಬೇಡ ಎಂದು ಒಂದೂವರೆ ವರ್ಷದಿಂದಲೂ ಹೋರಾಟ ಮಾಡುತ್ತಿರುವ ರೈತರನ್ನು ಭೇಟಿ ಮಾಡಲು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೇನು ಕಷ್ಟ. ಬಹಿರಂಗ ಚರ್ಚೆಗಾಗಿ ಯೋಜನಾ ಪ್ರದೇಶಕ್ಕೂ ಬರಲು ಹಿಂದೇಟು ಹಾಕುವ ಮೂಲಕ ಪಲಾಯನ ಮಾಡುತ್ತಿದ್ದಾರೆಂದು ಜೆಡಿಎಸ್ ಮಾಜಿ ಶಾಸಕ ಎ.ಮಂಜುನಾಥ್ ಅವರು ಆರೋಪಿಸಿದರು. ಯೋಜನೆ ಬೇಕೆಂದು ಕೆಲವರು ಟೌನ್‌ಶಿಪ್ ಪರವಾಗಿ ಧರಣಿ ಮಾಡುತ್ತಿದ್ದಾರೆ. ಯಾರೇನೇ ಮಾಡಿದರೂ ಬಹುಪಾಲು ರೈತರು ಭೂಮಿ ಕೊಡಲು ಸುತರಾಂ ಒಪ್ಪಿಲ್ಲ. ಹಾಗಾಗಿಯೇ ಸರ್ಕಾರ ರೈತರ ನಡುವೆ ಒಡಕು ಮೂಡಿಸಿ ಜಗಳ ತಂದಿಡಲು ಯೋಜನೆ ಪರವಾಗಿ ಧರಣಿ ಆರಂಭಿಸಿದೆ. ಹಾಗಿದ್ದರೆ, ಇಷ್ಟು ದಿನ ಏಕೆ ಸುಮ್ಮನಿದ್ದರು ಎಂದು ಪ್ರಶ್ನಿಸಿದರು.

ವಿಚಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರು ಜೈಲಿಗೆ ಹೋಗಿದ್ದಾರೆಯೇ ಎಂಬುದನ್ನು » ನಾಲ್ಕನೇ ಪುಟದಲ್ಲಿ

# ಅಡ್ಡ ಮತ: ವರದಿ ಸಲ್ಲಿಸಿದ ಸತ್ಯಶೋಧನಾ ಸಮಿತಿ

• ಪ್ರಜೋದಯ ವರದಿ

**ಬೆಂಗಳೂರು:** ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಪ್ರಕರಣದ ತನಿಖೆ ನಡೆಸಿದ ಪರಿಷತ್ ಸದಸ್ಯ ಸಿ.ಟಿ.ರವಿ ಅವರ ನೇತೃತ್ವದ ಸತ್ಯಶೋಧನಾ ಸಮಿತಿ ಶನಿವಾರ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ವರದಿ ಸಲ್ಲಿಸಿದೆ.

ಪರಿಷತ್ ಸದಸ್ಯ ಸಿ.ಟಿ.ರವಿ, ಶಾಸಕ ಮಹೇಶ್ ಟೆಂಗಿನಕಾಯಿ ಹಾಗು ಮಾಜಿ ಶಾಸಕ ಎನ್.ಮಹೇಶ್ ನೇತೃತ್ವದ ತ್ರಿಸದಸ್ಯ ಸಮಿತಿಯು ಆಂತರಿಕ ಸತ್ಯಶೋಧನೆ ನಡೆಸಿ, ಸಾಂದರ್ಭಿಕ ಸಾಕ್ಷಿ, ಶಂಕೆ, ಮೂಲಗಳಿಂದ ಸಂಗ್ರಹಿಸಿದ ಮಾಹಿತಿ ಹಾಗು ಅನುಮಾನ ಇದ್ದ ಶಾಸಕರಿಂದ ಪಡೆದ ಮಾಹಿತಿ ಆಧರಿಸಿ ವರದಿ ಸಿದ್ದಪಡಿಸಿದ್ದಾರೆ. ಈ ಮಧ್ಯಂತರ ವರದಿಯನ್ನು ಬಿಜೆಪಿ ಕಚೇರಿಯಲ್ಲಿ ಸಲ್ಲಿಕೆ ಮಾಡಿದ್ದು, ಬಳಿಕ ವಿಜಯೇಂದ್ರ ಹಾಗು ಸಿ.ಟಿ.ರವಿ ಇಬ್ಬರೂ ಪ್ರತ್ಯೇಕವಾಗಿ ಚರ್ಚೆ ನಡೆಸಿದ್ದಾರೆ. ನಾಲ್ಕು ದಿನ ಆಂತರಿಕ ತನಿಖೆ ನಡೆಸಿದ ಸಮಿ



ತಿಯು ಮೂರು ಪುಟಗಳ ವರದಿಯನ್ನು ಸೀಲ್ಡ್ ಕವರ್‌ನಲ್ಲಿ ಸಲ್ಲಿಸಿದೆ.

ಮೈತ್ರಿ ಪಕ್ಷಗಳಿಂದ 12 ಶಾಸಕರು ಅಡ್ಡ ಮತದಾನ ಮಾಡಿದ್ದಾರೆ. ಬಿಜೆಪಿಯಿಂದ 1 ಅಸಿಂಧು ಸೇರಿ ಒಟ್ಟು 4 ಅಡ್ಡಮತ ಆಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಅದರ ಹೊರತಾಗಿ ಉಳಿದ ಅಡ್ಡ ಮತಗಳು ಜೆಡಿಎಸ್‌ನಿಂದಾಗಿವೆ. ವರದಿಯಲ್ಲಿ ಅಡ್ಡ ಮತ ಚಲಾಯಿಸಿದ ಶಾಸಕರ ಹೆಸರು ಉಲ್ಲೇಖಿಸಿಲ್ಲ ಎನ್ನಲಾಗಿದ್ದು, ಅಡ್ಡ ಮತಗಳ ಸಂಖ್ಯೆ ಮಾತ್ರ ಉಲ್ಲೇಖಿಸಿದ್ದಾರೆ. ಸದ್ಯಕ್ಕೆ ಅನುಮಾನ ಇರುವ ಶಾಸಕರ ಮೇಲೆ ತೀವ್ರ ನಿಗಾ ಇಡುವಂತೆ ಸಮಿತಿ ಶಿಫಾರಸು ಮಾಡಿದೆ.

# ಕೆಂಪೇಗೌಡರ ದೂರದೃಷ್ಟಿ ಮಾದರಿ: ಕೆ.ಎಂ.ಶಿ.

• ಪ್ರಜೋದಯ ವರದಿ

**ಅರಸೀಕೆರೆ:** ನಾಡಪ್ರಭು ಕೆಂಪೇಗೌಡರ ದೂರದೃಷ್ಟಿಯ ಆಡಳಿತ, ಸಮಗ್ರ ನಗರ ಯೋಜನೆ ಹಾಗು ಜನಪರ ಚಿಂತನೆಯ ಫಲವಾಗಿ ಅಂದಿನ ಬೆಂದಕಾಳೂರು ಇಂದು ವಿಶ್ವಮಟ್ಟದಲ್ಲಿ ಗುರುತಿಸಿಕೊಂಡಿರುವ ಬೆಂಗಳೂರು ಮಹಾನಗರವಾಗಿ ಬೆಳೆದಿದೆ ಎಂದು ಗೃಹ ಮಂಡಳಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ ಅವರು ಹೇಳಿದರು.

ತಾಲ್ಲೂಕು ಕಚೇರಿ ಆವರಣದ ಕಂದಾಯ ಭವನ ಸಭಾಂಗಣದಲ್ಲಿ ನಡೆದ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಕೆಂಪೇಗೌಡರ ಕಾಲದ ಬೆಂಗಳೂರಿನ ಭೌಗೋಳಿಕ ವ್ಯಾಪ್ತಿ ಮತ್ತು ಇಂದಿನ ಬೃಹತ್ ಬೆಂಗಳೂರು ಮಹಾನಗರದ ವಿಸ್ತಾರವನ್ನು ಹೋಲಿಸಿದರೆ ಅವರ ದೂರದೃಷ್ಟಿಯ ನಗರ ನಿರ್ಮಾಣದ ಕಲ್ಪನೆ ಸ್ಪಷ್ಟವಾಗುತ್ತದೆ. ಕಾಲಕ್ರಮೇಣ ನಗರವು ವಿಸ್ತರಿಸಿ ಇಂದು 150 ಕಿ.ಮೀ. ವ್ಯಾಪ್ತಿಯ ಮಹಾನಗರವಾಗಿ ರೂಪುಗೊಂಡಿದ್ದು, ದೇಶದ ಪ್ರಮುಖ ಆರ್ಥಿಕ ಹಾಗೂ ಉದ್ಯೋಗ ಕೇಂದ್ರವಾಗಿ ಬೆಳೆದಿದೆ ಎಂದು ಹೇಳಿದರು.

ಬೆಂಗಳೂರು ಇಂದು ಕೋಲಾರ, ರಾಮನಗರ ಭಾಗಗಳವರೆಗೆ ವಿಸ್ತರಿಸಿದ್ದು, ಐಟಿ, ಕೈಗಾರಿಕೆ, ಶಿಕ್ಷಣ ಹಾಗು ಮೂಲಸೌಕರ್ಯ ಅಭಿವೃದ್ಧಿಯ ಮೂಲಕ ಅಂತಾರಾಷ್ಟ್ರೀಯ ಮಟ್ಟದಲ್ಲಿ ತನ್ನದೇ ಆದ ಸ್ಥಾನ ಗಳಿಸಿದೆ. ಬಿಡದಿ, ಕನಕಪುರ ಭಾಗಗಳವರೆಗೆ ಹೊಸ ಟೌನ್‌ಶಿಪ್‌ಗಳು, ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಂಗಣ ಸೇರಿ ಹಲವು ಮಹತ್ವಾಕಾಂಕ್ಷಿ ಯೋಜನೆಗಳು ರೂಪುಗೊಳ್ಳುತ್ತಿರುವುದು



ನಗರದ ಬೆಳವಣಿಗೆಗೆ ಸಾಕ್ಷಿಯಾಗಿದೆ ಎಂದರು.

ತಹಶೀಲ್ದಾರ್ ಎಂ.ಜೆ.ಸಂತೋಷ್ ಕುಮಾರ್ ಅವರು ಮಾತನಾಡಿ, 16ನೇ ಶತಮಾನದಲ್ಲೇ ವೃತ್ತಿ ಆಧಾರಿತ ನಗರ ವಿನ್ಯಾಸ ರೂಪಿಸಿದ ಕೆಂಪೇಗೌಡರ ದೂರದೃಷ್ಟಿ ವಿಶ್ವಮಟ್ಟದ ನಗರ ನಿರ್ಮಾಣಕ್ಕೆ ಭದ್ರ ಅಡಿಪಾಯವಾಗಿದೆ. ಅವರ ಜೀವನ, ಆಡಳಿತ ಹಾಗು ಕೊಡುಗೆಗಳ ಕುರಿತು ವಿದ್ಯಾರ್ಥಿಗಳು ಹೆಚ್ಚಿನ ಅಧ್ಯಯನ ನಡೆಸುವ ಅಗತ್ಯವಿದೆ ಎಂದು ಹೇಳಿದರು.

ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಗೀಜಿಹಳ್ಳಿ ಧರ್ಮಶೇಖರ್, ಒಕ್ಕಲಿಗರ ಸಂಘದ ಅಧ್ಯಕ್ಷ ಅನಂತಕುಮಾರ್, ಮುಖಂಡರಾದ ಹೊಸೂರು ಗಂಗಾಧರ್, ಜಿ.ಟಿ. ಗಣೇಶ್, ಮೇಲುಗಿರಿಗೌಡ, ಜಯರಾಂ, ಸುಜಾತ ರಮೇಶ್, ಹೇಮಂತ್ ಕುಮಾರ್, ಕಿರಣ್ ಕುಮಾರ್, ನಗರಸಭೆ ಪೌರಾಯುಕ್ತ ಹೆಚ್.ಟಿ. ಕೃಷ್ಣಮೂರ್ತಿ, ಬಿಇಒ ಮೋಹನ್ ಕುಮಾರ್, ಶಿರಸ್ತೇದಾರ್ ಶಿವಶಂಕರ್ ಉಪಸ್ಥಿತರಿದ್ದರು.

## ಅಪರೂಪದ ದೂರದೃಷ್ಟಿಯ ನಾಯಕ | ಶ್ರೀ ಶಂಭುನಾಥ ಸ್ವಾಮೀಜಿ ಬಣ್ಣನೆ

# ಕೆಂಪೇಗೌಡರ ನಗರಾಭಿವೃದ್ಧಿ ಪರಿಕಲ್ಪನೆ ಇಂದಿಗೂ ಜೀವಂತ

• ಪ್ರಜೋದಯ ವರದಿ

**ಹಾಸನ:** ನಾಡಪ್ರಭು ಕೆಂಪೇಗೌಡರು ಕೇವಲ ಕೋಟೆ ಕಟ್ಟಿದ ಆಡಳಿತಗಾರರಲ್ಲ, ಮುಂದಿನ ಶತಮಾನಗಳ ಬೆಳವಣಿಗೆ ಊಹಿಸಿದ ಅಪರೂಪದ ದೂರದೃಷ್ಟಿಯ ನಾಯಕರು. ಅವರು ರೂಪಿಸಿದ ಆಡಳಿತ ವ್ಯವಸ್ಥೆ, ನಗರಾಭಿವೃದ್ಧಿಯ ಪರಿಕಲ್ಪನೆ ಇಂದಿಗೂ ಜೀವಂತವಾಗಿದೆ ಎಂದು ಆದಿ ಚುಂಚನಗಿರಿ ಹಾಸನ ಶಾಖಾಮಠದ ಶ್ರೀ ಶಂಭುನಾಥ ಸ್ವಾಮೀಜಿ ಅವರು ಬಣ್ಣಿಸಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಜಿಲ್ಲಾ ಆಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾ ಒಕ್ಕಲಿಗರ ಸಂಘದಿಂದ ಶನಿವಾರ ಹಮ್ಮಿಕೊಂಡಿದ್ದ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಇತಿಹಾಸವನ್ನು ಅರಿತವನು ಮಾತ್ರ ಇತಿಹಾಸ ವನ್ನು ನಿರ್ಮಿಸಲು




### ಕೆಂಪೇಗೌಡರ ಪುತ್ಥಳಿ ನಿರ್ಮಾಣಕ್ಕೆ ಸಮಿತಿ

ನಗರದ ಹಳೆ ಬಸ್ ನಿಲ್ದಾಣದ ಮುಂಭಾಗ ನಾಡಪ್ರಭು ಕೆಂಪೇಗೌಡರ ಪುತ್ಥಳಿ ನಿರ್ಮಾಣಕ್ಕೆ ಈಗಾಗಲೇ ಶ್ರೀ ಶಂಭುನಾಥ ಸ್ವಾಮೀಜಿ ನೇತೃತ್ವದಲ್ಲಿ ಸಭೆ ನಡೆಸಲಾಗಿದೆ. ಪಕ್ಷಾತೀತ ಹಾಗು ಜಾತ್ಯಾತೀತವಾಗಿ ಎಲ್ಲಾ ಸಮಾಜದ ಮುಖಂಡರನ್ನು ಒಳಗೊಂಡ ಸಮಿತಿ ರಚಿಸಲಾಗುವುದು. ಪುತ್ಥಳಿಯ ನಿರ್ಮಾಣ ಕಾರ್ಯಕ್ಕೆ ಮುಂಗಡ ಹಣ ಪಾವತಿಸಲಾಗಿದೆದ್ದು, ಮುಂದಿನ ವರ್ಷದ ಕೆಂಪೇಗೌಡ ಜಯಂತಿಯಂದು ಪುತ್ಥಳಿಯನ್ನು ಅನಾವರಣಗೊಳಿಸಲಾಗುವುದೆಂದು ಶಾಸಕ ಹೆಚ್.ಪಿ.ಸ್ವರೂಪ್ ಎಂದು ತಿಳಿಸಿದರು.

> ಕೆಂಪೇಗೌಡರ ಆಡಳಿತ ಅಂದಿನ ಕಾಲದಲ್ಲಿ ಪ್ರತಿಯೊಬ್ಬರ ಮನೆ ಮಾತಾಗಿತ್ತು. ಅವರ ಸಾಧನೆ ಇಂದಿಗೂ ನಾವು ನೆನಪು ಮಾಡಿಕೊಳ್ಳುತ್ತಿದ್ದೇವೆ. ವಿಜಯನಗರ ಸಾಮ್ರಾಜ್ಯ ನೋಡಿ, ಬೆಂಗಳೂರು ನಿರ್ಮಾಣ ಮಾಡಿದರು, ಆದರಿಂದು ಬೆಂಗಳೂರು ವಿಶ್ವಪ್ರಸಿದ್ಧಿಯಾಗಿದೆ.
> - ಕೆ.ಎಸ್.ಲತಾ ಕುಮಾರಿ, ಜಿಲ್ಲಾಧಿಕಾರಿ

ಸಾಧ್ಯ. ಕೆಂಪೇಗೌಡರಂತಹ ಮಹನೀಯರ ಆದರ್ಶಗಳನ್ನು ಅಳವಡಿಸಿಕೊಂಡರೆ ಉತ್ತಮ ಸಮಾಜ ನಿರ್ಮಾಣ ಸಾಧ್ಯ ಎಂದರು.

ಬೆಂಗಳೂರು ಇಂದು ರಾಷ್ಟ್ರೀಯ ಹಾಗು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿರುವುದಕ್ಕೆ ಕೆಂಪೇಗೌಡರ ದೂರದೃಷ್ಟಿಯೇ ಮೂಲ ಕಾರಣ. ನಗರವನ್ನು ಸಮೃದ್ಧಗೊಳಿಸಲು ವಿವಿಧ ವೃತ್ತಿ, ಕುಲ ಕಸುಬಿನ ಜನರಿಗೆ ಪ್ರತ್ಯೇಕ ಪೇಟೆಗಳನ್ನು ನಿರ್ಮಿಸಿ ಉದ್ಯೋಗ ಮತ್ತು ವ್ಯಾಪಾರಕ್ಕೆ ಉತ್ತೇಜನ ನೀಡಿದರು. ಅದರಿಂದ ಬೆಂಗಳೂರು ಆರ್ಥಿಕವಾಗಿ ಬೆಳೆಯಿತು. ಅಂದಿನಲ್ಲಿಯೇ ಹಲವು ರಾಜರು, ಪಾಳೇಗಾರರು ಬೆಂಗಳೂರಿನ ಮೇಲೆ ಕಣ್ಣಿಟ್ಟಿದ್ದರು. ಇಂದಿಗೂ ರಾಜ್ಯದಲ್ಲೇ ಅತೀ ಹೆಚ್ಚು ಆದಾಯ ತರುವ ನಗರವಾಗಿ ಬೆಂಗಳೂರು ಉಳಿದಿರುವುದು ಅವರ ಆಡಳಿತ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ ಎಂದು ಹೇಳಿದರು.

ಎಲ್ಲಾ ಸಮಾಜವನ್ನು ಒಗ್ಗೂಡಿಸಿಕೊಂಡು ದೂರದೃಷ್ಟಿಯಿಂದ ಬೆಂಗಳೂರಿನಂತಹ ಮಹಾ ನಗರವನ್ನು ಕಟ್ಟಿದ ನಾಡಪ್ರಭು ಕೆಂಪೇಗೌಡರ ಆದರ್ಶ, ಆಡಳಿತ ವೈಖರಿ ಹಾಗು ಸಮಾಜ » ನಾಲ್ಕನೇ ಪುಟದಲ್ಲಿ

# ಜಿಲ್ಲಾ ನ್ಯಾಯಾಲಯಕ್ಕೆ ಮತ್ತೆ ಹುಸಿ ಬಾಂಬ್ ಕರೆ

• ಪ್ರಜೋದಯ ವರದಿ

**ಹಾಸನ:** ನಗರದ ಜಿಲ್ಲಾ ನ್ಯಾಯಾಲಯಕ್ಕೆ ಪುನಃ ಹುಸಿ ಬಾಂಬ್ ಕರೆ ಬಂದಿದೆ.

ಮೇ 24ರಂದು ಇ-ಮೇಲ್ ಮೂಲಕ ಸಂದೇಶ ರವಾನಿಸಿದ್ದ ಕಿಡಿಗೇಡಿಗಳು ಜೂ.26ರಂದು ಮತ್ತೊಂದು ಸಂದೇಶ ರವಾನಿಸಿದ್ದಾರೆ. ಕಳೆದ ನಾಲ್ಕು ತಿಂಗಳಲ್ಲಿ ಜಿಲ್ಲಾಧಿಕಾರಿ ಕಚೇರಿ, ಆಲೂರು ಜೆಎಂಎಫ್‌ಸಿ ನ್ಯಾಯಾಲಯ, ಜಿಲ್ಲಾ ನ್ಯಾಯಾಲಯ ಸೇರಿ ಒಟ್ಟು 6 ಬೆದರಿಕೆ ಸಂದೇಶಗಳು ಬಂದಿವೆ.

ಜೂ.26ರ ಬೆಳಿಗ್ಗೆ 4.51ಕ್ಕೆ spe r ctg g r jg rnk gak g gm ಎಂಬ ಇ-ಮೇಲ್ ಐಡಿಯಿಂದ ಸಂದೇಶ ಬಂದಿದೆ. ಜಿಲ್ಲಾ ನ್ಯಾಯಾಲಯದ ಮೂರು ರೆಕಾರ್ಡ್ ಕೊಠಡಿ, 2 ಇ-ಸೇವೆ ಕೇಂದ್ರದಲ್ಲಿ ಒಟ್ಟು 5 ಸಿಲಿಕಾನ್-ಡೈನಮೈಟ್ ಬಾಂಬ್‌ಗಳು ಜೂ.27ರ ಶನಿವಾರ ಮಧ್ಯಾಹ್ನ 2.20ಕ್ಕೆ ಸ್ಫೋಟಗೊಳ್ಳುವುದಾಗಿ ಹಾಗು ಸ್ಫೋಟಕಕ್ಕೂ ಮೊದಲು ನ್ಯಾಯಾಧೀಶರನ್ನು ಸ್ಥಳಾಂತರಿಸುವಂತೆ n h l p r i emt g ಗೆ ಬೆದರಿಕೆ ಸಂದೇಶ ಬಂದಿದೆ.

ಇ-ಮೇಲ್ ಸಂದೇಶ ಗಮನಿಸಿದ ಜಿಲ್ಲಾ ನ್ಯಾಯಾಲಯದ ಪ್ರಭಾರ ಮುಖ್ಯ ಆಡಳಿತಾಧಿಕಾರಿ ಡಿ.ವಸಂತ ಅವರು ನಗರ ಪೊಲೀಸರಿಗೆ ವಿಷಯ ತಿಳಿಸಿದರು.

ಶನಿವಾರ ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು ಬಾಂಬ್ ನಿಷ್ಕ್ರಿಯ ದಳದ ನೆರವಿನಿಂದ ತಪಾಸಣೆ ನಡೆಸಿದರು. ಪರಿಶೀಲನೆ ವೇಳೆ ಯಾವುದೇ ಸ್ಫೋಟಕ ವಸ್ತುಗಳು ಪತ್ತೆಯಾಗಿಲ್ಲ. ಅದು ಹುಸಿ ಬಾಂಬ್ ಕರೆ ಎಂಬುದು ಸ್ಪಷ್ಟವಾಗಿದೆ. ಶನಿವಾರ ನ್ಯಾಯಾಲಯ ರಜೆ ಹಿನ್ನಲೆಯಲ್ಲಿ ಅಧಿಕಾರಿ ವರ್ಗ, ಸಿಬ್ಬಂದಿ ಹಾಗು ಸಾರ್ವಜನಿಕರ ಓಡಾಟ ಕಡಿಮೆ ಇತ್ತು.

# ಶೆಟ್ಟಿಹಳ್ಳಿ ಚರ್ಚ್ ಬಳಿ ನೀರಿಗಿಳಿದರೆ ಕಾನೂನು ಕ್ರಮ

• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಶೆಟ್ಟಿಹಳ್ಳಿಯ ರೋಸರಿ ಚರ್ಚ್ ವೀಕ್ಷಣೆಗೆ ಬರುವ ಪ್ರವಾಸಿಗರು ನೀರಿಗಿಳಿಯದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ.

ಜೂ.16ರಂದುಚರ್ಚ್ ನೋಡಲು ಬಂದಿದ್ದ ಬೆಂಗಳೂರು ಮೂಲದ ಮೂವರು ಯುವಕರು ಆಟವಾಡಲು ನೀರಿಗಿಳಿದಾಗ ವಾಪಾಸ್ ಬರಲು ಸಾಧ್ಯವಾಗದೆ ಮೃತಪಟ್ಟಿದ್ದರು. ಈ ಅವಘಡದ ಬಳಿಕ ಎಚ್ಚೆತ್ತಿರುವ ಗೊರೂರು ಪೊಲೀಸರು ಹಾಗು ಶೆಟ್ಟಿಹಳ್ಳಿ ಗ್ರಾಮ ಪಂಚಾಯಿತಿ ಅಧಿಕಾರಿಗಳು ಪ್ರದೇಶದಲ್ಲಿ ಬ್ಯಾನರ್ ಅಳವಡಿಸಿದ್ದು ಸೂಚನೆ ಮೀರಿ ನೀರಿಗಿಳಿದರೆ ಕಾನೂನು ಕ್ರಮ ಜರುಗಿಸುವ ಎಚ್ಚರಿಕೆ ನೀಡಿದ್ದಾರೆ.

ಚರ್ಚ್ ಬಳಿ ನೀರಿಗಿಳಿದು ಆಟವಾಡಬಾರದು, ಸುಳಿ ಹಾಗು ಇಳಿಜಾರು ಇರು




ವುದರಿಂದ ಇದು ಅಪಾಯದ ಸ್ಥಳವಾಗಿದೆ.ನಿಯಮ ಉಲ್ಲಂಘಿಸಿದರೆ ಕಾನೂನು ಕ್ರಮ ಜರುಗಿಸಲಾಗುವುದೆಂದು ಬ್ಯಾನರ್‌ನಲ್ಲಿ ಪ್ರಕಟಿಸಲಾಗಿದೆ.

**ನಿತ್ಯ ಪ್ರವಾಸಿಗರ ದಂಡು**

ಐತಿಹಾಸಿಕ ರೋಸರಿ ಚರ್ಚ್ ವೀಕ್ಷಣೆಗೆ ನಿತ್ಯ ಪ್ರವಾಸಿಗರು ಬರುತ್ತಲೇ ಇದ್ದಾರೆ. ಹೇಮಾವತಿ ಜಲಾಶಯ ಹಿನ್ನೀರಿನಲ್ಲಿರುವ ಚರ್ಚ್‌ಗೆ 200 ವರ್ಷಗಳ ಇತಿಹಾಸವಿದೆ. ಅಣೆಕಟ್ಟೆಗೆ ನೀರು ಹೆಚ್ಚಾದಾಗ ಚರ್ಚ್ ಮುಳುಗಿದ ರೀತಿ ಆಕರ್ಷಕವಾಗಿ ಕಾಣಿಸುವುದರಿಂದ ಅದನ್ನು ಮುಳುಗುವ ಟೈಟಾನಿಕ್ ಎಂದು ಬಣ್ಣಿಸಲಾಗಿದೆ. ಹೀಗಾಗಿ ಸ್ಥಳೀಯರು ಮಾತ್ರವಲ್ಲದೆ ಹೊರ ಜಿಲ್ಲೆಗಳಿಂದಲೂ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಾರೆ. ಈ ಬಾರಿ ನೀರು ಕಡಿಮೆ ಇರುವುದರಿಂದ ಚರ್ಚ್‌ಬಳಿಗೆ ಹೋಗುವ ದುಸ್ಸಾಹಸವನ್ನು ಮಾಡುತ್ತಾರೆ. ಫೋಟೋ, ವಿಡಿಯೋಗಾಗಿ ಪ್ರವಾಸಿಗರು ಅಪಾಯಕ್ಕೆ ಆಹ್ವಾನ ನೀಡುತ್ತಿದ್ದಾರೆ. ಮತ್ತೊಂದು ಅನಾಹುತ ಸಂಭವಿಸಬಾರದೆಂದು ಸ್ಥಳೀಯ ಆಡಳಿತ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ.

# ಗಾಯಾಳು ನೆರವಿಗೆ ಬಾರದ ಕ್ರಷರ್ ಮಾಲೀಕ: ದೂರು ದಾಖಲು

• ಪ್ರಜೋದಯ ವರದಿ

**ಹೊಳೆನರಸೀಪುರ:** ಜಲ್ಲಿ ಕ್ರಷರ್‌ನಲ್ಲಿ ಕೆಲಸ ಮಾಡುತ್ತಿದ್ದಾಗ ಹಿಟಾಚಿ ಆಪರೇಟರ್ ಗಂಭೀರ ಗಾಯಗೊಂಡಿರುವ ಘಟನೆ ನಡೆದಿದ್ದು, ಕ್ರಷರ್ ಮಾಲೀಕ ವೈದ್ಯಕೀಯ ವೆಚ್ಚ ಭರಿಸದೆ ಗಾಯಾಳು ತೊಂದರೆಗೆ ಸಿಲುಕಿರುವುದು ತಿಳಿದುಬಂದಿದೆ. ತನಗೆ ನ್ಯಾಯ ದೊರಕಿಸಿಕೊಡ ಬೇಕೆಂದು ಅವರು ಪೊಲೀಸ್ ಠಾಣೆ ಮೆಟ್ಟಿಲೇರಿದ್ದಾರೆ.



ಮಾರಗೋಡನಹಳ್ಳಿ ಚಂದನ್ ಅವರ ಕೈ ಹಾಗು ಕಾಲಿನ ಪಾದಕ್ಕೆ ಏಟಾಗಿದೆ. ತಾಲ್ಲೂಕಿನ ಶ್ರೀಮಠದ ಕಾವಲ್ ಅರಣ್ಯ ಪ್ರದೇಶದ ಗುಂಜೇವು ಬಳಿಯ ದುರ್ಗಾ ಸ್ಟೋನ್ ಕ್ರಷರ್‌ನಲ್ಲಿ ಕೆಲಸ ಮಾಡುತ್ತಿದ್ದರು. ಅವಘಡದಲ್ಲಿ ತನ್ನ ಎಡಕೈ ಮತ್ತು ಕಾಲು ಕಳೆದುಕೊಂಡಿದ್ದಾರೆ. ಗಾಯಗೊಂಡ ಭಾಗವನ್ನು ವೈದ್ಯರು ಶಸ್ತ್ರ ಚಿಕಿತ್ಸೆ ಮಾಡಿ ಬೇರ್ಪಡಿಸಿದ್ದಾರೆ. ಕ್ರಷರ್‌ನಲ್ಲಿ ಜೂ.20 ರಂದು ಕೆಟ್ಟು ನಿಂತ ಹಿಟಾಚಿ ರಿಪೇರಿ ಮಾಡುವಾಗ ಬೆಲ್ಟ್ ತುಂಡಾಗಿ ಹಿಟಾಚಿ 2 ಟನ್ ತೂಕವಿದ್ದ ಬೂಮ್ ಕೈ ಮತ್ತು ಪಾದದ ಮೇಲೆ ಬಿದ್ದದ್ದೇ ಚಂದನ್ ಗಾಯಗೊಳ್ಳಲು ಕಾರಣವಾಗಿದೆ.

ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ನಂತರ ಚಂದನ್ ಚೇತರಿಸಿಕೊಂಡಿದ್ದಾನೆ. ಹೆಚ್ಚುವರಿ ಚಿಕಿತ್ಸೆ ಅಗತ್ಯ ಇದೆ. ಕ್ರಷರ್ ಮಾಲೀಕನ ಪುತ್ರನೇ ಹಾಸನದ ಚೈತನ್ಯ ಎನ್‌ಡಿಆರ್‌ಕೆ ಎಂಬ ಖಾಸಗಿ ಆಸ್ಪತ್ರೆಗೆ ಸೇರಿಸಿದ್ದಾನೆ. ಇದೀಗ ಮಾಲೀಕ ಚಿಕಿತ್ಸೆ ಕೊಡಿಸಲು ಮತ್ತು ಪರಿಹಾರ ನೀಡಲು ನಿರಾಕರಿಸಿದ್ದಾರೆ. ಅದರಿಂದ ಖಾಸಗಿ ಆಸ್ಪತ್ರೆಯವರು ಬಿಲ್ ಪಾವತಿಸಿದರೆ ಮುಂದಿನ ಚಿಕಿತ್ಸೆ ಎನ್ನುತ್ತಿದ್ದಾರೆ.

ಪ್ರಸ್ತುತ ನಮ್ಮ ಪರಿಸ್ಥಿತಿ ತ್ರಿಶಂಕು ಸ್ಥಿತಿಯಲ್ಲಿದೆ. ಚಿಕಿತ್ಸೆ ಕೊಡಿಸುವುದಾಗಿ ಕ್ರಷರ್ ಮಾಲೀಕರು ಹೇಳಿದ್ದರು.» ನಾಲ್ಕನೇ ಪುಟದಲ್ಲಿ

# ಹದಗೆಟ್ಟ ರಸ್ತೆ ವೀಕ್ಷಿಸಿದ ಶಾಸಕ ಮಂಜು

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಬಾಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹುಲಿಯಮ್ಮ ಬಡಾವಣೆ (ಗುಲಗಳಲೆ)ಯಲ್ಲಿ ಮೂಲಸೌಕರ್ಯಗಳ ಕೊರತೆ ಸೇರಿ ವಿವಿಧ ಸಮಸ್ಯೆಗಳ ಕುರಿತು ಶಾಸಕ ಸಿಮೆಂಟ್ ಮಂಜು ಅವರು ಪರಿಶೀಲನೆ ನಡೆಸಿದರು.

ಬಡಾವಣೆಗೆ ತೆರಳುವ ರಸ್ತೆ ಸಂಪೂರ್ಣ ಕೆಸರುಮಯವಾಗಿದ್ದು, ಅದೇ ರಸ್ತೆಯಲ್ಲಿ ಸಾಗಿ ರಸ್ತೆಯ ಅವ್ಯವಸ್ಥೆ ವೀಕ್ಷಣೆ ಮಾಡಿದ ಅವರು, ತುರ್ತಾಗಿ ರಸ್ತೆ ನಿರ್ಮಾಣಕ್ಕೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಮಳೆ ನೀರಿನಲ್ಲಿ ಮಣ್ಣಿನ ರಸ್ತೆ ಗುಂಡಿಬಿದ್ದು ಕೆಸರುಗದ್ದೆಯಾಗಿ ಮಾರ್ಪಟಿದೆ. ವಾಹನ ವಿರಲಿ ಜನರೇ ಸಂಚರಿಸಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ ಕೂಡಲೇ ಉತ್ತಮ ರಸ್ತೆ ನಿರ್ಮಾಣ ಮಾಡಿಕೊಡುವಂತೆ ಸ್ಥಳೀಯ ನಿವಾಸಿಗಳು ಶಾಸಕರನ್ನು ಒತ್ತಾಯಿಸಿದರು.

ಬಡಾವಣೆಯ ನಿವಾಸಿಗಳೊಂದಿಗೆ ಮಾತುಕತೆ ನಡೆಸಿದ ಶಾಸಕರು, ಜನರಿಂದ ಸಮಸ್ಯೆಗಳು ಮತ್ತು ಆಗಬೇಕಿರುವ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಮಾಹಿತಿ ಪಡೆದರು. ಹಲವು ವರ್ಷಗಳಿಂದ ಬಾಕಿ ಉಳಿದಿರುವ ಮೂಲಭೂತ ಸೌಲಭ್ಯಗಳನ್ನು ಒದಗಿಸುವಂತೆ ಗ್ರಾಮಸ್ಥರು ಮನವಿ ಸಲ್ಲಿಸಿದರು.

ಪರಿಶೀಲನೆ ವೇಳೆ ಬಡಾವಣೆಯ ರಸ್ತೆ, ಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ಲಭ್ಯತೆ ಹಾಗು ಸಾರ್ವಜನಿಕ ಸೌಲಭ್ಯಗಳ ಸ್ಥಿತಿಗತಿಯನ್ನು ಅಧಿಕಾರಿಗಳೊಂದಿಗೆ ಅವಲೋಕಿಸಿದ ಶಾಸಕರು, ಅಗತ್ಯ ಕಾಮಗಾರಿಗಳಿಗೆ ಆದ್ಯತೆ ನೀಡಿ ಹಂತ ಹಂತವಾಗಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಭರವಸೆ ನೀಡಿದರು.



ಈ ಸಂದರ್ಭದಲ್ಲಿ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಸಮಸ್ಯೆಗಳ ಕುರಿತು ಅಗತ್ಯ ಮಾಹಿತಿ ಸಂಗ್ರಹಿಸಿ, ಜನರಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರದ ವಿವಿಧ ಯೋಜನೆಗಳಡಿ ಅಗತ್ಯ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದ್ದಾರೆ.

ಗ್ರಾಮಸ್ಥರು ತಮ್ಮ ಸಮಸ್ಯೆಗಳನ್ನು ಆಲಿಸಿ ಸ್ಥಳ ಪರಿಶೀಲನೆ ನಡೆಸಿದ ಶಾಸಕರ ಕ್ರಮವನ್ನು ಸ್ವಾಗತಿಸಿದ್ದು, ಅಭಿವೃದ್ಧಿ ಕಾಮಗಾರಿಗಳು ಶೀಘ್ರ ಆರಂಭವಾಗುವ ನಿರೀಕ್ಷೆ ವ್ಯಕ್ತಪಡಿಸಿದ್ದಾರೆ. ಸ್ಥಳ ಪರಿಶೀಲನೆ ವೇಳೆ ಗ್ರಾಮ ಪಂಚಾಯಿತಿ ಮಾಜಿ ಸದಸ್ಯರು, ಸ್ಥಳೀಯ ಮುಖಂಡರು, ಗ್ರಾಮಸ್ಥರು ಉಪಸ್ಥಿತರಿದ್ದರು.

## ಹೆಚ್ಚುವರಿ ಕಟ್ಟಡ ನಿರ್ಮಾಣಕ್ಕೆ ಕ್ರಮ | ಪ್ರಾಣಿ ಪ್ರಿಯರ ಮನವಿಗೆ ಸರ್ಕಾರ ಸ್ಪಂದನೆ

# ಬೋರನಕೊಪ್ಪಲು ಗೋ ಶಾಲೆ ಅಭಿವೃದ್ಧಿಗೆ 1 ಕೋಟಿ ರೂ.


-ಮಲ್ಲಿಕಾರ್ಜುನ ಕೊಚ್ಚರಿಗಿ

• ಪ್ರಜೋದಯ ವರದಿ

**ಹಾಸನ:** ಗೋ ಸಾಕಾಣಿಕೆಗೆ ನೆರವಾಗಲಿ ಎಂಬ ಉದ್ದೇಶದಿಂದ ಅರಸೀಕೆರೆ ತಾಲ್ಲೂಕಿನ ಬೋರನಕೊಪ್ಪಲು ಗ್ರಾಮ ಹೊರವಲಯದಲ್ಲಿ ಕೈಗೊಂಡಿರುವ ಪುಣ್ಯಕೋಟಿ ಗೋ ಶಾಲೆಗೆ ರಾಜ್ಯ ಸರ್ಕಾರ 1 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದ್ದು ಬಾಕಿ ಕಾಮಗಾರಿಗೆ ವೇಗ ಸಿಗುವ ಆಶಾಭಾವ ಮೂಡಿದೆ.

ಗ್ರಾಮದ ಹೊರವಲಯದಲ್ಲಿನ 25 ಎಕರೆ ವಿಶಾಲ ಪ್ರದೇಶದಲ್ಲಿ ಕಳೆದ ಎಂಟು ವರ್ಷಗಳ ಹಿಂದೆ ಕಾಮಗಾರಿ ಕೈಗೊಳ್ಳಲಾಗಿತ್ತು. ಕಸಾಯಿಖಾನೆ ಸೇರುತ್ತಿದ್ದ ಎಳೆಗರು, ವಯಸ್ಸಾದ ಹೋರಿ, ಹಸುಗಳ ಹತ್ಯೆಗೆ ಕಡಿವಾಣ ಹಾಕಲು ಈ ಕ್ರಮ ನೆರವಾಗಲಿದೆ. ಸದ್ಯ ಇಲ್ಲಿ 150 ರಾಸುಗಳು ಇದ್ದು ನೂತನ ಕಟ್ಟಡ ಕಾಮಗಾರಿ ಪೂರ್ಣಗೊಂಡರೆ ಮತ್ತಷ್ಟು ರಾಸುಗಳಿಗೆ ಜಾಗ ದೊರೆಯಲಿದೆ.

ಗೋ ಪರಿವಾರ ಹಾಗು ಹಿಂದೂಪರ ಸಂಘಟನೆಗಳ ಮನವಿಗೆ ಹಿಂದಿನ ಬಿಜೆಪಿ ಸರ್ಕಾರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಕೆ.



ಗೋಪಾಲಯ್ಯ ಅವರು ಕಾಯಕಲ್ಪ ಕಲ್ಪಿಸಿದ್ದರು. ಸರ್ಕಾರದ ವತಿಯಿಂದ ಅಧಿಕೃತವಾಗಿ ಆರಂಭವಾದ ಜಾಗದಲ್ಲಿ ನೆರಳಿನ ಹೊದಿಕೆ (ಶೆಲ್ಟರ್) ವೈದ್ಯರು, ಮೇಲ್ವಿಚಾರಕರ ಕೊಠಡಿ, ದಾಸ್ತಾನು ಸಂಗ್ರಹ ಕೊಠಡಿ ನಿರ್ಮಾಣ, ಕುಡಿಯುವ ನೀರಿಗಾಗಿ ಕೊಳವೆ ಬಾವಿ ಸೇರಿ ಹಲವು ಅಭಿವೃದ್ಧಿ ಕಾರ್ಯಗಳು ನಿಯಮಿತವಾಗಿ ಪೂರ್ಣಗೊಂಡಿದ್ದವು. ಇದೀಗ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರ ಎರಡನೇ ಹಂತದಲ್ಲಿ ಒಂದು ಕೋಟಿ ರೂ. ಬಿಡುಗಡೆ ಮಾಡುವ ಮೂಲಕ ಗೋಶಾಲೆಗೆ ಬಲ ನೀಡಿರುವುದು ಗೋ ರಕ್ಷಕರಲ್ಲಿ ಸಂತಸ ತಂದಿದೆ. ಸುಸಜ್ಜಿತ ಪ್ರತ್ಯೇಕ ಶೆಲ್ಟರ್, ತಂತಿಬೇಲಿ, ಮೇವು ಬೆಳೆಯುವುದು, ಹೆಚ್ಚುವರಿ ಕೊಳವೆ ಬಾವಿ ಕೊರೆಯಿಸುವುದು ಮೊದಲ ಆದ್ಯತೆಯಾಗಿದೆ.

ಹೈನುಗಾರಿಕೆ ಗ್ರಾಮೀಣ ಭಾಗದ ಜನರ ಮುಖ್ಯ ಉಪಕಸುಬು. ಹಾಲಿಗೆ ತರುವ ಹಸುಗಳು ಗಂಡು ಕರುಗಳಿಗೆ ಜನ್ಮ ಕೊಟ್ಟರೆ ಕೂಡಲೇ ಅವುಗಳನ್ನು ಕಟುಕರಿಗೆ ಮಾರಾಟ ಮಾಡಲು ಮುಂದಾಗುತ್ತಿರುವವರ ಸಂಖ್ಯೆ ಹೆಚ್ಚಿದೆ. ಸರ್ಕಾರ ಗೋಶಾಲೆ ಆರಂಭಿಸಿದ್ದು ಇಂತಹ ಎಳೆಗರುಗಳಿಗೆ ಆಸರೆಯಾಗಿ ಗೋಶಾಲೆ ಮಾರ್ಪಟ್ಟಿದೆ. ಕನಿಷ್ಟ ಒಂದು ತಿಂಗಳು ಎಳೆಗರುಗಳು ಹಸುವಿನ ಹಾಲು ಕುಡಿಯಬೇಕು. ಇದು

> ಬೋರನಕೊಪ್ಪಲು ಗೋ ಶಾಲೆಯಲ್ಲಿ 150 ರಾಸುಗಳಿದ್ದು ಆರೋಗ್ಯ ರಕ್ಷಣೆಗೆ ಅಗತ್ಯ ಕ್ರಮ ವಹಿಸಲಾಗಿದೆ. ಎಳೆಗರುಗಳನ್ನು ತಂದು ಬಿಡುವ ಮೊದಲು ರೈತರು ಕನಿಷ್ಟ 20 ದಿನ ಆರೈಕೆ ಮಾಡಿದರೆ ಅನುಕೂಲವಾಗಲಿದೆ. ಗೋಶಾಲೆಯಲ್ಲಿ ಕುಡಿಯುವ ನೀರು, ನೆರಳಿನ ಹೊದಿಕೆ, ಮೇವು ಪೂರೈಕೆ ಸೇರಿ ಎಲ್ಲಾ ರೀತಿಯ ವ್ಯವಸ್ಥೆ ಮಾಡಲಾಗಿದೆ.
> -ಡಾ.ಭರತ್, ಗೋ ಶಾಲೆ ಪ್ರಭಾರ ವೈದ್ಯಾಧಿಕಾರಿ

> ಜಿಲ್ಲಾದ್ಯಂತ 5.61 ಲಕ್ಷ ರಾಸುಗಳಿವೆ. ಗೋ ಶಾಲೆಗಳ ಅಭಿವೃದ್ಧಿಗೆ ಸರ್ಕಾರ ನೆರವು ನೀಡುತ್ತಿದೆ. ಬೋರನಕೊಪ್ಪಲು ಶಾಲೆಗೆ 1 ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು ಹೆಚ್ಚುವರಿ ಶೆಲ್ಟರ್ ಸೇರಿ ಮತ್ತಿತರ ಕಾಮಗಾರಿ ಕೈಗೊಳ್ಳಲಾಗುವುದು.
> -ಬಿ.ಕೆ.ರಮೇಶ್, ಉಪನಿರ್ದೇಶಕ, ಪಶುಪಾಲನಾ ಇಲಾಖೆ

ಸಾಧ್ಯವಾಗದ ಹಿನ್ನಲೆಯಲ್ಲಿ ಅಧಿಕಾರಿಗಳು ಕೆಎಂಎಫ್ ನೆರವಿನೊಂದಿಗೆ ಡೇರಿ ಹಾಲುಣಿಸುವ ಕೆಲಸ ಮಾಡುತ್ತಿದ್ದಾರೆ.» ನಾಲ್ಕನೇ ಪುಟದಲ್ಲಿ

> ಭಾರತೀಯ ಹವಾಮಾನ ಇಲಾಖೆಯ ಪ್ರಕಾರ, ಕರ್ನಾಟಕದ ಕಾವೇರಿ ಜಲಾನಯನ ಪ್ರದೇಶದಲ್ಲಿ ಮುಂಗಾರು ಮಳೆ ಇನ್ನೂ ಪೂರ್ಣ ಪ್ರಮಾಣದಲ್ಲಿ ಚುರುಕುಗೊಂಡಿಲ್ಲ. ಪರಿಣಾಮವಾಗಿ ಕೃಷ್ಣರಾಜಸಾಗರ (ಕೆಆರ್ ಎಸ್), ಕಬಿನಿ, ಹೇಮಾವತಿ ಮತ್ತು ಹಾರಂಗಿ ಜಲಾಶಯಗಳಿಗೆ ನಿರೀಕ್ಷಿತ ಪ್ರಮಾಣದ ನೀರು ಹರಿದು ಬಂದಿಲ್ಲ. ಈ ಹಿನ್ನೆಲೆಯಲ್ಲಿ ಲಭ್ಯವಿರುವ ನೀರು ಕುಡಿಯುವ ಉದ್ದೇಶಕ್ಕೆ ಮಾತ್ರ ಸಾಕಾಗುವಷ್ಟು ಇದೆ ಎಂದು ಕರ್ನಾಟಕ ವಾದಿಸಿದೆ.

# ಕಾವೇರಿ ಸಂಕಟಕ್ಕೆ ಸಂಕಷ್ಟ ಸೂತ್ರವೇ ಮದ್ದು

ಜಲಜಾಗೃತಿ ಕಾವೇರಿ ಕೇವಲ ಒಂದು ನದಿಯಲ್ಲ; ಅದು ಎರಡು ರಾಜ್ಯಗಳ ಕೋಟ್ಯಂತರ ಜನರ ಜೀವನಾಡಿಯಾಗಿದೆ. ಕರ್ನಾಟಕ ಮತ್ತು ತಮಿಳುನಾಡು ಶತ್ರುಗಳಲ್ಲ. ಎರಡೂ ರಾಜ್ಯಗಳು ಒಂದೇ ನದಿಯ ಮೇಲೆ ಅವಲಂಬಿತವಾಗಿವೆ. ಆದ್ದರಿಂದ ಪರಿಹಾರವು ಘರ್ಷಣೆಯಲ್ಲಿ ಇಲ್ಲ; ಸಹಕಾರದಲ್ಲಿ, ವೈನಿಕ ನಿರ್ವಹಣೆಯಲ್ಲಿ ಮತ್ತು ಪಾರದರ್ಶಕತೆಯಲ್ಲಿ ಅಡಗಿದೆ.

ನವದೆಹಲಿದಲ್ಲಿ ಇತ್ತೀಚೆಗೆ ನಡೆದ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆಯು ಮತ್ತೊಮ್ಮೆ ಕಾವೇರಿ ನೀರಿನ ಹಂಚಿಕೆ ವಿವಾದವನ್ನು ಮುನ್ನೆಲೆಗೆ ತಂದಿದೆ. ಜುಲೈ ಅಂತ್ಯದೊಳಗೆ ಸುಮಾರು 40 ಟಿಎಂಸಿ ಅಡಿ ನೀರನ್ನು ಹರಿಸಬೇಕೆಂದು ತಮಿಳುನಾಡು ಒತ್ತಾಯಿಸುತ್ತಿದ್ದರೆ, ಕರ್ನಾಟಕವು ಮುಂಗಾರು ಮಳೆ ಕೊರತೆ ಮತ್ತು ಜಲಾಶಯಗಳಿಗೆ ಕಡಿಮೆ ಪ್ರಮಾಣದ ನೀರಿನ ಹರಿವಿನಿಂದಾಗಿ ಸಂಕಷ್ಟದ ಪರಿಸ್ಥಿತಿ ಉಂಟಾಗಿದೆ ಎಂದು ಪ್ರತಿಪಾದಿಸಿದೆ.

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ, ಕರ್ನಾಟಕದ ಕಾವೇರಿ ಜಲಾನಯನ ಪ್ರದೇಶದಲ್ಲಿ ಮುಂಗಾರು ಮಳೆ ಇನ್ನೂ ಪೂರ್ಣ ಪ್ರಮಾಣದಲ್ಲಿ ಚುರುಕುಗೊಂಡಿಲ್ಲ. ಪರಿಣಾಮವಾಗಿ ಕೃಷ್ಣರಾಜಸಾಗರ (ಕೆಆರ್ ಎಸ್), ಕಬಿನಿ, ಹೇಮಾವತಿ ಮತ್ತು ಹಾರಂಗಿ ಜಲಾಶಯಗಳಿಗೆ ನಿರೀಕ್ಷಿತ ಪ್ರಮಾಣದ ನೀರು ಹರಿದು ಬಂದಿಲ್ಲ. ಈ ಹಿನ್ನೆಲೆಯಲ್ಲಿ ಲಭ್ಯವಿರುವ ನೀರು ಕುಡಿಯುವ ಉದ್ದೇಶಕ್ಕೆ ಮಾತ್ರ ಸಾಕಾಗುವಷ್ಟು ಇದೆ ಎಂದು ಕರ್ನಾಟಕ ವಾದಿಸಿದೆ.

**ಈ ಪರಿಸ್ಥಿತಿಯಲ್ಲಿ ಒಂದು ಮಹತ್ವದ ಪ್ರಶ್ನೆ ಉದ್ಭವಿಸುತ್ತದೆ:** ಮಳೆ ಕೊರತೆ ಮತ್ತು ಕಡಿಮೆ ಜಲಾಶಯ ಸಂಗ್ರಹಣೆಯ ಸಂದರ್ಭದಲ್ಲಿ, ಜಾರಿಯಲ್ಲಿರುವ ಕಾನೂನು ಚೌಕಟ್ಟಿನಡಿ ಕರ್ನಾಟಕ ಹೇಗೆ ನಡೆದುಕೊಳ್ಳಬೇಕು? ಕಾವೇರಿ ನೀರಿನ ಹಂಚಿಕೆಯನ್ನು 2007ರ ಕಾವೇರಿ ನೀರು ವಿವಾದ ನ್ಯಾಯಮಂಡಳಿ ತೀರ್ಪು ಮತ್ತು 2018ರ ಫೆಬ್ರವರಿ 16ರಂದು ಸುಪ್ರೀಂ ಕೋರ್ಟ್ ನೀಡಿದ ತೀರ್ಪು ನಿಯಂತ್ರಿಸುತ್ತವೆ.

**ನ್ಯಾಯಮಂಡಳಿ ಮೂಲತಃ ನೀರನ್ನು ಈ ಕೆಳಗಿನಂತೆ ಹಂಚಿಕೆ ಮಾಡಿತ್ತು:**

**ತಮಿಳುನಾಡು – 419 ಟಿಎಂಸಿ ಅಡಿ**
**ಕರ್ನಾಟಕ – 270 ಟಿಎಂಸಿ ಅಡಿ**
**ಕೇರಳ – 30 ಟಿಎಂಸಿ ಅಡಿ**
**ಪುದುಚೇರಿ –7 ಟಿಎಂಸಿ ಅಡಿ**

**ನಂತರ ಸುಪ್ರೀಂ ಕೋರ್ಟ್ ಬೆಂಗಳೂರಿನ ಹೆಚ್ಚುತ್ತಿರುವ ಕುಡಿಯುವ ನೀರಿನ ಅಗತ್ಯವನ್ನು ಪರಿಗಣಿಸಿ ಕರ್ನಾಟಕಕ್ಕೆ ಹೆಚ್ಚುವರಿಯಾಗಿ 14.75 ಟಿಎಂಸಿ ಅಡಿ ನೀರನ್ನು ನೀಡಿತು.**

**ತಿದ್ದುಪಡಿ ನಂತರದ ಹಂಚಿಕೆ:**
**ಕರ್ನಾಟಕ – 284.75 ಟಿಎಂಸಿ ಅಡಿ**
**ತಮಿಳುನಾಡು – 404.25 ಟಿಎಂಸಿ ಅಡಿ**
**ಕೇರಳ – 30 ಟಿಎಂಸಿ ಅಡಿ**
**ಪುದುಚೇರಿ – 7 ಟಿಎಂಸಿ ಅಡಿ**

ಅದೇ ವೇಳೆ ಸುಪ್ರೀಂ ಕೋರ್ಟ್ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಮತ್ತು ಕಾವೇರಿ ನೀರು ನಿಯಂತ್ರಣ ಸಮಿತಿ ಸ್ಥಾಪಿಸಲು ಕೇಂದ್ರ ಸರಕಾರಕ್ಕೆ ನಿರ್ದೇಶನ ನೀಡಿತು. ಆದಾಗ್ಯೂ, ಇಂದಿಗೂ ಒಂದು ಮೂಲಭೂತ ಸಮಸ್ಯೆ ಬಗೆಹರಿದಿಲ್ಲ. ಸಾಮಾನ್ಯ ಮಳೆ ವರ್ಷಗಳಲ್ಲಿ ನೀರು ಹಂಚುವ ವಿಧಾನ ಸ್ಪಷ್ಟವಾಗಿದ್ದರೂ, ಬರ ಅಥವಾ ಮಳೆ ಕೊರತೆ ವರ್ಷಗಳಲ್ಲಿ ನೀರಿನ ಕೊರತೆಯನ್ನು ಯಾವ ಪ್ರಮಾಣದಲ್ಲಿ ಹಂಚಿಕೊಳ್ಳಬೇಕು ಎಂಬ ಸಂಕಷ್ಟ ಸೂತ್ರ ಇನ್ನೂ ಅಂತಿಮಗೊಂಡಿಲ್ಲ.

### ಕರ್ನಾಟಕದ ವಾದ

ಕರ್ನಾಟಕದ ವಾದವು ಭಾವನಾತ್ಮಕವಲ್ಲ, ವಾಸ್ತವಿಕ ಪರಿಸ್ಥಿತಿಯ ಮೇಲೆ ಆಧಾರಿತವಾಗಿದೆ. ಕರ್ನಾಟಕದ ನಾಲ್ಕು ಪ್ರಮುಖ ಜಲಾಶಯಗಳಾದ ಕೆಆರ್‌ಎಸ್, ಕಬಿನಿ, ಹೇಮಾವತಿ ಮತ್ತು ಹಾರಂಗಿಗಳು ಬೆಂಗಳೂರು, ಮೈಸೂರು, ಮಂಡ್ಯ ಸೇರಿದಂತೆ ಕೋಟ್ಯಂತರ ಜನರ ಕುಡಿಯುವ ನೀರಿನ ಅವಶ್ಯಕತೆಗಳನ್ನು ಪೂರೈಸುತ್ತವೆ. ಭಾರತೀಯ ಹವಾಮಾನ ಇಲಾಖೆಯ ವರದಿಗಳ ಪ್ರಕಾರ ಈ ವರ್ಷ ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆಯ ಪ್ರಮಾಣ ವಾಡಿಕೆಗಿಂತ ಕಡಿಮೆ ಇದೆ. ಪರಿಣಾಮವಾಗಿ ಜಲಾಶಯಗಳಿಗೆ ಹರಿದು ಬರುವ ನೀರಿನ ಪ್ರಮಾಣವೂ ಕಡಿಮೆಯಾಗಿದೆ.

ಜಲಾಶಯಗಳಲ್ಲಿ ಲಭ್ಯವಿರುವ ನೀರು ಮೊದಲು ಕುಡಿಯುವ ಉದ್ದೇಶಕ್ಕೆ ಮೀಸಲಾಗಿರಬೇಕು. ಬೆಂಗಳೂರು, ಮೈಸೂರು, ಮಂಡ್ಯ, ರಾಮನಗರ ಸೇರಿದಂತೆ ಲಕ್ಷಾಂತರ ಜನರ ಕುಡಿಯುವ ನೀರಿನ ಅವಶ್ಯಕತೆಗಳನ್ನು ಪೂರೈಸುವುದು ರಾಜ್ಯದ ಮೊದಲ ಕರ್ತವ್ಯವಾಗಿದೆ. ನೀರಿನ ನಿರ್ವಹಣೆಯ ವಿಶ್ವವ್ಯಾಪಿ ತತ್ವವೂ ಇದೇ. ಕುಡಿಯುವ ನೀರಿಗೆ ಕೃಷಿಗಿಂತಲೂ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ.

### ತಮಿಳುನಾಡಿನ ವಾದ

ಮತ್ತೊಂದೆಡೆ, ತಮಿಳುನಾಡು ನ್ಯಾಯಮಂಡಳಿ ತೀರ್ಪಿನ ಪ್ರಕಾರ ನಿಗದಿಪಡಿಸಿದ ಮಾಸಿಕ ನೀರಿನ ಹಂಚಿಕೆಯನ್ನು ಕರ್ನಾಟಕ ಪಾಲಿಸುತ್ತಿಲ್ಲ ಎಂದು ವಾದಿಸುತ್ತದೆ. ತಮಿಳುನಾಡಿನ ಕಾವೇರಿ ಡೆಲ್ಟಾ ಪ್ರದೇಶವು ಭಾರತದ ಪ್ರಮುಖ ಕೃಷಿ ವಲಯಗಳಲ್ಲಿ ಒಂದಾಗಿದೆ. ತಂಜಾವೂರು, ತಿರುವಾರೂರು, ನಾಗಪಟ್ಟಣಂ ಸೇರಿದಂತೆ ಹಲವು ಜಿಲ್ಲೆಗಳ ರೈತರು ಕಾವೇರಿ ನೀರಿನ ಮೇಲೆ ಅವಲಂಬಿತರಾಗಿದ್ದಾರೆ.

ತಮಿಳುನಾಡು ಸರಕಾರದ ವಾದದ ಪ್ರಕಾರ, ನ್ಯಾಯಮಂಡಳಿ ನಿಗದಿಪಡಿಸಿದ ಮಾಸಿಕ ಹಂಚಿಕೆಯ ಪ್ರಕಾರ ಜೂನ್ ಮತ್ತು ಜುಲೈ ತಿಂಗಳ ನೀರನ್ನು ಬಿಡುಗಡೆ ಮಾಡುವುದು ಕರ್ನಾಟಕದ ಕಾನೂನುಬದ್ಧ ಕರ್ತವ್ಯವಾಗಿದೆ. ಆದ್ದರಿಂದ ತಮಿಳುನಾಡಿನ ಬೇಡಿಕೆಯನ್ನು ಸಂಪೂರ್ಣವಾಗಿ ನಿರಾಕರಿಸುವುದು ಸಹ ಸರಿಯಲ್ಲ. ಆದ್ದರಿಂದ ತಮಿಳುನಾಡು ತನ್ನ ಕಾನೂನುಬದ್ಧ ಪಾಲಿನ ನೀರನ್ನು ಕೇಳುತ್ತಿರುವುದು ಅಸಹಜವಲ್ಲ.

ಪ್ರಸ್ತುತ ವಿವಾದವು ಒಂದು ಪ್ರಮುಖ ಕೊರತೆಯನ್ನು ಎತ್ತಿ ತೋರಿಸುತ್ತದೆ. ಮಳೆ ಕಡಿಮೆಯಾದಾಗ ನೀರಿನ ಕೊರತೆಯನ್ನು ಯಾವ ರಾಜ್ಯ ಎಷ್ಟು ಪ್ರಮಾಣದಲ್ಲಿ ಭರಿಸಬೇಕು ಎಂಬ ಸ್ಪಷ್ಟ ನಿಯಮವಿಲ್ಲ. ವೈಜ್ಞಾನಿಕ ಸಂಕಷ್ಟ ಸೂತ್ರದಲ್ಲಿ ಈ ಅಂಶಗಳನ್ನು ಪರಿಗಣಿಸಬೇಕು– ನಿಜವಾದ ಮಳೆಯ ಪ್ರಮಾಣ, ಜಲಾಶಯಗಳ ಸಂಗ್ರಹಣೆ, ನೀರಿನ ಹರಿವು, ಕುಡಿಯುವ ನೀರಿನ ಅಗತ್ಯ, ಬೆಳೆಗಳ ಸ್ಥಿತಿ, ಪರಿಸರದ ಅಗತ್ಯಗಳು. ಇಂತಹ ಸೂತ್ರವು ವಾರ್ಷಿಕ ವಿವಾದಗಳನ್ನು ಗಣನೀಯವಾಗಿ ಕಡಿಮೆ ಮಾಡಬಹುದು.

ಈಗ ಕರ್ನಾಟಕವು ದೃಢವಾಗಿಯೂ ಜವಾಬ್ದಾರಿಯುತವಾಗಿಯೂ ವಿವೇಕದಿಂದ ನಡೆದುಕೊಳ್ಳಬೇಕು, ಭಾವೋದ್ರೇಕದಿಂದಲ್ಲ. ಮೊದಲನೆಯದಾಗಿ, ಮಳೆಯ ಪ್ರಮಾಣ, ಜಲಾಶಯಗಳ ಸಂಗ್ರಹಣೆ, ನೀರಿನ ಹರಿವು ಮತ್ತು ಕುಡಿಯುವ ನೀರಿನ ಅಗತ್ಯಗಳ ಬಗ್ಗೆ ಸಂಪೂರ್ಣ ಮತ್ತು ಪಾರದರ್ಶಕ ಮಾಹಿತಿಯನ್ನು ಸಿಡಬ್ಲ್ಯೂಎಂಎ ಮುಂದೆ ಮಂಡಿಸಬೇಕು.

ಎರಡನೆಯದಾಗಿ, ಎಲ್ಲಾ ಜಲಾಶಯಗಳ ಮಾಹಿತಿಯನ್ನು ಸಾರ್ವಜನಿಕರಿಗೆ ನಿಯಮಿತವಾಗಿ ಪ್ರಕಟಿಸಬೇಕು. ಮೂರನೆಯದಾಗಿ, ಸಂಕಷ್ಟ ಸೂತ್ರವನ್ನು ಕಾನೂನುಬದ್ಧವಾಗಿ ರೂಪಿಸುವಂತೆ ಕೇಂದ್ರ ಸರಕಾರ ಮತ್ತು ಪ್ರಾಧಿಕಾರದ ಮೇಲೆ ಒತ್ತಡ ಹೇರಬೇಕು. ನಾಲ್ಕನೆಯದಾಗಿ, ನೆರೆ ರಾಜ್ಯದೊಂದಿಗೆ ವೈಮನಸ್ಸು ಹೆಚ್ಚಿಸುವಂತಹ ರಾಜಕೀಯ ಹೇಳಿಕೆಗಳನ್ನು ತಪ್ಪಿಸಬೇಕು.

ರೈತರಲ್ಲಿ ಆತಂಕ ಮತ್ತು ಪ್ರತಿಭಟನೆಗಳನ್ನು ತಪ್ಪಿಸುವುದು ಹೇಗೆ? ಕಾವೇರಿ ವಿವಾದಗಳು ಇತಿಹಾಸದಲ್ಲಿ ಅನೇಕ ಬಾರಿ ಪ್ರತಿಭಟನೆಗಳು ಮತ್ತು ಉದ್ವಿಗ್ನ ಪರಿಸ್ಥಿತಿಗಳಿಗೆ ಕಾರಣವಾಗಿವೆ. ಆದರೆ ವಾಸ್ತವದಲ್ಲಿ ಪ್ರತಿಭಟನೆಗಳು ಹೆಚ್ಚುವರಿ ಮಳೆಯನ್ನು ತರಲಾರವು. ಜಲಾಶಯಗಳಲ್ಲಿ ನೀರನ್ನು ಹೆಚ್ಚಿಸಲಾರವು. ಆದ್ದರಿಂದ ಸರಕಾರ ರೈತ ಸಂಘಟನೆಗಳು, ನೀರಾವರಿ ಬಳಕೆದಾರರ ಸಂಘಗಳು ಮತ್ತು ಕೃಷಿ ತಜ್ಞರೊಂದಿಗೆ ನಿರಂತರ ಸಂವಾದ ನಡೆಸಬೇಕು. ವಾಸ್ತವಾಂಶಗಳನ್ನು ರೈತರಿಗೆ ಸಮಯಕ್ಕೆ ಸರಿಯಾಗಿ ತಿಳಿಸಿದರೆ ಅನಗತ್ಯ ಆತಂಕವನ್ನು ತಪ್ಪಿಸಬಹುದು.

### ರೈತ ಕುಟುಂಬಗಳಿಗೆ ಮಾರ್ಗದರ್ಶನ

ಹವಾಮಾನ ಬದಲಾವಣೆಯ ಪರಿಣಾಮವಾಗಿ ನೀರಿನ ಕೊರತೆ ಸಾಮಾನ್ಯವಾಗುತ್ತಿರುವುದರಿಂದ ರೈತರು ದೀರ್ಘಕಾಲೀನ ಯೋಜನೆಗಳನ್ನು ಅಳವಡಿಸಿಕೊಳ್ಳಬೇಕು. ಬೆಳೆ ವೈವಿಧ್ಯೀಕರಣ, ಭತ್ತ ಮತ್ತು ಕಬ್ಬಿನಂತಹ ಹೆಚ್ಚಿನ ನೀರು ಬೇಡುವ ಬೆಳೆಗಳ ಜೊತೆಗೆ ರಾಗಿ, ಸಜ್ಜೆ, ಕಾಳುಗಳು ಮತ್ತು ಎಣ್ಣೆ ಬೀಜಗಳ ಬೆಳೆಗಳನ್ನು ಹೆಚ್ಚಿಸಬೇಕು.

ಹನಿ ಮತ್ತು ತುಂತುರು ನೀರಾವರಿ ವಿಧಾನಗಳು 30 ರಿಂದ 50 ಶೇಕಡಾವರೆಗೆ ನೀರನ್ನು ಉಳಿತಾಯ ಮಾಡಬಹುದು. ಮಳೆ ನೀರು ಸಂಗ್ರಹಣೆ ಆಗಬೇಕು. ಕೃಷಿ ಹೊಂಡಗಳು, ಚೆಕ್ ಡ್ಯಾಂಗಳು ಮತ್ತು ಭೂಗರ್ಭ ಜಲ ಮರುಪೂರಣ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸಬೇಕು. ಸಮುದಾಯ ಆಧಾರಿತ ನೀರಿನ ನಿರ್ವಹಣೆ, ಗ್ರಾಮ ಮಟ್ಟದಲ್ಲಿ ನೀರಿನ ಸಮರ್ಪಕ ಬಳಕೆ ಮತ್ತು ಹಂಚಿಕೆ ವ್ಯವಸ್ಥೆಯನ್ನು ರೂಪಿಸಬೇಕು. ಅನಿಶ್ಚಿತ ಮಳೆ ವರ್ಷಗಳಲ್ಲಿ ಅತಿಯಾದ ಸಾಲ ಪಡೆಯುವುದನ್ನು ತಪ್ಪಿಸಿ ವಾಸ್ತವಿಕ ಬೆಳೆ ಯೋಜನೆ ರೂಪಿಸಬೇಕು.

ಕಾವೇರಿ ವಿವಾದದ ಶಾಶ್ವತ ಪರಿಹಾರಕ್ಕಾಗಿ ಏನು ಮಾಡಬಹುದು? ಕಾಲುವೆಗಳ ಆಧುನೀಕರಣ, ಮಳೆನೀರು ಸಂಗ್ರಹಣೆ, ಶುದ್ಧೀಕರಿಸಿದ ತ್ಯಾಜ್ಯ ನೀರಿನ ಮರುಬಳಕೆ, ನೀರು ಉಳಿತಾಯ ಕೃಷಿ, ವೈನಿಕ ಜಲಾಶಯ ನಿರ್ವಹಣೆ ಇವುಗಳಿಗೆ ಆದ್ಯತೆ ನೀಡಬೇಕು. ಕಾವೇರಿ ಕೇವಲ ಒಂದು ನದಿಯಲ್ಲ; ಅದು ಎರಡು ರಾಜ್ಯಗಳ ಕೋಟ್ಯಂತರ ಜನರ ಜೀವನಾಡಿಯಾಗಿದೆ.

ಕರ್ನಾಟಕ ಮತ್ತು ತಮಿಳುನಾಡು ಶತ್ರುಗಳಲ್ಲ. ಎರಡೂ ರಾಜ್ಯಗಳು ಒಂದೇ ನದಿಯ ಮೇಲೆ ಅವಲಂಬಿತವಾಗಿವೆ. ಆದ್ದರಿಂದ ಪರಿಹಾರವು ಘರ್ಷಣೆಯಲ್ಲಿ ಇಲ್ಲ; ಸಹಕಾರದಲ್ಲಿ, ವೈಜ್ಞಾನಿಕ ನಿರ್ವಹಣೆ ಯಲ್ಲಿ ಮತ್ತು ಪಾರದರ್ಶಕತೆಯಲ್ಲಿ ಅಡಗಿದೆ.

ತಮಿಳುನಾಡಿನ 40 ಟಿಎಂಸಿ ಅಡಿ ನೀರಿನ ಬೇಡಿಕೆಯನ್ನು ಮಳೆಯ ಪ್ರಮಾಣ, ಜಲಾಶಯಗಳ ಸಂಗ್ರಹಣೆ, ಕಾನೂನು ಬದ್ಧ ಹಕ್ಕುಗಳು ಮತ್ತು ಮಾನವೀಯ ಅಗತ್ಯಗಳ ಬೆಳಕಿನಲ್ಲಿ ಪರಿಶೀಲಿಸಬೇಕು. ಮಳೆ ಕೊರತೆ ಮತ್ತು ಕಡಿಮೆ ನೀರಿನ ಸಂಗ್ರಹಣೆಯ ಬಗ್ಗೆ ಕರ್ನಾಟಕ ತನ್ನ ವಾದವನ್ನು ದೃಢವಾದ ಅಂಕಿ ಅಂಶಗಳೊಂದಿಗೆ ಮಂಡಿಸುವ ಹಕ್ಕು ಹೊಂದಿದೆ. ಅದೇ ಸಮಯದಲ್ಲಿ ಕಾವೇರಿ ಹಂಚಿಕೆಗೆ ಸಂಬಂಧಿಸಿದ ಸಂವಿಧಾನಾತ್ಮಕ ಮತ್ತು ಕಾನೂನು ಚೌಕಟ್ಟನ್ನು ಗೌರವಿಸುವ ಜವಾಬ್ದಾರಿಯೂ ಇದೆ.

ಘರ್ಷಣೆಯೂ ಬೇಡ, ಶರಣಾಗತಿಯೂ ಬೇಡ. ಪಾರದರ್ಶಕ ಮಾಹಿತಿ, ವೈಜ್ಞಾನಿಕ ವಿಶ್ಲೇಷಣೆ, ಕುಡಿಯುವ ನೀರಿನ ರಕ್ಷಣೆ, ರೈತರ ಹಿತಾಸಕ್ತಿ ಮತ್ತು ನೆರೆ ರಾಜ್ಯದೊಂದಿಗೆ ರಚನಾತ್ಮಕ ಸಂವಾದವೇ ಅತ್ಯುತ್ತಮ ಮಾರ್ಗ. ಕೊನೆಗೆ, ಸಮೃದ್ಧಿಯ ವರ್ಷಗಳಲ್ಲಿ ನೀರನ್ನು ಹಂಚಿಕೊಳ್ಳುವುದು ಸುಲಭ. ಆದರೆ ಕೊರತೆಯ ವರ್ಷಗಳಲ್ಲಿ ನ್ಯಾಯಯುತವಾಗಿ ಹಂಚಿಕೊಳ್ಳುವುದೇ ನಿಜವಾದ ಸವಾಲು. ಅದರ ಉತ್ತರವು ವೈಜ್ಞಾನಿಕ ಸಂಕಷ್ಟ ಸೂತ್ರ, ಉತ್ತಮ ನೀರಿನ ನಿರ್ವಹಣೆ ಮತ್ತು ಸಹಕಾರಾತ್ಮಕ ಫೆಡರಲಿಸಂನಲ್ಲಿ ಅಡಗಿದೆ.

**– ಕೆ.ವಿ.**ಚಂದ್ರಮೌಳಿ



# ಸುಯ್ಯ್ಂದು ಹಾಡುವ ಸೊಳ್ಳೆಯ ಸುದ್ದಿ


ಮಳೆಗಾಲವು ಹತ್ತಿರ ಬಂದ ಸೂಚನೆಯನ್ನು ಹೊತ್ತು ತಂದಿತ್ತು, ತಂಗಾಳಿ; ಥೇಟ್ ಎಲ್ಲೋ ಮಳೆಯಾಗಿದೆಯೆಂದೂ.. ತಂಗಾಳಿಯು ಹೇಳುತಿದೇ.. ಹಾಡಿನ ಅನುಭವ. ಇದನ್ನೇ ಮಾತಾಡುತ್ತಾ, ಗುನುಗುತ್ತಾ ಗಾಂಧಾರಿ ಮೆಣಸಿನಕಾಯನ್ನು ತೋಟದ ಒಂದು ಬದಿಯಲ್ಲಿ ಬೆಳೆದಿದ್ದ ಎರಡು ಹಳೆಯ ಗಿಡಗಳಿಂದ ಬಿಡಿಸುತ್ತಿದ್ದರು, ವಿಭಾ ಮತ್ತು ವರ್ಣ. ಕಾವ್ಯಳ ತಂಗಿ ವಿಭಾ ನಿಮಗೀಗಾಗಲೇ ಗೊತ್ತು. ಹೈಸ್ಕೂಲು ವಿದ್ಯಾರ್ಥಿನಿ ವಿಭಾ, ವಿಜ್ಞಾನದ ಬಗ್ಗೆ ಪರಿಸರದ ಬಗ್ಗೆ ಅಕ್ಕ ಕಾವ್ಯ, ಬಾವ ಪ್ರಕಾಶರೊಂದಿಗೆ ಚರ್ಚಿಸಲು ಸದಾ ಆಸಕ್ತಳಾಗಿರುವ ಚುರುಕು ಹುಡುಗಿ. ಕಾವ್ಯಳ ಮತ್ತೊಬ್ಬ ತಂಗಿ ವರ್ಣ ಮೈಸೂರಿನಿಂದ ಈ ಬಾರಿ ಬೇಸಿಗೆ ರಜೆಗೆ ಕಾವ್ಯಕ್ಕನ ಮನೆಗೆ ಬಂದಿದ್ದಳು. ವರ್ಷಪೂರ್ತಿ ಎಲ್ಲರೂ ಎದುರು ನೋಡುವ ಸಮಯವಿದು. ಮೂರು ಜನ ಅಕ್ಕ-ತಂಗಿಯರು, ಜೊತೆಗೆ ಪ್ರಕಾಶ್ ಬಾವ ಮತ್ತು ಅವರ ಮಗ ತುಂಟ ಸಮುದ್ರ, ಬೇಸಿಗೆ ರಜೆಯೆಂದರೆ ಇವರದ್ದೇ ಕಾರುಬಾರು. ವರ್ಣ ಕೂಡ ಹೈಸ್ಕೂಲು ವಿದ್ಯಾರ್ಥಿನಿಯೇ. ಅವಳಿಗೆ ಕೇಕ್ ಬೇಕ್ ಮಾಡೋದು, ಚಾರಣ, ಬೈಕುಗಳೆಂದರೆ ಪಂಚಪ್ರಾಣ.

ವರ್ಣ ಮತ್ತು ವಿಭಾ, ಕಾವ್ಯಕ್ಕನ ಮಾತಿನ ಮೇರೆಗೆ ಗಾಂಧಾರಿ ಮೆಣಸನ್ನು ಕೀಳುತ್ತಿದ್ದಾಗ, ಸೊಳ್ಳೆಗಳ ಹತ್ತಿರ ಕಚ್ಚಿಸಿಕೊಳ್ಳುತ್ತಾ ತಕ ಥೈ ಮಾಡುತ್ತಿದ್ದರು. ಆಗ ವರ್ಣ ವಿಭಾಳೆಡೆಗೆ ತಿರುಗಿ, ಅಲ್ಲ ವಿಭಕ್ಕ, ಈ ಸೊಳ್ಳೆಗಳಿಗೆ ನಮ್ಮ ಬ್ಲಡ್ ಗ್ರೂಪ್ ಗೊತ್ತಾಗತ್ತಂತೆ ಅಲ್ವಾ? ಓ+ ಬ್ಲಡ್ ಗ್ರೂಪ್ ಇದ್ದವರನ್ನೇ ಹೆಚ್ಚು ಕಚ್ಚತ್ತಂತೆ? ಎಂದಳು. ಆಗ ವಿಭಾ, ಹೂಂ ವರ್ಣ; ಕೆಲವೇ ಸಂಶೋಧನಾ ಪ್ರಬಂಧಗಳು ಹೀಗೆ ಹೇಳತ್ವೆ; ಆದ್ರೆ ಅವರ ಸ್ಯಾಂಪಲ್ ಸೈಝ್ ತುಂಬಾ ಕಡಿಮೆ. ಕೆಲವೇ ರಕ್ತದ ಸ್ಯಾಂಪಲ್‌ಗಳನ್ನ ತೊಗೊಂಡು ಪ್ರಯೋಗ ನಡೆಸಿದಾಗ, ಕೆಲವು ಫಲಿತಾಂಶಗಳು ಮಾತ್ರ ಇದನ್ನ ಪ್ರೂವ್ ಮಾಡಿವೆ; ಇದು ನಿಜಕ್ಕೂ ಫ್ಯಾಕ್ಟ್ ಅಂತ ಅಥವಾ ಸೊಳ್ಳೆಗಳಿಗೆ ಓ ಬ್ಲಡ್ ಗ್ರೂಪ್ ಇಷ್ಟ ಅಂತ ಖಡಾ ಖಂಡಿತವಾಗಿ ಹೇಳೋಕೆ ಇನ್ನೂ ಬಹಳಾ ಪ್ರಯೋಗಗಳು ನಡೀಬೇಕು ಎಂದಳು.

ಆಗ ವರ್ಣ, ಹಾಗಾದ್ರೆ, ಅದರ ವಿಷ್ಯನೂ ನಮ್ಮ ಗಾಂಧಾರಿ ಮೆಣಸಿನ ಹಾಗೆ ಎಂದಳು. ಅದಕ್ಕೆ ವಿಭಾ ಕೊಂಚ ಸಂದಿಗ್ದಗೊಂಡು, ಏನೋ ವರ್ಣ ಹಾಗಂದ್ರೆ? ಎಂದು ಕೇಳಿದಳು. ಆಗ ವರ್ಣ ನಗುತ್ತಾ ಅಂದ್ರೆ, ಸೊಳ್ಳೆಗಳಿಗೆ ಓ ಬ್ಲಡ್ ಗ್ರೂಪ್ ಇಷ್ಟ ಎನ್ನುವ ಜೊತೆಗೆ ಸಾಕಷ್ಟು ಮಾಹಿತಿ, ಮಿಥ್, ಫ್ಯಾಕ್ಟ್ ಎಲ್ಲಾ ಸೇರಿಕೊಳ್ಳುವ ಹಾಗೆ ನಮ್ಮ ಗಾಂಧಾರಿ ಮೆಣಸಿನಕಾಯಿಯ ಬಗ್ಗೆಯೂ ಅನೇಕ ಸತ್ಯ, ಸುಳ್ಳು, ಅರ್ಧಸತ್ಯಗಳು ಮಿಕ್ಸ್ ಆಗಿವೆ. ಈ ಪುಟಾಣಿ ಮೆಣಸಿನ ಕಾಯಿಗೆ ಬರ್ಡ್ಸ್ ಐ ಚಿಲ್ಲಿ ಅಂತಾರೆ ಕೂಡ. ಈ ಮೆಣಸಿನಕಾಯಿ ಗಿಡವನ್ನ ನಾವೇ ಬಿತ್ತಿ ಬೆಳೆಯೋಕಾಗಲ್ಲ, ಅವುಗಳನ್ನ ಪಕ್ಷಿಗಳು ತಿಂದು ಬೀಜವನ್ನು ತನ್ನ ಮಲದ ಜೊತೆ ಮಣ್ಣಿಗೆ ಹಾಕಿದಾಗ ಮಾತ್ರ ಚಿಗುರುತ್ತದೆ ಅಂತ ನಂಬಿಕೆ ಇದೆ. ಆದರೆ, ಅದು ಅರ್ಧ ಸತ್ಯ! ಎಂದು ವಿವರಿಸಿದಳು.

ಸೊಳ್ಳೆ ಕಾಟಕ್ಕೆ ತಮ್ಮ ತಕ ಥೈ ನೃತ್ಯವನ್ನು ಮುಂದುವರೆಸುತ್ತಾ ಈ ಪುಟ್ಟ ಅಕ್ಕ ತಂಗಿ ಜೋಡಿ ಮಾತಿನಲ್ಲಿ ಮುಳುಗಿದ್ದರು. ತನ್ನ ವಿವರಣೆಯನ್ನು ಮುಂದುವರೆಸುತ್ತಾ ನಾವೇ ಈ ಗಿಡವನ್ನು ಬೀಜ ಬಿತ್ತಿ ಬೆಳೀಬಹುದು ವಿಭಕ್ಕ! ಗಾಂಧಾರಿ ಮೆಣಸನ್ನ, ಅದರ ಹುಡಿಯನ್ನ ಮಾರೋಮ್ರು, ಪಕ್ಷಿಯೇ ಗಿಡ ಹಾಕ್ಲಿ ಅಂತ ಕಾಯ್ತಾರೆ ಅಂದುಕೊಂಡ್ಯಾ?

ಆದ್ರೆ, ಪಕ್ಷಿಗಳಿಗೆ ಈ ಮೆಣಸಿನಕಾಯಿ ಇಷ್ಟ; ಅವಕ್ಕೇನು ನಮ್ಮ ಹಾಗೆ ಇದನ್ನ ತಿಂದಾಗ ಖಾರ ಆಗಲ್ಲ; ಯಾಕಂದ್ರೆ ಮೆಣಸಿನ ಕಾಯಿಯಲ್ಲಿರೋ ಖಾರದ ಅನುಭವ ನೀಡೋ ಕ್ಯಾಪ್ಸೈಸಿನ್ ಅನ್ನೋ ಕೆಮಿಕಲ್‌ನ ಗುರುತಿಸೋಕೆ, ನಮ್ಮ ನಾಲಿಗೆಯಲ್ಲಿ ಇರುವ ಹಾಗೆ ಅವಕ್ಕೆ ರಿಸೆಪ್ಟರ್ ಅಂದ್ರೆ ಸಂವೇದಕಗಳು ಇರೋಲ್ಲ ಎಂದಳು.



ಆಗ ವಿಭಾ, ಹಾಗಿದ್ರೆ, ಪಕ್ಷಿಗಳು ಈ ಗಾಂಧಾರಿ ಮೆಣಸಿನಕಾಯಿಯನ್ನ ತಿನ್ನೋದ್ರಿಂದ ನಮಗೆ ಏನೂ ಪ್ರಯೋಜನ ಇಲ್ವಾ? ಎಂದಳು. ಆಗ ಅಲ್ಲಿಗೆ ಬಂದ ಪ್ರಕಾಶ್ ಬಾವ, ಇವರ ಮಾತನ್ನೇ ಆಲಿಸುತ್ತಾ ನಿಂತಿದ್ದು, ಉತ್ತರ ನೀಡೋಕೆ ದನಿಗೂಡಿಸಿದ. ವಿಭಾ, ವರ್ಣ ನಿಜಕ್ಕೂ ಒಳ್ಳೆ ಮಕ್ಕಪ್ಪ ನೀವಿಬ್ರೂ; ಈಗಿನ ಮಕ್ಕು ಉಪಯೋಗವಿಲ್ಲದ ಮೇಕಪ್, ಫ್ಯಾಶನ್, ಕೆ-ಪಾಪ್ ಅಂತ ಮಾತಾಡ್ತಾ ಇರ್ತಾರೆ. ನೀವು ಜಾಣರ ಹಾಗೆ ವಿಜ್ಞಾನ, ಫ್ಯಾಕ್ಟ್, ಮಿಥ್ ಅಂತ ಚರ್ಚೆ ಮಾಡ್ತಾ ಇದಿರಾ. ವೆರಿ ಗುಡ್. ಹಾಗಂತ ನಾನು ಮೇಕಪ್ ಬಗ್ಗೆ, ಕೆ ಪಾಪ್ ಸಂಗೀತದ ಬಗ್ಗೆ ತಿಳುವಳಿಕೆ ಇರಬಾರದು ಅಂತಾ ಇಲ್ಲ; ಎಲ್ಲಾ ವಿಷಯಗಳ ಬಗ್ಗೆ ತಿಳಿದುಕೊಂಡರೆ ತಪ್ಪೇನಿಲ್ಲ; ಆದ್ರೆ, ಮಕ್ಕು ಅದರಲ್ಲೇ ಮುಳುಗಿ, ಹುಚ್ಚು ಟ್ರೆಂಡ್ ಫಾಲೊ ಮಾಡ್ತಾರಲ್ಲ; ಅದು ಎಂಥ ಟೈಮ್ ಮತ್ತು ಎನರ್ಜಿಯ ವೇಸ್ಟೇಜ್ ಅನ್ನತ್ತೆ. ಎಂದ.

ಆಗ ವರ್ಣ, ನಿಜಾ ಬಾವ, ಆದ್ರೆ ಈ ಸೊಳ್ಳೆ ಕಚ್ಚಿಸ್ಕೊಂಡು ಡ್ಯಾನ್ಸ್ ಮಾಡ್ತಾ ಇದೀವಲ್ಲ, ಇದಕ್ಕೆ ನಿಜ್ವಾಗ್ಲೂ ಹೊಸ ಕೆ-ಪಾಪ್ ಹಾಡು ಸಖತ್ತಾಗಿ ಮ್ಯಾಚ್ ಆಗತ್ತೆ ಎಂದಳು ನಗುತ್ತಾ. ಆಗ ಕೆಲವು ನಿಮಿಷಗಳ ಮುನ್ನ ಈ ಗುಂಪನ್ನು ಸೇರಿಕೊಂಡಿದ್ದ ಕಾವ್ಯ ನಗುತ್ತಾ, ಅಲ್ಲ ವರ್ಣ! ಕೆ ಪಾಪ್ ಬಗ್ಗೆ ನಿನ್ನ ಮಾತಲ್ಲಿದ್ದಿದ್ದು ಸತ್ಯವಾ, ಸುಳ್ಳಾ, ಅರ್ಧಸತ್ಯವಾ ಪ್ರಕಾಶ್‌ಗೆ ಗೊತ್ತಾಗ್ಲಿಲ್ಲ ಅನ್ಸತ್ತೆ ಎಂದಳು ನಗಾಡುತ್ತಾ.

ಜೊತೆಗೆ ಪ್ರಕಾಶ್ ಕೂಡ ನಗುತ್ತಾ, ಅದೂ ನಿಜಾನೇ! ಅದಿರ್ಲಿ; ಈ ಪಕ್ಷಿಗಳು ಗಾಂಧಾರಿ ಮೆಣಸನ್ನು ತಿನ್ನತ್ವಲ್ಲಾ? ಅವು ಬೀಜವನ್ನೂ ಜೀರ್ಣಿಸಿಕೊಂಡುಬಿಟ್ರೆ, ಗಿಡದ ಪ್ರೊಪೊಗೇಶನ್ ಹೇಗಾಗತ್ತೆ? ಒಂದು ಕಡೆಯಿಂದ ಮತ್ತೊಂದು ಕಡೆಗೆ ಈ ಗಿಡ ಹಬ್ಬೋದು ಹೇಗೆ ಅಲ್ವಾ? ಅದಕ್ಕೇ ಗಿಡಗಳು ತಮ್ಮ ಬೀಜಗಳನ್ನ ಗಟ್ಟಿಯಾದ ಹೊರಕವಚದಿಂದ ಮಾಡಿರತ್ವೆ. ಅದನ್ನ ಸುಲಭವಾಗಿ ಯಾವ ಪ್ರಾಣಿಗಳೂ ಜೀರ್ಣಿಸಿಕೊಳ್ಳಲ್ಲ; ನಾವು ಕೂಡ ಹಣ್ಣಿನ ಜೊತೆ ಅಕಸ್ಮಾತ್ ಬೀಜವನ್ನೂ ನುಂಗಿದರೆ, ಮರುದಿನ ಅದು ಮಲದಲ್ಲಿ ಹೊರಗೆ ಬರತ್ತೆ. ಈ ಪಕ್ಷಿಗಳ ಹೊಟ್ಟೆಯಲ್ಲಿರೋ ಆಸಿಡ್, ಈ ಬೀಜಗಳ ಹೊರಕವಚವನ್ನ ಮೆತ್ತಗಾಗಿಸಿ ಹೊರಹಾಕತ್ತೆ; ಆಗ ಮಣ್ಣಿಗೆ ಬಿದ್ದಾಗ ಸುಲಭವಾಗಿ ಬೀಜ ಗಿಡವಾಗಿ ಚಿಗುರತ್ತೆ; ಜೊತೆಗೆ ಪಕ್ಷಿಯ ಮಲದ ಗೊಬ್ಬರ ಬೇರೇ ಇರತ್ತಲ್ಲಾ? ಇನ್ನೂ ಚೆನ್ನಾಗಿಯೇ ಬೆಳೆಯತ್ತೆ ಎಂದು ವಿವರಿಸಿದ.

ಹೀಗೇ ಎಲ್ಲರೂ ಮಾತಾಡುತ್ತಾ ಜೊತೆಯಾಗಿ ಮೆಣಸಿನಕಾಯನ್ನು ಬಿಡಿಸಿ ಮನೆಗೆ ಕೊಂಡೊಯ್ದರು. ಮನೆಗೆ ಹೋಗುವಷ್ಟರಲ್ಲಿ ಕಾವ್ಯಳ ಮೈಯೆಲ್ಲಾ ದದ್ದು ಎದ್ದಿತ್ತು; ಮೊದಲೇ ಸೊಳ್ಳೆಗಳನ್ನು ಹೆಚ್ಚು ಆಕರ್ಷಿಸುವ ಕಾವ್ಯಳಿಗೆ, ಕಾಡುಸೊಳ್ಳೆಗಳು ಕಚ್ಚಿದಾಗ ಹೆಚ್ಚೇ ಗುಳ್ಳೆಗಳು ಏಳುತ್ತವೆ, ತುರಿಕೆ, ಕಿರಿಕಿರಿ ಹೆಚ್ಚು; ಅವಳ ಅಪ್ಪನಿಗೂ ಹಾಗೇ. ಅವಳಮ್ಮ ಆಗಾಗ ಕೇಳುತ್ತಿದ್ದುದುಂಟು, ಅದೇಕೆ ನಿಮ್ಮಿಬ್ಬರಿಗೂ ಹೆಚ್ಚು ಸೊಳ್ಳೆ ಕಚ್ಚತ್ತೆ, ನಂಗೆ ಕಚ್ಚೋದೇ ಇಲ್ಲ ಅಂತ! ಆಗೆಲ್ಲಾ ಕಾವ್ಯ ಕೆಲವರು ಮಾತ್ರ ಹೆಚ್ಚು ಸೊಳ್ಳೆಗಳನ್ನು ಆಕರ್ಷಿಸುವುದಕ್ಕೆ ಕಾರಣಗಳನ್ನು ಅವಳಮ್ಮನಿಗೆ ವಿವರಿಸುತ್ತಿದ್ದಳು.

ಮನೆಗೆ ಬಂದು ಅದೇ ಯೊಚಿಸುತ್ತಾ, ಕೈಕಾಲಿಗೆಲ್ಲಾ ಕೊಬ್ಬರಿ ಎಣ್ಣೆ ಸವರಿಕೊಳ್ಳುತ್ತಿದ್ದ ಕಾವ್ಯಳಿಗೆ, ಹಿಂದಿನಿಂದ ಬಂದ ಮಗ ಸಮುದ್ರ ಸೊಳ್ಳೆ ಮ್ಯಾಗ್ನೆಟ್ ಎಂದು ಕೂಗಿ ಹೆದರಿಸಿದ! ಬೆಚ್ಚಿಬಿದ್ದ ಕಾವ್ಯ, ನಂತರ ಸುಧಾರಿಸಿಕೊಂಡು ನಗಾಡಿದಳು. ಆಗ ಉಳಿದವರೂ ಜೊತೆಗೂಡಿದರು. ಆಗ ವರ್ಣ, ಇದೇನು ಕಾವ್ಯಕ್ಕಾ? ಅಯ್ಯಪ್ಪಾ! ನಿನಗ್ಯಾಕೆ ಇಷ್ಟು ಸೊಳ್ಳೆ ಕಚ್ಚತ್ತೆ? ಎಂದು ಕೇಳಿದಳು.

ಆಗ ಕಾವ್ಯ ನಾನು ನಿಮ್ಮೆಲ್ಲರಿಗಿಂತಾ ಹೆಚ್ಚೇ ಶಾಖವನ್ನ ಹೊರಹಾಕ್ತೀನಿ ಅನ್ಸತ್ತೆ; ಜೊತೆಗೆ ನನ್ನ ಬೆವರಲ್ಲಿರುವ ಕೆಮಿಕಲ್ಸ್ ನಿಮ್ಮ ಬೆವರಲ್ಲಿರುವ ರಾಸಾಯನಿಕಗಳಿಗಿಂತ ಭಿನ್ನವಾಗಿರಬಹುದು. ನಾನು ಹೆಚ್ಚು ಕಾರ್ಬನ್ ಡೈ ಆಕ್ಸೈಡ್ ಹೊರಹಾಕ್ತಿರಬಹುದು ಅನ್ಸತ್ತೆ ಅಂತ ವಿವರಣೆ ಕೊಟ್ಟಳು.

ಆಗ ವಿಭಾ, ಈ ಪುಟಾಣಿ ಸೊಳ್ಳೆಗಳಿಗೆ ಅದೆಷ್ಟೇ ಕತ್ತಲಿದ್ರೂ, ನಾವೆಲ್ಲಿದೀವಿ ಅಂತ ಹೇಗೆ ಗೊತ್ತಾಗತ್ತೆ ಕಾವ್ಯಕ್ಕಾ? ಅಂತ ಕೇಳಿದಳು. ಆಗ ಕಾವ್ಯ ಅವುಗಳು, ನಾವು ಉಸಿರಾಡ್ತಾ ಹೊರಹಾಕೋ ಇಂಗಾಲದ ಡೈ ಆಕ್ಸೈಡನ್ನ ಗುರುತಿಸತ್ವೆ; ಆಗ ಅವಕ್ಕೆ ಇಲ್ಲೊಂದು ಸಸ್ತನಿ ಅಂದ್ರೆ ಮ್ಯಾಮಲ್ ಇದೆ ಅಂತ ಗೊತ್ತಾಗತ್ತೆ; ಆಮೇಲೆ ನಮ್ಮ ಬೆವರಿನ ವಿಶೇಷವಾದ ರಾಸಾಯನಿಕಗಳು, ಇಲ್ಲೊಬ್ಬ ಮನುಷ್ಯ ಇದ್ದಾನೆ/ಳೆ ಅಂತ ತಿಳ್ಸತ್ತೆ.

ಇನ್ನು ಅವುಗಳ ಮೂತೀಲಿ, ಆಂಟೆನಾದಲ್ಲಿ ಹೀಟ್ ಸೆನ್ಸರ್ಸ್ ಇರತ್ವೆ. ಒಂಥರಾ ಅತ್ಯಂತ ಚಿಕ್ಕ ಥರ್ಮಾಮೀಟರ್ ಥರಾ! ನಮ್ಮಿಂದ ಹೊರ ಬರ್ತಾ ಇರೋ ಶಾಖದಿಂದ ಅವಕ್ಕೆ ಎಕ್ಸಾಕ್ಟ್ ಆಗಿ ನಾವೆಲ್ಲಿದೀವಿ ಅಂತ ಗೊತ್ತಾಗಿ, ನಮ್ಮ ಮೇಲೆ ಈ ಸೊಳ್ಳೆ ಅನ್ನೋ ಪ್ಲೇನ್ ಲ್ಯಾಂಡ್ ಆಗತ್ತೆ. ಆಮೇಲೆ ಚೆನ್ನಾಗಿ ನಮ್ಮ ರಕ್ತ ಹೀರಿ, ಹೊಟ್ಟೆ ತುಂಬಿಸಿಕೊಳ್ಳತ್ವೆ! ಎಂದು ವಿವರಿಸಿದಳು.

ಇದನ್ನು ಕೇಳಿದ ಪ್ರಕಾಶ್, ತನ್ನ ಪುಟ್ಟ ನಾದಿನಿಯರನ್ನು ಗೋಳು ಹೊಯ್ದುಕೊಳ್ಳುವ ಸಲುವಾಗಿ ನಿಮಗೆ ಗೊತ್ತೇನ್ರೋ? ಎಲ್ಲಾ ಬಗೆಯ ಜೀವಿಗಳಲ್ಲೂ ಗಂಡುಗಳು ತುಂಬಾ ಪಾಪದವು. ಸೇಮ್ ನನ್ನ ಥರಾನೇ! ಸೊಳ್ಳೆಗಳಲ್ಲೂ ಅಷ್ಟೇ! ಅಂತ ನಾಟಕ ಮಾಡಿ ನಗಿಸಿದ. ಆಮೇಲೆ ಸೊಳ್ಳೆಗಳ ಬಗ್ಗೆ ವಿವರಿಸುತ್ತಾ ಆದ್ರೆ ಇದು ತಮಾಷೆಯಲ್ಲ! ಗಂಡು ಸೊಳ್ಳೆಗಳು ನಮ್ಮನ್ನು ಕಚ್ಚಲ್ಲ; ಅವು ಹೂವುಗಳ ಮಕರಂದದಂತಹ ಆಹಾರದ ಮೇಲೆ ಡಿಪೆಂಡ್ ಆಗಿರತ್ವೆ; ಹೆಣ್ಣು ಸೊಳ್ಳೆಗಳು ಪಾಪ, ಮೊಟ್ಟೆ ಇಡೋಕೆ, ಮರಿಗಳಿಗೆ ಶಕ್ತಿ ನೀಡೋಕೆ ನಮ್ಮ ರಕ್ತದಲ್ಲಿರುವ ಪ್ರೋಟೀನ್ ಮೇಲೆ ಅವಲಂಬಿತ. ಅದಕ್ಕಾಗಿ ಅವು ಕಚ್ಚಲೇಬೇಕು, ರಕ್ತ ಹೀರಲೇಬೇಕು, ನಮ್ಮ ಕೈಯಲ್ಲಿ ಸಿಕ್ಕಿ ಸಾಯಲೂ ಬೇಕು; ಆನ್ ಅ ಸೀರಿಯಸ್ ನೋಟ್, ಎಲ್ಲಾ ಪ್ರಭೇದಗಳಲ್ಲೂ ಸಾಮಾನ್ಯವಾಗಿ ಬಹಳ ಕಷ್ಟಪಡೋದು ಹೆಣ್ಣುಜೀವಿಯೇ. ಮನುಷ್ಯರಲ್ಲೂ. ಎಂದನು.

ಆಗ ಸಮುದ್ರ, ಅಪ್ಪಾ, ನನ್ನ ಸೈನ್ಸ್ ಅಸೈನ್ಮೆಂಟಲ್ಲಿ ಸೊಳ್ಳೆಗಳ ಬಗ್ಗೆ ಕೆಲವು ಇಂಟರೆಸ್ಟಿಂಗ್ ಫ್ಯಾಕ್ಟ್ಸ್ ಬರೆದಿದ್ದೆ. ಹೇಳ್ಲಾ? ಎಂದು ತನ್ನ ಪುಸ್ತಕ ತೊಗೊಂಡು ಬಂದು ಓದೋಕೆ ಪ್ರಾರಂಭಿಸಿದ. ಸೊಳ್ಳೆಗಳು ನಮ್ ಕಿವಿ ಹತ್ರ ಬಂದಾಗ ಸುಂಯ್ ಶಬ್ದ ಕೇಳತ್ತಲ್ಲ? ಅದು ಅವುಗಳ ಬಾಯಿಂದ ಬರೋ ಹಾಡಲ್ಲ; ಅವುಗಳ ರೆಕ್ಕೆ ಬಡಿಯೋದ್ರಿಂದ ಉಂಟಾಗೋ ಶಬ್ದ. ಅವು ಎಷ್ಟು ಫಾಸ್ಟಾಗಿ ಹಾರತ್ವೆ ಗೊತ್ತಾ? 1–2.5 ಕಿಲೋಮೀಟರ್ ಪರ್ ಅವರ್ ಸ್ಪೀಡ್! ಅಂದ್ರೆ ಒಂದು ಸೆಕೆಂಡಲ್ಲಿ 250ರಿಂದ 700 ಸಲ ರೆಕ್ಕೆ ಬಡಿಯತ್ವೆ! ಅದಕ್ಕೇ ಹಾಗೆ ಶಬ್ದ ಬರತ್ತೆ. ಎಂದ ತಾನೂ ಏನೋ ಒಂದು ಮುಖ್ಯವಾದ ಮಾಹಿತಿಯನ್ನು ಹಂಚಿಕೊಂಡಂತಹ ಹೆಮ್ಮೆಯಿಂದ.

ಇದನ್ನರಿತ ಕಾವ್ಯ, ಮಗನ ಬೆನ್ನು ತಟ್ಟಿ ಜಾಣಮರಿ. ಸೊಳ್ಳೆಗಳ ಬಗ್ಗೆ ಇನ್ನ್ಯಾವ ಫ್ಯಾಕ್ಟ್ ಬರೆದಿದ್ದಿಯ ಕಂದ? ಎಂದು ಕೇಳಿದಳು. ಆಗ ಸಮುದ್ರ, ಇನ್ನೂ ಎಷ್ಟೊಂದು ಇದೆ ಅಮ್ಮಾ. ನಿಮ್ಗೆ ಗೊತ್ತಾ? ಸೊಳ್ಳೆಗಳು ಭೂಮಿಗೇನು ನೆನ್ನೆ, ಮೊನ್ನೆ ಬಂದಿದ್ದಲ್ಲ; ಅವು ಡೈನೋಸಾರ್ ಇದ್ದ ಕಾಲದಲ್ಲೇ ಇದ್ವಂತೆ. ಅದಕ್ಕೆ ಒಂದು ಹಳೆಯ ಮರದ ರಾಳದಲ್ಲಿ ಪಳೆಯುಳಿಕೆಯಾಗಿ ಸಿಕ್ಕಿಹಾಕಿಕೊಂಡ ಒಂದು ಸೊಳ್ಳೆಯೇ ಸಾಕ್ಷಿ. ಅದನ್ನ ಸ್ಟಡಿ ಮಾಡಿದ ಮೇಲೆ ಸೈಂಟಿಸ್ಟ್ ಇದನ್ನ ಸಾಬೀತು ಪಡ್ಸಿದಾರೆ. ಮತ್ತೆ ಇನ್ನೊಂದು ವಿಷ್ಯ, ಸೊಳ್ಳೆಗಳನ್ನ ಡೇಂಜರಸ್ ಜೀವಿಗಳ ಲಿಸ್ಟಲ್ಲಿ ಸೇರಿಸ್ತಾರೆ ಗೊತ್ತಾ? ಎಂದು ಕೇಳಿದ.

ಇದಕ್ಕೆ ವರ್ಣಾ, ಹೇ ಹೋಗೋ! ಇದ್ಯಾವ ಡೇಂಜರಸ್ ಜೀವಿ? ಚಟ್ ಅಂತ ಚಪ್ಪಾಳೆ ಹೊಡೆದ್ರೆ ಫಟ್ ಅಂತ ಸತ್ತು ಬೀಳತ್ತೆ ಎಂದು ನಗಾಡಿದಳು. ಇದಕ್ಕೆ ವಿಭಾಳೂ ನಗುತ್ತಾ, ಹೇ ಪಾಪ, ನಮ್ ಸಮುದ್ರ ಹೇಳಿದ್ದು ಹಂಗಲ್ಲ ಕಣೇ; ಅದು ನೇರವಾಗಿ ಹುಲಿಯಂತೆಯೋ, ಚಿರತೆಯಂತೆಯೋ, ಆನೆಯಂತೆಯೋ ಅಪಾಯ ಮಾಡಲ್ಲ, ಸರೀ. ಆದ್ರೆ, ಮಲೇರಿಯಾ, ಡೇಂಗೀ, ಚಿಕುನ್ ಗುನ್ಯಾ ತರಹ ಮಾರಣಾಂತಿಕ ರೋಗಗಳಿಗೆ ಕಾರಣವಾಗತ್ತೆ; ಈ ಕಾಯಿಲೆ ಬಂದಾಗ ತಕ್ಷಣ ಚಿಕಿತ್ಸೆ ಸಿಕ್ಕರೆ ಸರಿ; ಇಲ್ಲದಿದ್ದರೆ ಪ್ರಾಣಕ್ಕೆ ತೊಂದರೆಯಾಗಿರೋ ಎಷ್ಟೋ ಕೇಸ್ ನೋಡಿರ್ತೀವಿ, ಕೇಳಿರ್ತೀವಿ ಅಲ್ವಾ? ಕರೆಕ್ಟಾ ಸಮುದ್ರ? ಎಂದಳು.

ವಿಭಾ ಚಿಕ್ಕಿಯ ಮಾತಿಗೆ ತಲೆದೂಗುತ್ತಾ ಸಮುದ್ರ 100% ಕರೆಕ್ಟ್! ಈ ಸೊಳ್ಳೆಗಳು ಬಹಳ ಇಂಟರೆಸ್ಟಿಂಗ್ ಅಲ್ವಾ? ಇನ್ನೂ ಒಂದಷ್ಟು ಮಾಹಿತಿ ಹುಡುಕಿ ಬರೀಬೇಕು. ಇದು ನನ್ನ ಸಮ್ಮರ್ ಹಾಲಿಡೇಸ್ ಹೋಮ್ವರ್ಕ್. ಇನ್ನೂ ಮುಗಿಸೋಕೆ ತುಂಬಾ ಟೈಮಿದೆ ಅಂತ ಎತ್ತಿಟ್ಟ. ಆಗ ವರ್ಣ ಟೈಮ್ ಅಂದಿದ್ದೇ ನೆನಪಾಯ್ತು! ಈಗ ಸ್ನ್ಯಾಕ್ಸ್ ಟೈಮ್ ಅಲ್ವಾ? ಕಾವ್ಯಕ್ಕಾ, ಏನಾದ್ರೂ ತಿನ್ಬೇಕು ಅ ಇದೆ.

ಪಾನಿಪೂರಿ ಮಾಡೋಣ್ವಾ? ಅಂತ ಎದ್ದಳು. ಮನೆಯಲ್ಲಿ ಎಲ್ಲರಿಗೂ ಪಾನಿಪೂರಿ ಪಂಚಪ್ರಾಣ. ನಾನು ಹಿಟ್ಟು ಕಲ್ಸ್ತೀನಿ, ನಾನು ಪೂರಿ ಮಾಡ್ತೀನಿ, ನಾನು ಈರುಳ್ಳಿ ಹೆಚ್ತೀನಿ ನಾನು ಟೇಸ್ಟೀ ಪಾನೀ ಮಾಡ್ತೀನಿ ಅಂತ ಎಲ್ರೂ ಕೆಲಸ ಹಂಚಿಕೊಂಡು ಪಾನಿಪೂರಿ ಪಾರ್ಟಿಗೆ ರೆಡಿಯಾದ್ರು. ಪಾನಿಪೂರಿ ತಿನ್ನುತ್ತಾ ಏನು ಮಾತಾಡಿದರು ಗೊತ್ತೇ? ಅವರು ನಿಧಾನವಾಗಿ ಪಾನಿಪೂರಿ ಎಂಜಾಯ್ ಮಾಡಲಿ; ನಾವೆಲ್ಲಾ ಅವರ ಮಾತನ್ನು ಮುಂದಿನ ಸಂಚಿಕೆಯಲ್ಲಿ ಓದೋಣವಂತೆ. ಏನಂತೀರಿ?

**– ಕ್ಷಮಾ ವಿ.** ಭಾನುಪ್ರಕಾಶ್

> » ಪ್ರಕಾಶ್, ತನ್ನ ಪುಟ್ಟ ನಾದಿನಿಯರನ್ನು ಗೋಳು ಹೊಯ್ದುಕೊಳ್ಳುವ ಸಲುವಾಗಿ ನಿಮಗೆ ಗೊತ್ತೇನ್ರೋ? ಎಲ್ಲಾ ಬಗೆಯ ಜೀವಿಗಳಲ್ಲೂ ಗಂಡುಗಳು ತುಂಬಾ ಪಾಪದವು. ಸೇಮ್ ನನ್ನ ಥರಾನೇ! ಸೊಳ್ಳೆಗಳಲ್ಲೂ ಅಷ್ಟೇ! ಅಂತ ನಾಟಕ ಮಾಡಿ ನಗಿಸಿದ. ಆಮೇಲೆ ಸೊಳ್ಳೆಗಳ ಬಗ್ಗೆ ವಿವರಿಸುತ್ತಾ ಆದ್ರೆ ಇದು ತಮಾಷೆಯಲ್ಲ! ಗಂಡು ಸೊಳ್ಳೆಗಳು ನಮ್ಮನ್ನು ಕಚ್ಚಲ್ಲ; ಅವು ಹೂವುಗಳ ಮಕರಂದದಂತಹ ಆಹಾರದ ಮೇಲೆ ಡಿಪೆಂಡ್ ಆಗಿರತ್ವೆ; ಹೆಣ್ಣು ಸೊಳ್ಳೆಗಳು ಪಾಪ, ಮೊಟ್ಟೆ ಇಡೋಕೆ, ಮರಿಗಳಿಗೆ ಶಕ್ತಿ ನೀಡೋಕೆ ನಮ್ಮ ರಕ್ತದಲ್ಲಿರುವ ಪ್ರೋಟೀನ್ ಮೇಲೆ ಅವಲಂಬಿತ. ಅದಕ್ಕಾಗಿ ಅವು ಕಚ್ಚಲೇಬೇಕು, ರಕ್ತ ಹೀರಲೇಬೇಕು, ನಮ್ಮ ಕೈಯಲ್ಲಿ ಸಿಕ್ಕಿ ಸಾಯಲೂ ಬೇಕು



# ಈ ಜಗತ್ತಿನಲ್ಲಿ ಸತ್ಯ ಗೋಚರಿಸುವುದಿಲ್ಲ....!

ದಾರಿ ದೀಪ:

ಅವಳು....! ಅವಳು.....! ಕೇವಲ ನನ್ನ ಗೆಳತಿ... ಪ್ರಾಣಸಖಿ ಮಾತ್ರವಾಗಿರಲಿಲ್ಲ....! ಆ ಪ್ರಿಯಾ ನನ್ನ ದಾರಿ ದೀಪ ಸಹ ಆಗಿದ್ದಳು....! ದಾರಿ ತಪ್ಪಿ ಹೆಜ್ಜೆ ಹಾಕುವ ವೇಳೆ ಎಲ್ಲಾ ಎಚ್ಚರಿಕೆಯ ಗಂಟೆ ಬಾರಿಸಿ ನನ್ನನ್ನು ಎಚ್ಚರಿಸುತ್ತಿದ್ದಳು..! ಹೆಚ್ಚಿನ ಮಾತುಕತೆ ಇಲ್ಲಾದೇ ಇದ್ದರೂ, ಮೋರಿ ಕಟ್ಟೆಯ ಮೇಲೆ ಕುಳಿತುಕೊಂಡ ವೇಳೆ, ನನ್ನ ಮುಖ ನೋಡಿ ಹೇಳುತ್ತಿದ್ದ ಎಲ್ಲಾ ಭವಿಷ್ಯಗಳು ಸತ್ಯವಾಗುತ್ತಿತ್ತು...! ಆದರೂ ನಾನು ಅವಳನ್ನು ನಂಬಲಿಲ್ಲ...! ನಾನು ನನ್ನ ಲೋಕದಲ್ಲಿಯೇ ಮುಳುಗಿ ಬಿಟ್ಟೆ....!!

ದಿನ... ವಾರ... ತಿಂಗಳು.... ವರ್ಷ... ಎಂದು ಸಮಯ ಸಾಗಿದ್ದು ನನಗೆ ತಿಳಿಯಲೇ ಇಲ್ಲ...! ಏಕೆಂದರೆ ನಾನು ಗಂಟೆ ನೋಡಿ ಕೆಲಸ ಮಾಡುವ ವ್ಯಕ್ತಿವಾಗಿರುವುದಿಲ್ಲ...! ಕೆಲಸ ಮುಗಿಸಿ ಗಂಟೆ ನೋಡುವ ಪಾಳು ಜನ್ಮ....! ಕಾಲಿಗೆ ಹಾಕಿಕೊಂಡಿರುವ ಚಪ್ಪಲಿ ಸವೆದು ಹೋಗುತ್ತಿದ್ದರೂ, ಮನದಲ್ಲಿ ಕಂಡ ಕನಸುಗಳನ್ನು ನನಸು ಮಾಡುಲು ಓಡುತ್ತಿರುವ ಬ್ರೇಕ್ ಇಲ್ಲಾದ ಗಾಡಿ....!

ಈ ವೇಳೆಗೆ ಪ್ರಿಯಾ ನನ್ನ ಬಾಳಿನಿಂದ ದೂರವಾಗಿ ಬಿಟ್ಟಳು...! ನಾನು ಸಾಗುತ್ತಿದ್ದ ಹಾದಿಯಲ್ಲಿ ಬೆಳಕು ಇರಲಿಲ್ಲ...! ಹಗಲು ಕಂಡ ಬಾವಿಯಲ್ಲಿಯೇ ರಾತ್ರಿ ಬೀಳುತ್ತಿದ್ದೆ...! ಆದರೂ ನನಗೆ ಬುದ್ಧಿ ಬರುತ್ತಿರಲಿಲ್ಲ...! ನನ್ನ ದಡ್ಡ ಕೆಲಸಗಳಿಂದ ಬಹು ಬೇಗಾನೆ ಪೆದ್ದಶಿಖಾಮಣಿ ಎಂಬ ಬಿರುದು ನನಗೆ ಸಿಕ್ಕಿ ಬಿಟ್ಟಿತ್ತು...! ನಾನು ಮತ್ತು ಪ್ರಿಯಾ ನಡುವೆ ಯಾವುದೇ ಭೇಟಿ ಮತ್ತು ಮಾತುಕತೆ ಇಲ್ಲಾದಿದ್ದರೂ ಕೆಲ ದಿನಗಳಿಂದ ಕನಸಿನಲ್ಲಿ ಬಂದು, ಕೆಲ ನೀತಿ ಕಥೆಗಳನ್ನು ಹೇಳುತ್ತಾ, ನನಗೆ ಜ್ಞಾನೋದಯವಾಗಲು ಪ್ರಯತ್ನ ಮಾಡುತ್ತಿದ್ದಳು....!

ನಾವು ಯಾವುದೇ ಮಂದಿಯನ್ನು ಈ ಭೂಮಿಯಲ್ಲಿ ಕಣ್ಣು ಮುಚ್ಚಿನಂಬಬಾರದು...! ನಮ್ಮ ನಂಬಿಕೆಯೂ ರಾಜಕೀಯ ಪಕ್ಷಗಳ ಆಶ್ವಾಸನೆಗಳಂತೆ ಢಮಾರ್ ವಾಗಬಹುದು...! ಆಗ ಸುಮ್ಮನೆ ದುಃಖಿಸಿ ಪ್ರಯೋಜನ ಇಲ್ಲ...! ಕೆಲವೊಂದು ವಿಚಾರಗಳಲ್ಲಿ ನಮ್ಮ ಕಣ್ಣುಗಳನ್ನು ಸಹ ನಂಬುವಂತೆ ಇಲ್ಲ....! ಈ ವಿಚಾರ ಕುರಿತು ಒಂದು ಕಥೆಯನ್ನು ಪ್ರಿಯಾ ನನಗೆ ಕೆಲ ದಿನಗಳ ಹಿಂದೆ ಹೇಳಿದ್ದಳು...! ಆ ಕಥೆ ಈಗ ನಿಮಗಾಗಿ.....!

ಒಂದು ಏಡಿ ಸಮುದ್ರ ತೀರದ ಮರಳಿನಲ್ಲಿ ಹೆಜ್ಜೆ ಹಾಕುತ್ತಿತ್ತು.... ಸುಮಾರು ದೂರ ಸಾಗಿದ ಮೇಲೆ ಏಡಿ ಒಮ್ಮೆ ತಿರುಗಿ ನೋಡಿದಾಗ, ಮರಳಿನಲ್ಲಿ ತನ್ನ ಕಾಲಿನ ಗುರುತುಗಳಿಂದ ರಚನೆಯಾಗಿರುವ ಕಲಾಕೃತಿಯನ್ನು ನೋಡಿ ಮನಸ್ಸಿಗೆ ಬಹಳ ಖುಷಿ ಮತ್ತು ಹೆಮ್ಮೆ ಎನ್ನಿಸಿತ್ತು.! ತಾನು ಒರ್ವ ಕಲಾವಿದ ಎಂದು ಏಡಿ ಭಾವಿಸಿತ್ತು...! ಆದರೆ ಈ ಸಂತೋಷ ಹೆಚ್ಚು ಸಮಯ ಉಳಿಯಲಿಲ್ಲ.! ಏಕೆಂದರೆ ದೊಡ್ಡ ಸಮುದ್ರ ಅಲೆಯೊಂದು ಅಪ್ಪಳಿಸಿ, ಈ ಏಡಿಯ ಸುಂದರವಾದ ಹೆಜ್ಜೆ ಗುರುತುಗಳ ಕಲಾಕೃತಿಯನ್ನು ಮಾಯ ಮಾಡಿಯೇ ಬಿಟ್ಟಿತ್ತು...! ಆಗ ಏಡಿಯೂ ಬಹಳ ಮನನೊಂದು ಸಮುದ್ರದ ಬಳಿ ಕೇಳಿಯೇ ಬಿಟ್ಟಿತ್ತು.

ನಾನು ನಿನ್ನನ್ನು ಬಹಳ ಪ್ರೀತಿಸುತ್ತಿದ್ದೆ.... ನಾನು ನಿನಗೆ ಯಾವುದೇ ದ್ರೋಹಗಳನ್ನು ಮಾಡಿಯೇ ಇಲ್ಲ....! ನೀನು ಇಂತಹ ಅನ್ಯಾಯವನ್ನು, ನನಗೆ ಮಾಡಬಹುದು ಎಂದು ಮನಸ್ಸಿನಲ್ಲಿ ಒಮ್ಮೆಯೂ ಕಲ್ಪನೆ ಸಹ ಮಾಡಿಕೊಂಡಿರಲಿಲ್ಲ.

ಆದರೆ ನನ್ನ ಕಲಾಕೃತಿಗಳನ್ನು ನೋಡಿ ನಿನಗೆ ಅಸೂಯೆ ಬರಲು ಕಾರಣ ಏನು....?.

ಆಗ ಸಮುದ್ರ ನಗುತ್ತಾ ಸರ್ವ ಪ್ರಶ್ನೆಗಳಿಗೂ ಶಾಂತವಾಗಿ ಉತ್ತರಿಸ ತೊಡಗಿತ್ತು...!


ನೀನು ನನ್ನನ್ನು ತಪ್ಪಾಗಿ ತಿಳಿದುಕೊಂಡಿರುವೆ.... ನನಗೆ ನಿನ್ನ ಮೇಲೆ ಯಾವುದೇ ಅಸೂಯೆ ಕೋಪ ಇಲ್ಲ...! ನೀನು ಮರಳಿನಲ್ಲಿ ನಿನ್ನ ಕಾಲುಗಳಿಂದ ರಚಿಸಿರುವ ಕಲಾಕೃತಿಯನ್ನು ನೋಡಿ, ಬೇರೆಯೊಂದು ಪ್ರಾಣಿ ನಿನ್ನನ್ನು ಹಿಡಿದು, ತಿಂದು ಮುಗಿಸಲು ಬರುವುದನ್ನು ನೋಡಿ, ನಿನ್ನ ಹೆಜ್ಜೆಗುರುತುಗಳನ್ನ ಅಳಿಸಿ, ನಿನ್ನ ಜೀವವನ್ನು ಉಳಿಸಿದೆ ಅಷ್ಟೇ...! ಎಂದು ಸಮುದ್ರ ಹೇಳಿದನ್ನು ಕೇಳಿದಾಗ, ಏಡಿಗೆ ತನ್ನ ಅಜ್ಞಾನ ಮತ್ತು ತಪ್ಪಿನ ಅರಿವು ತಿಳಿಯಿತ್ತು... ಕೃತಜ್ಞತೆ ಭಾವದಿಂದ ಏಡಿಯೂ ಸಮುದ್ರಕ್ಕೆ ಕೈಮುಗಿದು ಮುಂದಕ್ಕೆ ಸಾಗಿತ್ತು...!

ಈ ಭೂಮಿಯಲ್ಲಿ ಬದುಕು ಸಾಗಿಸುತ್ತಿರುವ ಪ್ರತಿಯೊಂದು ಜೀವಿಗಳಿಗೂ ಒಂದು ನಗ್ನ ಸತ್ಯ ಗೊತ್ತಿರಲೇಬೇಕು....!

ನಮ್ಮ ಕಣ್ಣುಗಳು ಕಾಣುವುದು ಎಲ್ಲಾ ಸತ್ಯವಾಗಿರುವುದಿಲ್ಲ.....! ಸತ್ಯವಾಗಿರುವುದು ಎಲ್ಲಾ ಕಾಣುವುದು ಸಹ ಇಲ್ಲ....!!!..

**– ಐಗೂರು ಮೋಹನ್** ದಾಸ್ ಜಿ





## ಭವ್ಯ ಇತಿಹಾಸಕ್ಕೆ ಸಾಕ್ಷಿಯಾಗಿರುವ ಅಲೆಪ್ಪೊ ಕೋಟೆ

ಸಿರಿಯಾ ದೇಶದ ಅತ್ಯಂತ ಪುರಾತನ ಮತ್ತು ಐತಿಹಾಸಿಕ ನಗರವಾದ ಅಲೆಪ್ಪೊದ ಹೃದಯಭಾಗದಲ್ಲಿರುವ ಅಲೆಪ್ಪೊ ಕೋಟೆ ಪ್ರಪಂಚದ ಅತ್ಯಂತ ಹಳೆಯ ಮತ್ತು ದೊಡ್ಡ ಕೋಟೆಗಳಲ್ಲಿ ಒಂದಾಗಿದೆ. ಇದು ಕೇವಲ ಒಂದು ಕಟ್ಟಡವಲ್ಲ, ಬದಲಿಗೆ ಸಾವಿರಾರು ವರ್ಷಗಳ ಮಾನವ ನಾಗರಿಕತೆ, ಯುದ್ಧಗಳು ಮತ್ತು ಸಾಂಸ್ಕೃತಿಕ ವೈಭವದ ಜೀವಂತ ಸಾಕ್ಷಿಯಾಗಿದೆ. 1986ರಲ್ಲಿ ಯುನೆಸ್ಕೋ ಇದನ್ನು ಜಾಗತಿಕ ಪರಂಪರೆಯ ತಾಣವೆಂದು ಘೋಷಿಸಿತು.

ಭೌಗೋಳಿಕ ರಚನೆ ಮತ್ತು ವಾಸ್ತುಶಿಲ್ಪ: ಈ ಕೋಟೆಯು ನಗರದ ಮಧ್ಯಭಾಗದಲ್ಲಿರುವ ಸುಮಾರು 50 ಮೀಟರ್ ಎತ್ತರದ ನೈಸರ್ಗಿಕ ಬೆಟ್ಟದ ಮೇಲೆ ನಿರ್ಮಾಣವಾಗಿದೆ. ಇದರ ಸುತ್ತಲೂ ಆಳವಾದ ಕಂದಕವಿದ್ದು, ಶತ್ರುಗಳು ಸುಲಭವಾಗಿ ಒಳಬರದಂತೆ ರಕ್ಷಣೆ ನೀಡುತ್ತಿತ್ತು. ಕೋಟೆಯ ಒಳಗೆ ಹೋಗಲು ಒಂದು ಬೃಹತ್ ಸೇತುವೆ ಮತ್ತು ಕಲಾತ್ಮಕವಾದ ಮುಖ್ಯ ದ್ವಾರವಿದೆ. ಕೋಟೆಯ ಒಳಗಡೆ ಅರಮನೆಗಳು, ಮಸೀದಿಗಳು, ಸೈನಿಕರ ವಸತಿಗೃಹಗಳು, ಸ್ನಾನಗೃಹಗಳು (ಹಮಾಮ್) ಮತ್ತು ದೀರ್ಘಕಾಲ ಧಾನ್ಯಗಳನ್ನು ಸಂಗ್ರಹಿಸಿಡಲು ಬೇಕಾದ ಗೋದಾಮುಗಳಿವೆ.

ಅಲೆಪ್ಪೊ ಕೋಟೆಯ ಇತಿಹಾಸದ ಹಾದಿಯನ್ನು ಗಮನಿಸಿದರೆ ಇದು ಕ್ರಿಶ್ತಪೂರ್ವ 3ನೇ ಶತಮಾನದಷ್ಟು ಹಳೆಯದಾಗಿದೆ. ಕಾಲ ಕಾಲಕ್ಕೆ ಈ ಕೋಟೆಯು ಅನೇಕ ಸಾಮ್ರಾಜ್ಯಗಳ ಆಳ್ವಿಕೆಗೆ ಒಳಪಟ್ಟಿತು ಅಲೆಕ್ಸಾಂಡರ್ ಮತ್ತು ರೋಮನ್ನರು ಅಂದರೆ ಗ್ರೀಕ್ ಮತ್ತು ರೋಮನ್ ಸಾಮ್ರಾಜ್ಯಗಳ ಕಾಲದಲ್ಲಿ ಇದು ಪ್ರಮುಖ ಆಯಕಟ್ಟಿನ ಸ್ಥಳವಾಗಿತ್ತು. ಇಸ್ಲಾಮಿಕ್ ಯುಗದ ಸಮಯದಲ್ಲಿ 12 ಮತ್ತು 13ನೇ ಶತಮಾನದಲ್ಲಿ ಅಯ್ಯುಬಿದ್ ರಾಜವಂಶದ ಆಳ್ವಿಕೆಯಲ್ಲಿ ಈ ಕೋಟೆಗೆ ಇಂದಿನ ಭವ್ಯ ರೂಪ ಸಿಕ್ಕಿತು. ಸುಲ್ತಾನ್ ಅಲ್–ಜಾಹಿರ್ ಗಾಜಿ ಇದರ ರಕ್ಷಣಾ ಗೋಡೆಗಳನ್ನು ಮತ್ತಷ್ಟು ಬಲಪಡಿಸಿದನು. ನಂತರದ ದಿನಗಳಲ್ಲಿ ಮಂಗೋಲರ ಆಕ್ರಮಣಕ್ಕೆ ಈ ಕೋಟೆ ಒಳಗಾಗಿತ್ತು. ಹಿಗುಲಾ ಖಾನ್ ನೇತೃತ್ವದ ಮಂಗೋಲರು ಮತ್ತು ನಂತರ ತೈಮೂರ್ ಲಂಗ್ ಈ ಕೋಟೆಯ ಮೇಲೆ ದಾಳಿ ಮಾಡಿ ಭಾರಿ ಹಾನಿ ಉಂಟುಮಾಡಿದ್ದರು.

ಈ ಕೋಟೆಯು ಎಷ್ಟು ಬಲಿಷ್ಠವಾಗಿತ್ತೆಂದರೆ, ಇತಿಹಾಸದ ಪ್ರಸಿದ್ಧ ಕ್ರುಸೇಡಸ್ ರ್ ಯುದ್ಧಗಳ ಸಮಯದಲ್ಲಿಯೂ ಸಹ ಶತ್ರು ಸೈನಿಕರಿಗೆ ಇದನ್ನು ಸಂಪೂರ್ಣವಾಗಿ ವಶಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಇತ್ತೀಚಿನ ವರ್ಷಗಳಲ್ಲಿ ಸಿರಿಯಾದಲ್ಲಿ ನಡೆದ ಅಂತರ್ಯುದ್ಧದ ಕಾರಣದಿಂದಾಗಿ ಈ ಐತಿಹಾಸಿಕ ಕೋಟೆಗೆ ಸಾಕಷ್ಟು ಹಾನಿಯಾಗಿದೆ. ಬಾಂಬ್ ದಾಳಿಗಳು ಮತ್ತು ಸೈನಿಕ ಸಂಘರ್ಷಗಳಿಂದಾಗಿ ಇದರ ಕೆಲವು ಗೋಡೆಗಳು ಮತ್ತು ಪ್ರಮುಖ ಭಾಗಗಳು ಹಾನಿಗೊಳಗಾಗಿದ್ದವು. ಅಲ್ಲದೆ, 2023ರಲ್ಲಿ ಸಂಭವಿಸಿದ ಭೀಕರ ಭೂಕಂಪವೂ ಸಹ ಈ ಕೋಟೆಯ ಕೆಲವು ರಚನೆಗಳಿಗೆ ಧಕ್ಕೆ ತಂದಿದೆ. ಪ್ರಸ್ತುತ ಇದನ್ನು ಪುನಃ ಸ್ಥಾಪಿಸುವ ಮತ್ತು ಸಂರಕ್ಷಿಸುವ ಕೆಲಸಗಳು ನಡೆಯುತ್ತಿವೆ. ಬೆಟ್ಟದ ತುದಿಯಲ್ಲಿರುವ ಅಲೆಪ್ಪೊದ ಕೋಟೆಯು ಕೇವಲ ಸಿರಿಯಾದ ಹೆಮ್ಮೆಯಷ್ಟೇ ಅಲ್ಲ, ಇಡೀ ಮಾನವಕುಲದ ಇತಿಹಾಸವನ್ನು ಸಾರುವ ಅದ್ಭುತ ಸ್ಮಾರಕವಾಗಿದೆ.

**– ಕೆ.ಪಿ.ಅಶ್ವಿನ್** ರಾವ್

# ಕೆಂಪೇಗೌಡರ ಆದರ್ಶಗಳು ಇಂದಿನ ಪೀಳಿಗೆಗೆ ದಾರಿದೀಪ

## ಸಕಲೇಶಪುರದಲ್ಲಿ ನಾಡಪ್ರಭು ಕೆಂಪೇಗೌಡರ 517ನೇ ಸಂಭ್ರಮದ ಜಯಂತಿ

• ಪ್ರಜೋದಯ ವರದಿ



**ಸಕಲೇಶಪುರ:** ನಾಡಪ್ರಭು ಕೆಂಪೇಗೌಡರ ದೂರದೃಷ್ಟಿಯ ಆಡಳಿತ, ಜನಪರ ಚಿಂತನೆ ಹಾಗೂ ಅಭಿವೃದ್ಧಿ ಕಾರ್ಯಗಳು ಇಂದಿನ ಪೀಳಿಗೆಗೆ ದಾರಿದೀಪವಾಗಿದ್ದು, ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಕಲೇಶಪುರ- ಆಲೂರು- ಕಟ್ಟಾಯ ವಿಧಾನ ಸಭಾ ಕ್ಷೇತ್ರದ ಶಾಸಕ ಸಿಮೆಂಟ್ ಮಂಜುನಾಥ್ ಹೇಳಿದರು.

ಪಟ್ಟಣದ ಒಕ್ಕಲಿಗರ ಸಮುದಾಯ ಭವನದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂದು ಬೆಂಗಳೂರು ವಿಶ್ವದಾದ್ಯಂತ ಸಾಫ್ಟ್‌ವೇರ್ ನಗರವಾಗಿ ಗುರುತಿಸಿಕೊಂಡಿದ್ದರೆ, ಅದರ ಭದ್ರ ಅಡಿಪಾಯವನ್ನು ನಾಡಪ್ರಭು ಕೆಂಪೇಗೌಡರು ಹಾಕಿಕೊಟ್ಟಿದ್ದಾರೆ. ಅಧಿಕಾರಗಳು ಶಾಶ್ವತವಲ್ಲ, ಆದರೆ ಜನಪರವಾಗಿ ಮಾಡಿದ ಉತ್ತಮ ಕೆಲಸಗಳು ಮಾತ್ರ ಶಾಶ್ವತವಾಗಿ ಉಳಿಯುತ್ತವೆ. ಶಾಸಕರಾಗಿ ಎಲ್ಲರ ಸಲಹೆ- ಸೂಚನೆಗಳನ್ನು ಪಡೆದು ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ. ಸಾರ್ವಜನಿಕರ ಸಹಕಾರದೊಂದಿಗೆ ಸಕಲೇಶಪುರ ತಾಲ್ಲೂಕಿನ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು. ಕೆಂಪೇಗೌಡರು ತೋರಿದ ಅಭಿವೃದ್ಧಿಯ ಹಾದಿಯಲ್ಲಿ ನಾವು ಸಾಗಬೇಕು ಎಂದು ಹೇಳಿದರು.

ತಾಲ್ಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಎಚ್.ಎಂ.ವಿಶ್ವನಾಥ್ ಪ್ರಾಸ್ತಾವಿಕವಾಗಿ ಮಾತನಾಡಿ, ಕೆಂಪೇಗೌಡ ಜಯಂತಿ ಕೇವಲ ಆಚರಣೆಗೆ ಸೀಮಿತವಾಗಬಾರದು. ಅವರ ಆದರ್ಶಗಳು, ಮೌಲ್ಯಗಳು ಮತ್ತು ಜನಪರ ಆಡಳಿತವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಸಂಕಲ್ಪದ ದಿನವಾಗಬೇಕು. ಎಲ್ಲ ವರ್ಗದ ಜನರನ್ನು ಸಮಾನವಾಗಿ ಕಂಡು ಉತ್ತಮ ಆಡಳಿತ ನೀಡಿದ ಮಹಾನ್ ನಾಯಕ ಕೆಂಪೇಗೌಡರು. ಬೆಂಗಳೂರು ನಿರ್ಮಾಣದ ಮೂಲಕ ತಮ್ಮ ದೂರದೃಷ್ಟಿ ಮತ್ತು ಆಡಳಿತ ಸಾಮರ್ಥ್ಯವನ್ನು ಅವರು ಸಾಬೀತುಪಡಿಸಿದ್ದಾರೆ. ಇಂದಿನ ಜನಪ್ರತಿನಿಧಿಗಳು ಅವರ ಚಿಂತನೆಗಳನ್ನು ಅಳವಡಿಸಿಕೊಳ್ಳಬೇಕು. ಸಂಘದ ವತಿಯಿಂದ 25 ವಿದ್ಯಾರ್ಥಿಗಳಿಗೆ ಉಚಿತ ವಸತಿ ವ್ಯವಸ್ಥೆ ಕಲ್ಪಿಸಿ ಶಿಕ್ಷಣಕ್ಕೆ ಉತ್ತೇಜನ ನೀಡಲಾಗುತ್ತಿದೆ ಎಂದು ತಿಳಿಸಿದರು.

ಮಾಜಿ ಶಾಸಕ ಎಚ್.ಕೆ.ಕುಮಾರಸ್ವಾಮಿ ಅವರು ಮಾತನಾಡಿ, ಮಹಾಪುರುಷರ ಜಯಂತಿಗಳ ಉದ್ದೇಶ ಕೇವಲ ಅವರನ್ನು ಸ್ಮರಿಸುವುದಲ್ಲ. ಅವರ ಆದರ್ಶಗಳನ್ನು ಸಮಾಜದಲ್ಲಿ ಅಳವಡಿಸಿಕೊಳ್ಳುವುದೇ ನಿಜವಾದ ಗೌರವ. ಯಾವುದೇ ಆಧುನಿಕ ತಂತ್ರಜ್ಞಾನವಿಲ್ಲದ ಕಾಲದಲ್ಲಿಯೇ ಕೆಂಪೇಗೌಡರು ದೂರದೃಷ್ಟಿಯಿಂದ ಬೆಂಗಳೂರು ನಿರ್ಮಿಸಿರುವುದು ಇಂದಿಗೂ ಪ್ರೇರಣೆಯಾಗಿದೆ ಎಂದರು.

ಉಪ ವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ ಮಾತನಾಡಿ, ನಾಡಪ್ರಭು ಕೆಂಪೇಗೌಡರು ಕರ್ನಾಟಕದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹ ಸಾಧನೆಗಳನ್ನು ಮಾಡಿದ್ದಾರೆ. ಸುಮಾರು 500 ವರ್ಷಗಳ ಹಿಂದೆಯೇ 64 ಕುಲಕಸುಬುಗಳಿಗೆ ಪ್ರತ್ಯೇಕ ಪೇಟೆಗಳನ್ನು ನಿರ್ಮಿಸುವ ದೂರದೃಷ್ಟಿ ಹೊಂದಿದ್ದರು. ಬೆಂಗಳೂರು ಕೇವಲ ನಗರವಲ್ಲ, ಜನರ ಬದುಕಿಗೆ ಅಗತ್ಯವಿರುವ ಎಲ್ಲಾ ಮೂಲ ಸೌಕರ್ಯಗಳನ್ನು ಒಳಗೊಂಡ ಯೋಜಿತ ನಗರವಾಗಿತ್ತು. ಅವರ ಆದರ್ಶಗಳು ನಮಗೆ ಸದಾ ದಾರಿ ದೀಪವಾಗಬೇಕು ಎಂದು ಹೇಳಿದರು.

ಕಾರ್ಯಕ್ರಮಕ್ಕೂ ಮುನ್ನ ಪಟ್ಟಣದ ಟೋಲ್‌ಗೇಟ್ ಸಮೀಪದ ನಾಡಪ್ರಭು ಕೆಂಪೇಗೌಡರ ಪ್ರತಿಮೆಗೆ ಗಣ್ಯರು ಮಾಲಾರ್ಪಣೆ ಹಾಗೂ ಪುಷ್ಪಾರ್ಚನೆ ಸಲ್ಲಿಸಿದರು. ಬಳಿಕ ನೂರಾರು ಸಂಖ್ಯೆಯಲ್ಲಿ ಸೇರಿದ್ದ ಒಕ್ಕಲಿಗ ಸಮುದಾಯದವರು ಡೊಳ್ಳು, ಡಿಜೆ ಸಂಗೀತದೊಂದಿಗೆ ಕೆಂಪೇಗೌಡರ ಭಾವಚಿತ್ರದ ಮೆರವಣಿಗೆಯನ್ನು ಹಳೆ ಬಸ್ ನಿಲ್ದಾಣದವರೆಗೆ ನಡೆಸಿ, ಅಲ್ಲಿಂದ ಒಕ್ಕಲಿಗರ ಸಮುದಾಯ ಭವನಕ್ಕೆ ಆಗಮಿಸಿದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಐದು ಗಣ್ಯರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಸುಪ್ರೀತಾ, ಸಕಲೇಶಪುರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಸೈಯದ್ ಮುಫೀಜ್, ಪುರಸಭೆ ಮುಖ್ಯಾಧಿಕಾರಿ ಮಹೇಶ್ವರಪ್ಪ, ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಗಂಗಾಧರ್, ಜೆಡಿಎಸ್ ತಾಲ್ಲೂಕು ಅಧ್ಯಕ್ಷ ದೊಡ್ಡದಿಣ್ಣೆ ಸ್ವಾಮಿಗೌಡ, ಬಿಜೆಪಿ ತಾಲ್ಲೂಕು ಅಧ್ಯಕ್ಷ ಅಶ್ವಥ್ ವಳಲಹಳ್ಳಿ ಇನ್ನಿತರರಿದ್ದರು.

# ಹಾಸ್ಟೆಲ್‌ಗೆ ಶಾಸಕರ ಭೇಟಿ: ದೂರುಗಳ ಸುರಿಮಳೆ

• ಪ್ರಜೋದಯ ವರದಿ



**ಬೇಲೂರು:** ನಗರದ ಎಚ್.ಡಿ. ದೇವೇಗೌಡ ವೃತ್ತ ಸಮೀಪದ ಮೂಡಿಗೆರೆ ರಸ್ತೆಯ ಜೆ.ಪಿ. ನಗರದ ಬಾಲಕರ ಹಾಸ್ಟೆಲ್‌ಗೆ ಬೇಲೂರು ವಿಧಾನಸಭಾ ಕ್ಷೇತ್ರದ ಶಾಸಕ ಎಚ್.ಕೆ. ಸುರೇಶ್ ಅವರು ಶುಕ್ರವಾರ ರಾತ್ರಿ ಸುಮಾರು 8.30ಕ್ಕೆ ಭೇಟಿ ನೀಡಿ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಆಲಿಸಿದರು.

ಈ ವೇಳೆ ವಿದ್ಯಾರ್ಥಿಗಳು ಹಾಸ್ಟೆಲ್‌ನಲ್ಲಿರುವ ಹಲವು ಅವ್ಯವಸ್ಥೆಗಳ ಬಗ್ಗೆ ಶಾಸಕರ ಗಮನಕ್ಕೆ ತಂದರು. ಕುಡಿಯುವ ನೀರಿನ ವ್ಯವಸ್ಥೆ ವರ್ಷಗಳಿಂದ ಹಾಳಾಗಿದ್ದು, ಮಳೆಗಾಲದಲ್ಲಿ ಬಿಸಿ ನೀರಿಗಾಗಿ ಬಳಸುವ ವಿದ್ಯುತ್ ಗೀಜರ್ ಕೆಟ್ಟು ಕಾರ್ಯ ನಿರ್ವಹಿಸದಿರುವುದು, ಕೆಲ ಸಿಬ್ಬಂದಿ ವಿದ್ಯಾರ್ಥಿಗಳೊಂದಿಗೆ ಅವಾಚ್ಯ ಶಬ್ದಗಳಿಂದ ವರ್ತಿಸುತ್ತಿರುವ ಬಗ್ಗೆ ಅವರು ದೂರು ನೀಡಿದರು.

ವಿದ್ಯಾರ್ಥಿಗಳ ಅಹವಾಲುಗಳನ್ನು ಆಲಿಸಿದ ಶಾಸಕ ಎಚ್.ಕೆ.ಸುರೇಶ್ ಅವರು ದೂರವಾಣಿ ಮೂಲಕ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಮಾತನಾಡಿ, ಹಾಸ್ಟೆಲ್‌ನ ಅವ್ಯವಸ್ಥೆ ಕುರಿತು ಆಕ್ರೋಶ ವ್ಯಕ್ತಪಡಿಸಿದರು. ವಿದ್ಯಾಭ್ಯಾಸಕ್ಕಾಗಿ ಹಾಸ್ಟೆಲ್‌ಗೆ ಬರುವ ಮಕ್ಕಳನ್ನು ತಮ್ಮ ಮಕ್ಕಳಂತೆ ನೋಡಿಕೊಳ್ಳಬೇಕು. ಮೂಲಭೂತ ಸೌಲಭ್ಯಗಳಿಂದ ಯಾವುದೇ ವಿದ್ಯಾರ್ಥಿ ವಂಚಿತನಾಗಬಾರದು. ಹಾಸ್ಟೆಲ್‌ಗೆ ಅಗತ್ಯವಿರುವ ಎಲ್ಲಾ ಮೂಲಭೂತ ಸೌಲಭ್ಯಗಳ ಪಟ್ಟಿಯನ್ನು ತಕ್ಷಣ ಸಿದ್ಧಪಡಿಸಿ ಸಲ್ಲಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬಳಿಕ ಶಾಸಕರು ಹಾಸ್ಟೆಲ್‌ನ ಅಡುಗೆ ಮನೆ, ಶೌಚಾಲಯ ಹಾಗೂ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ಆಹಾರದ ಗುಣಮಟ್ಟವನ್ನು ಪರಿಶೀಲಿಸಿ ದರು. ವಿದ್ಯಾರ್ಥಿಗಳಿಗೆ ಶುದ್ಧ ಕುಡಿಯುವ ನೀರು, ಬಿಸಿ ನೀರು ಸೇರಿದಂತೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಶೀಘ್ರದಲ್ಲೇ ಒದಗಿಸುವ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಪುರಸಭೆಯ ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯ ಎ.ಆರ್. ಅಶೋಕ್, ಸಮಾಜ ಸೇವಕ ನೂರ್ ಹಮದ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

**ಹಾಸನ: ಶಿಶು ಅಭಿವೃದ್ಧಿ ಯೋಜನಾ ಕಚೇರಿ ವ್ಯಾಪ್ತಿಯಲ್ಲಿ 2 ಅಂಗನವಾಡಿ ಕಾರ್ಯಕರ್ತೆ ಹಾಗೂ 4 ಅಂಗನವಾಡಿ ಸಹಾಯಕಿ ಹುದ್ದೆಗೆ ಅರ್ಜಿ ಅಹ್ವಾನಿಸಿದ್ದು, ಖಾಲಿ ಹುದ್ದೆಗಳು ಸೇರಿ ಒಟ್ಟು 32 ಕಾರ್ಯಕರ್ತೆ, 108 ಸಹಾಯಕಿ ಹುದ್ದೆಗೆ ಆಸಕ್ತ ಸ್ಥಳೀಯ ಅಭ್ಯರ್ಥಿಗಳು ಕಚೇರಿಯಲ್ಲಿ ಅರ್ಜಿಗಳನ್ನು ಪಡೆದು ಅವಶ್ಯಕ ದಾಖಲಾತಿಗಳೊಂದಿಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಜೂ. 29 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಯನ್ನು ಸಂಪರ್ಕಿಸಬಹುದು.**

# ಶಿವಲಿಂಗೇಗೌಡರು ಸಚಿವರಾದರೆ ಶೋಷಿತರಿಗೆ ಅನುಕೂಲ

• ಪ್ರಜೋದಯ ವರದಿ



**ಅರಸೀಕೆರೆ:** ಶೋಷಿತ ಸಮಾಜಗಳ ಬಗ್ಗೆ ಕಾಳಜಿ ರೈತಾಪಿ ವರ್ಗದ ಧ್ವನಿಯಾಗಿರುವ ಶಿವಲಿಂಗೇಗೌಡರಿಗೆ ಸಚಿವರಾಗಿ ಸೇವೆ ಮಾಡುವ ಅವಕಾಶ ದೊರೆತರೆ ಶೋಷಿತರು ಹಾಗೂ ರೈತರ ಪಾಲಿನ ಆಶಾಕಿರಣವಾಗುವುದರಲ್ಲಿ ಸಂದೇಹವಿಲ್ಲ ಎಂದು ತಾಲ್ಲೂಕು ಉಪ್ಪಾರ ಸಮಾಜದ ಮುಖಂಡರು ತಮ್ಮ ಆಶಯ ವ್ಯಕ್ತಪಡಿಸಿದರು.

ಡಿ.ಕೆ.ಶಿವಕುಮಾರ್ ನೇತೃತ್ವದ ಸರ್ಕಾರದಲ್ಲಿ ಶಾಸಕ ಕೆ.ಎಂ. ಶಿವಲಿಂಗೇಗೌಡರು ಹಾಗೂ ನಮ್ಮ ಸಮಾಜದ ನಾಯಕನಾಗಿರುವ ಪುಟ್ಟರಂಗಶೆಟ್ಟಿ ಅವರಿಗೆ ನೂತನ ಸಚಿವ ಸಂಪುಟದಲ್ಲಿ ಮಂತ್ರಿ ಸ್ಥಾನ ದೊರೆಯಲಿ ಎಂದು ಯಾದಪುರದ ಜೇನುಕಲ್ಲು ಸಿದ್ದೇಶ್ವರ ಸ್ವಾಮಿಯಲ್ಲಿ ಮೊರೆ ಇಟ್ಟ ಭಗೀರಥ ಸಮಾಜದ ಬಂಧುಗಳು 101 ತೆಂಗಿನ ಕಾಯಿಯನ್ನು ಒಡೆದು ಮನದ ಇಷ್ಟಾರ್ಥ ಈಡೇರಿಸುವಂತೆ ಜೇನುಕಲ್ ಶ್ರೀ ಸಿದ್ದೇಶ್ವರ ಸ್ವಾಮಿಯಲ್ಲಿ ಪ್ರಾರ್ಥನೆ ಮಾಡುವುದಾಗಿ ಹೇಳಿದರು.

ಉಪ್ಪಾರ ಸಮಾಜದ ತಾಲೂಕು ಅಧ್ಯಕ್ಷ ಕೆ.ಸಿ.ಡಿ. ಕುಮಾರ್ ಮಾತನಾಡಿ, ಶಾಸಕ ಶಿವಲಿಂಗೇಗೌಡರು ಹಾಗೂ ಪುಟ್ಟರಂಗಶೆಟ್ಟಿಯವರು ಸತತ ನಾಲ್ಕನೇ ಬಾರಿಗೆ ಶಾಸಕರಾಗಿ ಆಯ್ಕೆಯಾಗುತ್ತಾ ಬಂದಿದ್ದು ತಮ್ಮ ಕ್ಷೇತ್ರಕ್ಕೆ ಅಷ್ಟೇ ಸೀಮಿತವಾಗದೆ ರಾಜ್ಯಾದ್ಯಂತ ತಮ್ಮ ನಡೆ ನುಡಿ ಆದರ್ಶ ರಾಜಕೀಯ ಗುಣಲಕ್ಷಣಗಳಿಂದ ರಾಜ್ಯದ ಜನತೆಯ ಮನಗೆದ್ದಿದ್ದಾರೆ ಇಂತಹ ನಾಯಕರಿಗೆ ಸಚಿವ ಸಂಪುಟದಲ್ಲಿ ಸ್ಥಾನ ದೊರೆತರೆ ರಾಜ್ಯದ್ಯಂತ ಪಕ್ಷ ಸಂಘಟನೆಗೂ ಬಲ ಬರಲಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಮಾಜಿ ಮಂತ್ರಿಗಳಾದ ಸಿದ್ದರಾಮಯ್ಯ ಅವರಿಗೆ ಮನವಿ ಮಾಡುವುದಾಗಿ ಹೇಳಿದರು.

ಕಾರ್ಯದರ್ಶಿ ಚನ್ನಬಸಪ್ಪ ಮಾತನಾಡಿ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವ ನೂತನ ಸರ್ಕಾರದ ಪ್ರಮಾಣ ವಚನ ಸಂದರ್ಭದಲ್ಲಿ ಶಿವಲಿಂಗೇಗೌಡರು ಮಂತ್ರಿಯಾಗುತ್ತಾರೆ ಎಂದು ಕ್ಷೇತ್ರದ ಜನತೆಯ ಆಶಯವಾಗಿತ್ತು ಆದರೆ ಅದು ಈಡೇರಲಿಲ್ಲ, ಎರಡನೇ ಅವಧಿಯಲ್ಲಾದರೂ ಸಚಿವ ಸ್ಥಾನ ಹಂಚಿಕೆ ಸಂದರ್ಭದಲ್ಲಿ ಶಿವಲಿಂಗೇಗೌಡರಿಗೆ ಮಂತ್ರಿ ಸ್ಥಾನ ಸಿಗುತ್ತದೆ ಎಂಬ ನಿರೀಕ್ಷೆಯಲ್ಲಿ ತಾಲ್ಲೂಕಿನ ಜನತೆ ಇದ್ದು ಇದನ್ನು ಕಾಂಗ್ರೆಸ್ ನೇತೃತ್ವ ಡಿಕೆ ಶಿವಕುಮಾರ್ ಸರ್ಕಾರ ಈಡೇರಿಸಲಿ ಎಂದು ಮನವಿ ಮಾಡುವುದಾಗಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಉಪ್ಪಾರ ಸಮಾಜದ ಉಪಾಧ್ಯಕ್ಷ ಪುನೀತ್,ಮುಖಂಡರಾದ ನಾಗಪ್ಪ, ಗಂಗಾಧರ್, ಜಯಣ್ಣ, ಕುಮಾರ್, ಸಿದ್ದಪ್ಪ, ರಂಗಪ್ಪ, ಹೊನ್ನಪ್ಪ ಹಾಗೂ ಮಂಜಪ್ಪ ಉಪಸ್ಥಿತರಿದ್ದರು.

# ಜನಸೇವೆಯೇ ನನ್ನ ಗುರಿ, ಜಾತಿ-ಧರ್ಮದ ಬೇಧವಿಲ್ಲ

## ಜೆಪಿ ನಗರದ 12, 13ನೇ ವಾರ್ಡ್‌ಗಳಿಗೆ ವಿಶೇಷ ಅನುದಾನ: ಶಾಸಕ ಸುರೇಶ್

• ಪ್ರಜೋದಯ ವರದಿ



**ಬೇಲೂರು:** ನಗರದ ಎಲ್ಲಾ 23 ವಾರ್ಡ್‌ಗಳ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತಿದ್ದು, ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಜೆಪಿ ನಗರದ 12 ಮತ್ತು 13ನೇ ವಾರ್ಡ್‌ಗಳಿಗೆ ವಿಶೇಷ ಅನುದಾನ ನೀಡಲಾಗುವುದು ಎಂದು ಶಾಸಕ ಎಚ್.ಕೆ.ಸುರೇಶ್ ಅವರು ಹೇಳಿದರು.

ನಗರದ 12 ಹಾಗೂ 13ನೇ ವಾಡ್‌ಗಳಲ್ಲಿ ನಡೆಯಲಿರುವ ಅಭಿವೃದ್ಧಿ ಕಾಮಗಾರಿಗಳ ಕುರಿತು ಸ್ಥಳ ಪರಿಶೀಲನೆ ನಡೆಸಿದ ಅವರು, ಮೂಲಭೂತ ಸೌಲಭ್ಯಗಳ ಕಲ್ಪನೆಗೆ ಹೆಚ್ಚಿನ ಒತ್ತು ನೀಡಲಾಗುವುದು ಎಂದ ಅವರು, ನನ್ನನ್ನು ಜನಸೇವೆ ಮಾಡಲು ಯಾರೂ ಕರೆದಿಲ್ಲ. ಜನರ ಸೇವೆ ಮಾಡುವ ಉದ್ದೇಶದಿಂದಲೇ ರಾಜಕೀಯಕ್ಕೆ ಬಂದಿದ್ದೇನೆ. ನನಗೆ ಯಾವುದೇ ಜಾತಿ- ಧರ್ಮದ ಭೇದಭಾವ ಇಲ್ಲ. ಎಲ್ಲಾ ವರ್ಗದ ಜನರಿಗೂ ಸಮಾನವಾಗಿ ಸೇವೆ ಸಲ್ಲಿಸುವುದು ನನ್ನ ಗುರಿ ಎಂದು ಹೇಳಿದರು.

ನಗರದ 13ನೇ ವಾರ್ಡ್ ಹಲವು ವರ್ಷಗಳಿಂದ ಮೂಲಸೌಕರ್ಯ ಕೊರತೆ ಎದುರಿಸುತ್ತಿದ್ದು, ಈ ಭಾಗದ ಅಭಿವೃದ್ಧಿಗೆ ವಿಶೇಷ ಅನುದಾನ ಮೀಸಲಿಡಲಾಗುವುದು. ಅಂಗನವಾಡಿ ರಸ್ತೆ ಸೇರಿದಂತೆ ವಿವಿಧ ಪ್ರದೇಶಗಳನ್ನು ಪರಿಶೀಲಿಸಿದ್ದು, ಶೀಘ್ರದಲ್ಲೇ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗಳಿಗೆ ಚಾಲನೆ ನೀಡಲಾಗುವುದು ಎಂದು ಸ್ಥಳೀಯರಿಗೆ ಭರವಸೆ ನೀಡಿದರು.


ಸರ್ಕಾರದಿಂದ ಇನ್ನೂ ಹೆಚ್ಚಿನ ಅನುದಾನ ತಂದು ಅಭಿವೃದ್ಧಿ ಕಾರ್ಯ ಮಾಡಲಾಗುವುದು ಎಂದರು.

ಪುರಸಭಾ ಸದಸ್ಯ ಎ.ಆರ್. ಅಶೋಕ್ ಮಾತನಾಡಿ, ಜೆಪಿ ನಗರ ಒಂದೇ ವಾರ್ಡ್ ಆಗಿದ್ದಾಗಲೂ ಅನುದಾನದ ಕೊರತೆಯ ನಡುವೆಯೂ ಸಾಧ್ಯವಾದಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದೆ. ಇದೀಗ 12 ಮತ್ತು 13ನೇ ವಾಡ್‌ಗಳಾಗಿ ವಿಭಜನೆಯಾದ ಬಳಿಕವೂ ಎರಡೂ ವಾರ್ಡ್‌ಗಳ ಅಭಿವೃದ್ಧಿಗೆ ಸಮಾನ ಆದ್ಯತೆ ನೀಡಲಾಗುತ್ತಿದೆ. ಶಾಸಕರ ಸಹಕಾರದಿಂದ ಹೆಚ್ಚಿನ ಅನುದಾನ ತಂದು ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷ ಅಕ್ರಮ್ ಶರೀಫ್, ಪುರಸಭಾ ಸದಸ್ಯ ಬಿ.ಸಿ.ಜಗದೀಶ್, ಸ್ಥಳೀಯ ನಿವಾಸಿಗಳಾದ ದೀಪಕ್, ನೂರ್ ಹಮದ್, ಅಭಿಷೇಕ, ಬಾಬು ಇನ್ನಿತರರು ಉಪಸ್ಥಿತರಿದ್ದರು.

# ಮುಂದಿನ 7 ದಿನ ವರುಣನ ಆರ್ಭಟ

• ಪ್ರಜೋದಯ ವರದಿ



**ಬೆಂಗಳೂರು:** ಮುಂಗಾರು ಮಳೆಯ ಅಬ್ಬರದ ನಡುವೆಯೇ ರಾಜ್ಯದಾದ್ಯಂತ ಮುಂದಿನ 7 ದಿನಗಳ ಕಾಲ ಭಾರೀ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಇಲಾಖೆ ಬಿಡುಗಡೆ ಮಾಡಿರುವ ಹವಾಮಾನ ವರದಿ ಮತ್ತು ಎಚ್ಚರಿಕೆಯ ಪ್ರಕಾರ, ರಾಜ್ಯದಾದ್ಯಂತ ಅಲ್ಲಲ್ಲಿ ಗುಡುಗು, ಸಿಡಿಲು ಮತ್ತು ಜೋರಾದ ಗಾಳಿಯೊಂದಿಗೆ ಹಗುರದಿಂದ ಸಾಧಾರಣ ಮಳೆಯಾಗಲಿದ್ದು, ಹಲವು ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇದೆ. ಜೂ.30 ರಿಂದ ರಾಜ್ಯದ ಕೆಲವು ಸ್ಥಳಗಳಲ್ಲಿ ಮಳೆಯ ತೀವ್ರತೆ ಮತ್ತಷ್ಟು ಹೆಚ್ಚಾಗಲಿದೆ ಎಂದು ಹೇಳಿದೆ.

ಕರಾವಳಿ ಜಿಲ್ಲೆಗಳಾದ ಉಡುಪಿ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮುಂದಿನ 7 ದಿನಗಳ ಕಾಲ ನಿರಂತರ ಮಳೆಯಾಗಲಿದ್ದು, ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಜೂನ್ 27 ಮತ್ತು ಜೂನ್ 28, 29, 30ರ ವರೆಗೆ ಭಾರಿ ಮಳೆಯಾಗಲಿದ್ದು, ಇದರೊಂದಿಗೆ ಭೀಕರ ಗುಡುಗು, ಸಿಡಿಲು ಹಾಗೂ ಬಿರುಗಾಳಿ ಬೀಸುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ. ಇನ್ನು ಜುಲೈ 1 ರಿಂದ 3 ರ ವರೆಗೆ ಮುಂಗಾರು ಮಳೆಯ ಆರ್ಭಟ ಮುಂದುವರಿಯಲಿದ್ದು, ಸತತವಾಗಿ ಭಾರಿ ಮಳೆಯಾಗುವ ಮುನ್ಸೂಚನೆ ನೀಡಲಾಗಿದೆ.

ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಮುಂದಿನ ಒಂದು ವಾರದ ಕಾಲ ಬಿರುಗಾಳಿ ಸಹಿತ ಗುಡುಗು ಮಳೆಯಾಗಲಿದೆ. ಕೆಲವು ಪ್ರತ್ಯೇಕ ಸ್ಥಳಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದ್ದು, ಜೊತೆಗೆ ತೀವ್ರವಾದ ಗುಡುಗು, ಸಿಡಿಲು ಹಾಗೂ ಮೇಲ್ಮೈ ಗಾಳಿ ಬೀಸಲಿದೆ. ಹಾಗೂ ಜೂ. 28 ರಿಂದ ಜುಲೈ 3 ರವರೆಗೆ ಭಾರಿ ಮಳೆಯ ಎಚ್ಚರಿಕೆ ಇಲ್ಲದಿದ್ದರೂ, ಸತತವಾಗಿ ಗುಡುಗು, ಸಿಡಿಲು ಮತ್ತು ಬಿರುಗಾಳಿ ಸಹಿತ ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆ ದಟ್ಟವಾಗಿದೆ.

ದಕ್ಷಿಣ ಒಳನಾಡಿನಲ್ಲಿ ಜೂನ್ 30 ರಿಂದ ಭಾರಿ ಮಳೆಯಾಗಲಿದೆ. ಬೆಂಗಳೂರು ಸೇರಿದಂತೆ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಜೂನ್ ಕೊನೆಯ ವಾರ ಹಾಗೂ ಜುಲೈ ಮೊದಲ ವಾರದಲ್ಲಿ ವರುಣನ ಅಬ್ಬರ ಹೆಚ್ಚಾಗಲಿದೆ. ಜೂನ್ 29ರಂದು ಹವಾಮಾನದಲ್ಲಿ ಸ್ವಲ್ಪ ಬದಲಾವಣೆಯಾಗಲಿದ್ದು, ಕೇವಲ ಗುಡುಗು ಹಾಗೂ ಸಿಡಿಲಿನ ಮುನ್ಸೂಚನೆ (ಗ್ರೀನ್ ಅಲರ್ಟ್) ನೀಡಲಾಗಿದೆ.

ಮಳೆ ಹಾಗೂ ಸಿಡಿಲಿನ ಮುನ್ಸೂಚನೆ ಇರುವುದರಿಂದ ಸಾರ್ವಜನಿಕರು ಹಾಗೂ ವಿಶೇಷವಾಗಿ ರೈತರು ಮತ್ತು ಮೀನುಗಾರರು ಜಾಗರೂಕರಾಗಿರಬೇಕು.

# ಕೆಂಪೇಗೌಡರು ದೂರದೃಷ್ಟಿ ಹರಿಕಾರರು

• ಪ್ರಜೋದಯ ವರದಿ



**ಆಲೂರು:** ಸರ್ವ ಜನಾಂಗ, ಸರ್ವ ಧರ್ಮವನ್ನು ಗುರುತಿಸಿ ಪ್ರತಿಯೊಬ್ಬರ ಶ್ರೇಯೋಭಿವೃದ್ಧಿಗೆ, ಐದು ಶತಮಾನದ ಹಿಂದೆ ದೂರದೃಷ್ಟಿ ಇಟ್ಟುಕೊಂಡು ಬೆಂಗಳೂರನ್ನು ನಿರ್ಮಾಣ ಮಾಡಿದವರು ನಾಡಪ್ರಭು ಕೆಂಪೇಗೌಡ ಅವರು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎ.ಜೆ.ಕೃಷ್ಣೇಗೌಡ ತಿಳಿಸಿದರು.

ಪಟ್ಟಣದ ಮಿನಿ ವಿದಾನಸೌಧ ಸಭಾಂಗಣದಲ್ಲಿ ತಾಲ್ಲೂಕು ಆಡಳಿತ ವತಿಯಿಂದ ಏರ್ಪಡಿಲಾಗಿದ್ದ 517 ನೇ ಕೆಂಪೇಗೌಡರ ಜಯಂತಿ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ಭೂಗರ್ಭ ಮತ್ತು ಆರ್ಥಿಕ ತಜ್ಞರಾಗಿದ್ದ ಕೆಂಪೇಗೌಡರು ದೂರದೃಷ್ಟಿಯುಳ್ಳವರಾಗಿದ್ದರು. ಪ್ರತಿಯೊಂದು ವೃತ್ತಿಯವರನ್ನು ಗೌರವಿಸಿ ಅವರ ಜೀವನದ ವೃದ್ಧಿಗಾಗಿ ವಿವಿಧ ಪೇಟೆಗಳನ್ನು ತೆರೆಯುವ ಮೂಲಕ ಸರ್ವ ಜನಾಂಗದ ಶಾಂತಿಯ ತೋಟವನ್ನಾಗಿಸಿದರು ಎಂದರು.

ತಾಲ್ಲೂಕು ವಕ್ಕಲಿಗರ ಸಂಘದ ಉಪಾಧ್ಯಕ್ಷ ಕೆ.ಎಸ್.ಮಂಜೇಗೌಡ ಅವರು ಮಾತನಾಡಿ, ರಾಜಕಾರಣಿಗಳು ಸ್ವ ಇಚ್ಛೆ ರಾಜಕಾರಣ ಕೈ ಬಿಟ್ಟು ಎಲ್ಲ ವರ್ಗದವರನ್ನೂ ಒಗ್ಗೂಡಿಸುವ ಮಾರ್ಗ ತೋರಿಸಿದವರು ಕೆಂಪೇಗೌಡರು. ರಾಷ್ಟ್ರೀಯ ಹಬ್ಬಗಳ ಸಂದರ್ಭಗಳಲ್ಲಿ, ತಾಲ್ಲೂಕಿನ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿರುವ ಸಮಾಜದ ಗಣ್ಯರನ್ನು ತಾಲ್ಲೂಕು ಆಡಳಿತ ಗಮನಿಸಬೇಕು ಎಂದು ತಿಳಿಸಿದರು.

ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ರಾಜ್ಯಾಧ್ಯಕ್ಷ ಕೊಟ್ರೇಶ್ ಎಸ್.ಉಪ್ಪಾರ್ ಅವರು ಮಾತನಾಡಿ, ಕೆಂಪೇಗೌಡರು ಜಾತ್ಯಾತೀತ, ಧರ್ಮಾತೀತ ವ್ಯಕ್ತಿಯಾಗಿದ್ದರಿಂದ ರಾಜರ ಗುಣಗಳು ಅವರಲ್ಲಿದ್ದವು. ಯಲಹಂಕ ರಾಜಮನೆತನದಲ್ಲಿ ಜನಿಸಿದ ಕೆಂಪೇಗೌಡರು, ಅರಣ್ಯದಲ್ಲಿ ಬೇಟೆಯಾಡುವ ಸಂದರ್ಭದಲ್ಲಿ ಮೊಲವೊಂದನ್ನು ನಾಯಿ ಓಡಿಸಿಕೊಂಡು ಹೋಗುತ್ತಿದ್ದಾಗ ಆ ಮೊಲವು ಹೆದರದೆ ನಾಯಿಗೆ ಎದುರಾಗಿ ನಿಂತುದನ್ನು ಗಮನಿಸಿ, ಈ ಮಣ್ಣಿನಲ್ಲಿ ಧೈರ್ಯದ ವಿಶೇಷತೆ ಇದೆ ಎಂಬುದನ್ನು ಗಮನಿಸಿ, ರಾಜತಾಂತ್ರಿಕ, ಆಡಳಿತ ಮತ್ತು ಆರ್ಥಿಕ ವ್ಯವಸ್ಥೆಯನ್ನು ರೂಪಿಸಿದರು. ಅಂದು ನಿರ್ಮಾಣ ಮಾಡಿದ ಸಾವಿರಾರು ಕೆರೆಗಳನ್ನು ಮುಚ್ಚಿ ನಗರೀಕರಣವಾಗಿ ಪರಿವರ್ತಿಸಿರುವುದರಿಂದ ಪ್ರಕೃತಿ ಕೋಪಕ್ಕೆ ಗುರಿಯಾಗಬೇಕಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಉಪ ತಹಸೀಲ್ದಾರ್ ರಮೇಶ್, ಪ.ಪಂ. ಮುಖ್ಯಾಧಿಕಾರಿ ಮಂಜುನಾಥ್, ತಾಲ್ಲೂಕು ಒಕ್ಕಲಿಗರ ಸಂಘದ ಖಜಾಂಚಿ ಶಾಂತಕೃಷ್ಣ, ತಾಲ್ಲೂಕು ನೌಕರರ ಸಂಘದ ಅಧ್ಯಕ್ಷ ವರದರಾಜು ಉಪಸ್ಥಿತರಿದ್ದರು.

# ಅಡುಗೆ ಅನಿಲದ ಸಿಲಿಂಡರ್ ಸರಬರಾಜುಗೆ ಶುಲ್ಕ ನೀಡುವ ಅಗತ್ಯವಿಲ್ಲ: ಜಿಲ್ಲಾಧಿಕಾರಿ

• ಪ್ರಜೋದಯ ವರದಿ



**ಹಾಸನ:** ಜಿಲ್ಲೆಯ ಎಲ್ಲಾ ಗ್ರಾಹಕರ ಗಮನಕ್ಕೆ ಜೂ -2026 ರ ಮಾಹೆಯಲ್ಲಿ ಅಡುಗೆ ಅನಿಲದ ಸಿಲಿಂಡರನ್ನು ಮನೆಗೆ ಸರಬರಾಜು ಮಾಡುವ ಡೆಲಿವರಿ ಹುಡುಗರಿಗೆ ಗ್ರಾಹಕರು ಡೆಲಿವರಿ ಶುಲ್ಕ ನೀಡುವ ಅಗತ್ಯವಿಲ್ಲ, ಬಿಲ್ಲಿನಲ್ಲಿ ನಮೂದಿಸಿರುವ ಮೊತ್ತವನ್ನು ಮಾತ್ರ ನೀಡುವಂತೆ ತಿಳಿಸಲಾಗಿದೆ

ಗ್ಯಾಸ್ ಏಜೆನ್ಸಿಗಳು ಗೃಹಬಳಕೆಯ ಅನಿಲ ಸಿಲಿಂಡರನ್ನು ನೇರವಾಗಿ ಗೋದಾಮಿನಿಂದ ಗ್ರಾಹಕರಿಗೆ ಸರಬರಾಜು ಮಾಡತಕ್ಕದ್ದು, ಯಾವುದೇ ಕಾರಣಕ್ಕಾಗಿಯೂ ಅನಿಲ ಸಿಲಿಂಡರನ್ನು ರಸ್ತೆ ಬದಿಯಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ, ಮೈದಾನಗಳಲ್ಲಿ ಇಟ್ಟು ಮಾರಾಟ ಮಾಡವಂತಿಲ್ಲ.

ಸರ್ಕಾರದ ಆದೇಶ ಗೃಹೋಪಯೋಗಿ ಗ್ಯಾಸ್ ಸಿಲಿಂಡರ್‌ಗೆ ನಾಗರಿಕ ತಿದ್ದುಪಡಿಯಲ್ಲಿ ನಿಗದಿಪಡಿಸಿರುವಂತೆ Up to 5.00 kms free (no charges), Beyond 5 kms for every round trip km- Rs.1.60 per cylinder (Rs. One Rupee sixty paise only) ಸಿಲಿಂಡರನ್ನು ಮನೆಗೆ ತಲುಪಿಸುವ ಸಂದರ್ಭದಲ್ಲಿ ಯಾವುದೇ ಡೆಲಿವರಿ ಹುಡುಗ ಬಿಲ್‌ನಲ್ಲಿ ನಮೂದಿಸಿದ ಮೊತ್ತಕ್ಕಿಂತ ಹೆಚ್ಚಿನ ಹಣ ಕೇಳಿದಲ್ಲಿ, ಜಂಟಿ ನಿರ್ದೇಶಕರ ಕಚೇರಿ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಹಾಸನ ಕಾರ್ಯಾಲಯಕ್ಕೆ ಹಾಗೂ ಕಚೇರಿಯ ದೂ. ಸಂಖ್ಯೆ 08172-268229 ಮತ್ತು ಆಯಾ ತಾಲ್ಲೂಕಿನ ತಹಶೀಲ್ದಾರ್ ಕಚೇರಿಯ ಆಹಾರ ಶಾಖೆಗೆ ದೂರು ಸಲ್ಲಿಸಬಹುದು ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

## ಹಲವು ಆರೋಗ್ಯ ಸಮಸ್ಯೆಗಳ ಅಪಾಯವನ್ನು ಕಡಿಮೆ ಮಾಡಬಹುದು: ಹೆಮ್ಮಿಗೆ ಮೋಹನ್

# ರಕ್ತದಾನದಿಂದ ಲಕ್ಷಾಂತರ ಜನರ ಜೀವ ಉಳಿಸಬಹುದು

• ಪ್ರಜೋದಯ ವರದಿ



**ಹಾಸನ:** ದೇಶದಲ್ಲಿ ಸುಮಾರು ಒಂದು ಮಿಲಿಯನ್ ಯೂನಿಟ್‌ಗಳಷ್ಟು ರಕ್ತದ ಕೊರತೆ ಇದೆ. ದೇಶದ ಜನಸಂಖ್ಯೆಯಲ್ಲಿ ಶೇ. 1ರಷ್ಟು ಜನರು ವರ್ಷಕ್ಕೊಮ್ಮೆ ಸ್ವಯಂಪ್ರೇರಿತವಾಗಿ ರಕ್ತದಾನ ಮಾಡಿದರೆ ದೇಶದಲ್ಲಿ ಎದುರಾಗಿರುವ ರಕ್ತದ ಕೊರತೆಯನ್ನು ಸಂಪೂರ್ಣವಾಗಿ ನಿವಾರಿಸಬಹುದು ಎಂದು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಹಾಸನ ಜಿಲ್ಲಾ ಶಾಖೆಯ ಸಭಾಪತಿ ಹೆಮ್ಮಿಗೆ ಮೋಹನ್ ಅವರು ತಿಳಿಸಿದರು.

ನಗರದ ಕ್ರೈಸ್ಟ್ ಸ್ಕೂಲ್‌ನಲ್ಲಿ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆ ಹಾಸನ, ಕ್ರೈಸ್ಟ್ ಸ್ಕೂಲ್ ಹಾಗೂ ಕಿರಿಯ ರೆಡ್ ಕ್ರಾಸ್ ಘಟಕದ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ವಿಶ್ವ ರಕ್ತದಾನಿಗಳ ದಿನಾಚರಣೆ ಅಂಗವಾಗಿ ರಕ್ತದಾನ ಶಿಬಿರ ಮತ್ತು ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿ, ವಿಶ್ವ ರಕ್ತದಾನಿಗಳ ದಿನವನ್ನು ರಕ್ತ ಗುಂಪುಗಳಾದ ಎ, ಬಿ, ಎಬಿ ಹಾಗೂ ಓ ಅನ್ನು ಜಗತ್ತಿಗೆ ಪರಿಚಯಿಸಿದ ಆಸ್ಟ್ರಿಯಾದ ಖ್ಯಾತ ವಿಜ್ಞಾನಿ ಕರ್ಲ್ ಲ್ಯಾಂಡ್‌ಸ್ಟೈನರ್ ಅವರ ಜನ್ಮದಿನದ ಅಂಗವಾಗಿ ಆಚರಿಸಲಾಗುತ್ತದೆ. ರಕ್ತದಾನವು ಮತ್ತೊಬ್ಬರ ಜೀವ ಉಳಿಸುವ ಮಹತ್ವದ ಮಾನವೀಯ ಕಾರ್ಯವಾಗಿದ್ದು, ರಕ್ತದಾನ ಮಾಡುವುದರಿಂದ ಹೃದಯ ಸಂಬಂಧಿ ಕಾಯಿಲೆಗಳು, ಪಾರ್ಶವಾಯು (ಸ್ಟ್ರೋಕ) ಸೇರಿದಂತೆ ಹಲವು ಆರೋಗ್ಯ ಸಮಸ್ಯೆಗಳ ಅಪಾಯವನ್ನು ಕಡಿಮೆ ಮಾಡಬಹುದು. ನಿಯಮಿತ ರಕ್ತದಾನದಿಂದ ರೋಗ ನಿರೋಧಕ ಶಕ್ತಿ ವೃದ್ಧಿಯಾಗುವುದರ ಜೊತೆಗೆ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೂ ಅನೇಕ ಪ್ರಯೋಜನಗಳಿವೆ ಎಂದು ಅವರು ವಿವರಿಸಿದರು.

ರೆಡ್ ಕ್ರಾಸ್ ಸಂಸ್ಥೆಯ ನಿರ್ದೇಶಕಿ ಕೆ.ಟಿ. ಜಯಶ್ರೀ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಜೀವನದಲ್ಲಿಯೇ ನಾಯಕತ್ವದ ಗುಣ, ಸಮಾಜಸೇವೆ, ಮಾನವೀಯ ಮೌಲ್ಯಗಳು ಹಾಗೂ ಆದರ್ಶ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ನಿರ್ದೇಶಕ ಜಯಪ್ರಕಾಶ್ ಮಾತನಾಡಿ, ವಿದ್ಯಾರ್ಥಿಗಳು ಹಾಗೂ ಸರ್ವಜನಿಕರು ಸ್ವಯಂಪ್ರೇರಿತವಾಗಿ ರಕ್ತದಾನ ಮಾಡುವ ಮೂಲಕ ಸಮಾಜದತ್ತ ತಮ್ಮ ಜವಾಬ್ದಾರಿಯನ್ನು ಅರಿತು ಸರ್ಥಕ ಬದುಕನ್ನು ರೂಪಿಸಿಕೊಳ್ಳಬೇಕು ಎಂದು ಹೇಳಿದರು.

ನಿರ್ದೇಶಕ ಬಿ.ಆರ್.ಉದಯ್ ಕುಮಾರ್ ಅವರು ವಿದ್ಯಾರ್ಥಿಗಳಿಗೆ ಹಾಡಿನ ಮೂಲಕ ಸಮಾಜದಲ್ಲಿ ಉತ್ತಮ ನಾಗರಿಕರಾಗಿ ಬೆಳೆಯುವ ಸಂದೇಶವನ್ನು ಮನರಂಜನಾತ್ಮಕವಾಗಿ ನೀಡಿದರು.

ಇದೇ ಸಮಯದಲ್ಲಿ ರೆಡ್ ಕ್ರಾಸ್ ಸಂಸ್ಥೆಯ ನಿರ್ದೇಶಕ ಜಯಪ್ರಕಾಶ್ 41 ಬಾರಿ ಹಾಗೂ ಗಿರೀಶ್ 50 ಬಾರಿ ರಕ್ತದಾನ ಮಾಡಿರುವುದಾಗಿ ತಿಳಿಸಿ ಚಪ್ಪಾಳೆ ತಟ್ಟುವ ಮೂಲಕ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕ್ರೈಸ್ಟ್ ಸ್ಕೂಲ್‌ನ ಆಡಳಿತಾಧಿಕಾರಿ ರೆವರೆಂಡ್ ಫಾದರ್ ರಿಜೋ ಥಾಮಸ್ ವಹಿಸಿದ್ದರು.

ಶಿಬಿರದಲ್ಲಿ ಡಾಕ್ಟರ್ ಅಗರವಾಲ್ ಕಣ್ಣಿನ ಆಸ್ಪತ್ರೆ ವತಿಯಿಂದ ನೇತ್ರ ತಪಾಸಣೆ, ವಿ ಕೇರ್ ಆಸ್ಪತ್ರೆ ವತಿಯಿಂದ ದಂತ ತಪಾಸಣೆ ಹಾಗೂ ಎನ್.ಸಿ.ಡಿ. ತಂಡದಿಂದ ರಕ್ತದೊತ್ತಡ (ಬಿ.ಪಿ.), ರಕ್ತದಲ್ಲಿನ ಸಕ್ಕರೆ ಪ್ರಮಾಣ ಹಾಗೂ ಸಾಮಾನ್ಯ ಆರೋಗ್ಯ ತಪಾಸಣೆ ನಡೆಸಲಾಯಿತು. ಶಿಬಿರದಲ್ಲಿ 20 ಮಂದಿ ಸ್ವಯಂಪ್ರೇರಿತವಾಗಿ ರಕ್ತದಾನ ಮಾಡಿದ್ದು, ಅವರಿಗೆ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ವತಿಯಿಂದ ಸ್ಮರಣಿಕೆಯಾಗಿ ಕೀ ಚೈನ್‌ಗಳನ್ನು ನೀಡಿ ಗೌರವಿಸಲಾಯಿತು. ಇದೇ ವೇಳೆ 360ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಪೋಷಕರು ಉಚಿತ ಆರೋಗ್ಯ ತಪಾಸಣೆಯ ಸೌಲಭ್ಯವನ್ನು ಪಡೆದುಕೊಂಡರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ರೆಡ್ ಕ್ರಾಸ್ ಸಂಸ್ಥೆಯ ನಿರ್ದೇಶಕರಾದ ಹೆಚ್.ಡಿ. ಜಯೇಂದ್ರ ಕುಮಾರ್ ಹಾಗೂ ಗಿರೀಶ್, ಆಡಳಿತ ಮಂಡಳೀ ಸದಸ್ಯರು, ಶಾಲೆಯ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿ ಗಳು, ಪೋಷಕರು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

# 30 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ



• ಪ್ರಜೋದಯ ವರದಿ

**ಬೇಲೂರು:** ಪಟ್ಟಣದ ದೇವಾಂಗ ಸಂಘದ ಸಮುದಾಯ ಭವನ ಅಭಿವೃದ್ಧಿ ಹಾಗೂ ಹಿಂಭಾಗದ ರಸ್ತೆ ಅಭಿವೃದ್ಧಿಗೆ 30 ಲಕ್ಷ ರೂ.ಗಳ ಅನುದಾನದಲ್ಲಿ ಕಾಮಗಾರಿ ಮಾಡಿಸಲಾಗುತ್ತಿದೆ ಎಂದು ಶಾಸಕ ಎಚ್.ಕೆ. ಸುರೇಶ್ ಹೇಳಿದರು.

ಪಟ್ಟಣದ ದೇವಾಂಗ ಬೀದಿಯ ದೇವಾಂಗ ಸಂಘದಿಂದ ನಿರ್ಮಿಸುತ್ತಿರುವ ಸಮುದಾಯ ಭವನ ಹಿಂಭಾಗದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಪಟ್ಟಣದ ಹೃದಯ ಭಾಗದಲ್ಲಿರುವ ದೇವಾಂಗ ಸಮಾಜದವರು ತಮ್ಮ ವೃತ್ತಿಯೊಂದಿಗೆ ಯಾವುದೇ ಗೊಂದಲ ಗೋಜಲುಗಳಿಗೆ ಹೋಗದೆ ತಮ್ಮ ಪಾಡಿಗೆ ತಮ್ಮ ಕೆಲಸಗಳನ್ನು ಮಾಡುತ್ತಿದ್ದಾರೆ. ಜತೆಗೆ ವಿಧಾನ ಪರಿಷತ್ ಸದಸ್ಯ ನಾರಾಯಣ್‌ರವರು 25 ಲಕ್ಷ ರೂ, ಅನುದಾನ ನೀಡಿ ಭವನ ನಿರ್ಮಾಣಕ್ಕೆ ಸಹಕಾರ ನೀಡಿದ್ದಾರೆ. ಇವರೊಂದಿಗೆ ನಾನು ಸಹ 5 ಲಕ್ಷ ರೂ.ಗಳ ಅನುದಾನ ನೀಡಿ ಇಂದು ಕಾಮಗಾರಿಗೆ ಭೂಮಿ ಪೂಜೆ ಮಾಡುತ್ತಿದ್ದೇವೆ ಎಂದರು.

ಸಮಾಜದ ಮುಖಂಡರ ಸಮ್ಮುಖದಲ್ಲಿ ಕಾಮಗಾರಿಗೆ ಮುಂದಾಗಿದ್ದು, ಅನುದಾನ ನೀಡಿದ ವಿಧಾನ ಪರಿಷತ್ ಸದಸ್ಯರಾದ ನಾರಾಯಣ್‌ರವರನ್ನು ಅಭಿನಂದಿಸುತ್ತೇನೆ. ಜತೆಗೆ ಗುತ್ತಿಗೆದಾರರು ಕಾಮಗಾರಿಯಲ್ಲಿ ರಾಜಿಯಾಗದೆ ಗುಣಮಟ್ಟದಲ್ಲಿ ಕೆಲಸ ಮಾಡಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಬೇಕು ಎಂದು ಹೇಳದರು.

ದೇವಾಂಗ ಸಂಘದ ಅಧ್ಯಕ್ಷ ವಸಂತ ಶೇಖರ್ ಮಾತನಾಡಿ, ನಮ್ಮ ಸಂಘದ ಬೆಳವಣಿಗೆಯಲ್ಲಿ ಶಾಸಕ ಎಚ್.ಕೆ.ಸುರೇಶ್ ಅವರ ಪಾತ್ರ ಪ್ರಮುಖವಾಗಿದೆ. ಅವರು ಸ್ವತ: ಹಣ ಹಾಗೂ ತಮ್ಮ ಶಾಸಕರ ಅನುದಾನ ನೀಡಿ ಸಮುದಾಯ ಭವನ ಮತ್ತು ರಸ್ತೆ ಅಭಿವೃದ್ಧಿಗೆ ಪೂಜೆ ಮಾಡುವ ಮೂಲಕ ಅನುಕೂಲ ಕಲ್ಪಿಸುತ್ತಿದ್ದು ಶಾಸಕರನ್ನು ಅಭಿನಂದಿಸುತ್ತೇನೆ ಎಂದರು.

ಪುರಸಭೆ ಅಧ್ಯಕ್ಷ ಅಕ್ರಂ ಷರೀಫ್, ದೇವಾಂಗ ಸಂಘದ ಮುಖಂಡರಾದ ಕುಮಾರ್, ಯೋಗೀಶ, ಮೋಹನ್, ಶೇಖರ್, ರಂಗನಾಥ್, ಸುಬ್ಬಯ್ಯ ಶೆಟ್ರು, ದಿನೇಶ್, ಪ್ರಸಾದ್, ಎಲೆ ಬಾಬು, ಸೋಮಶೇಖರ್ ಸೇರಿದಂತೆ ಇನ್ನಿತರರು ಹಾಜರಿದ್ದರು.

# ಬೆಂಗಳೂರು ಅಭಿವೃದ್ಧಿಯ ಹರಿಕಾರ ಕೆಂಪೇಗೌಡ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಬೆಂಗಳೂರು ಸಿಲಿಕಾನ್ ಸಿಟಿಯಾಗಿ ವಿಶ್ವವೇ ತಿರುಗಿ ನೋಡುವಂತೆ ಬೆಳೆದಿದೆ ಎಂದರೆ ಅದಕ್ಕೆ ನಾಡಪ್ರಭು ಕೆಂಪೇಗೌಡರು ಕಾರಣ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಅವರು ಹೇಳಿದರು.

ಪಟ್ಟಣದ ಕರ್ನಾಟಕ ರಾಜ್ಯರಸ್ತೆ ಸಾರಿಗೆ ಸಂಸ್ಥೆಯ ಘಟಕದಲ್ಲಿ ಶನಿವಾರ ನಡೆದ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಬೆಂಗಳೂರು ನಗರವನ್ನು ವ್ಯವಸ್ಥಿತವಾಗಿ ನಿರ್ಮಿಸುವಲ್ಲಿ ಕೆಂಪೇಗೌಡರು ಪ್ರಮುಖ ಪಾತ್ರ ವಹಿಸಿದ್ದಾರೆಂದರು.

ಅಂದು ಅವರು ನಿರ್ಮಿಸಿದ ಬೆಂಗಳೂರು ನಗರ ಇಂದು ಬೃಹದಾಕಾರವಾಗಿ ಬೆಳೆದು ವಿಶ್ವ ಭೂಪಟದಲ್ಲಿ ಗುರುತಿಸಿಕೊಂಡಿದೆ. ಬೆಂಗಳೂರು ನಗರ ನಿರ್ಮಿಸಿದ ಕೆಂಪೇಗೌಡರ ಹೆಸರನ್ನು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಇಡಲಾಗಿದ್ದು, ಕೆಂಪೇಗೌಡರ 108 ಅಡಿ ಪ್ರತಿಮೆ ಸ್ಥಾಪನೆ ಮಾಡಲಾಗಿದೆ. ಮಣ್ಣಿನ ಕೋಟೆಯಿಂದ ಕಟ್ಟಿದ ಹಳ್ಳಿ ಪ್ರದೇಶ ವಾಗಿದ್ದ ಬೆಂದಕಾಳೂರನ್ನು ನಗರವಾಗಿ ನಿರ್ಮಿಸಿ ದೇಶ-ವಿದೇಶಿಗರಿಗೆ ಪರಿಚಯಿಸಲಾ ಗಿದೆ ಎಂದು ತಿಳಿಸಿದರು.

ಕೆಂಪೇಗೌಡರ ಶೌರ್ಯ, ಸಾಹಸ, ದೂರದೃಷ್ಟಿಗೆ ಹೆಸರಾಗಿದ್ದು ಬೆಂಗಳೂರು ನಗರವನ್ನು ಜಾತಿ ಆಧಾರಿತವನ್ನಾಗಿ ಮಾಡದೇ ವೃತ್ತಿ ಆಧಾರಿತ ಭೂಮಿಯನ್ನಾಗಿ ಮಾಡಿ



ನೂರಾರು ವರ್ಷ ಗಳ ಹಿಂದೆಯೇ ರಸ್ತೆ ಬದಿಯ ಸಾಲು ಮರಗಳು, ದನ-ಕರು, ಪ್ರಾಣಿ-ಪಕ್ಷಿಗಳು ನೀರು ಕುಡಿ ಯಲು ನೀರಿನ ತೊಟ್ಟಿ ಹಾಗು ರೈತರ ಅನುಕೂಲಕ್ಕಾಗಿ ಕೆರೆಕಟ್ಟೆಗಳ ನಿರ್ಮಾಣ ಮಾಡಿದ ಗೌಡರು ತಮ್ಮ ಅಧಿಕಾರದಲ್ಲಿ ಜಾತ್ಯಾತೀತ ಮನೋಭಾವನೆ ಯೊಂದಿಗೆ ಆಳ್ವಿಕೆ ಮಾಡಿದ್ದಾರೆಂದರು.

ಚನ್ನರಾಯಪಟ್ಟಣದಲ್ಲಿ ಗುರುಭವನದ ಬಳಿ ಇರುವ ಕೆಂಪೇಗೌಡ ವೃತ್ತದಲ್ಲಿ ಮುಂಬರುವ ಕೆಂಪೇಗೌಡ ಜಯಂತಿ ಒಳಗೆ ಅಶ್ವರೂಢ ಕೆಂಪೇಗೌಡರ ಪ್ರತಿಮೆ ಸ್ಥಾಪನೆಗೆ ನಿರ್ಧಾರ ಮಾಡಲಾ ಗಿದ್ದು, ಜು.5ರಂದು ನವೋದಯ ವಿದ್ಯಾಸಂಸ್ಥೆಯಲ್ಲಿ ಸಭೆ ಕರೆಯಲಾಗಿದೆ. ಎಲ್ಲಾ ಸಂಘಟನೆ ಗಳ ಮುಖಂಡರು ಭಾಗವಹಿಸಿ ಸಲಹೆ ಸಹಕಾರ ನೀಡಬೇಕೆಂದರು.

**1 ಕೋ.ರೂ. ಅನುದಾನಕ್ಕೆ ಮನವಿ**

ಚನ್ನರಾಯಪಟ್ಟಣ ಘಟಕದಿಂದ ನಿತ್ಯ 107 ಬಸ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಅದೇ ರೀತಿ ಬೇರೆ ಜಿಲ್ಲೆಯಿಂದ ಸಾವಿರಕ್ಕೂ ಹೆಚ್ಚು ಬಸ್ ಬಂದು ಹೋಗುತ್ತವೆ. ಪ್ರಯಾಣಿಕರ ಅನು ಕೂಲಕ್ಕಾಗಿ ನಿಲ್ದಾಣದಲ್ಲಿ ಕುಡಿಯುವ ನೀರು ಸೌಕರ್ಯ, ಸಿಸಿಟಿವಿ ಕ್ಯಾಮರಾ ಅಳವಡಿಸ ಲಾಗಿದೆ. ಪ್ರವೇಶ ದ್ವಾರದ ಬಲ ಭಾಗದಲ್ಲಿ ಹೈಮಾಸ್ಟ್ ದೀಪ ಅಳವಳಡಿಸಲಾ ಗಿದೆ. ಮುಂದಿನ ದಿನಗಳಲ್ಲಿ ಎಡಭಾಗದಲ್ಲೂ ಬೆಳಕಿನ ವ್ಯವಸ್ಥೆ ಮಾಡಲಾಗುವುದು. ಡಿಪೋ ಅಭಿವೃದ್ಧಿಗೆ ಒಂದು ಕೋಟಿ ರೂ. ಅನುದಾನ ಬಿಡುಗಡೆ ಮಾಡುವಂತೆ ಸಾರಿಗೆ ಸಚಿವರಿಗೆ ಮನವಿ ಸಲ್ಲಿಸಿದ್ದು, ಅನು ದಾನ ಲಭ್ಯತೆ ಆಧಾ ರದ ಮೇಲೆ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾ ಗುವುದೆಂದು ತಿಳಿಸಿದರು.

ಬಸ್ ನಿಲ್ದಾಣದಲ್ಲಿ ಹಾಸನದ ಮತ್ತು ಗ್ರಾಮಾಂತರ ಭಾಗದ ಬಸ್ ನಿಲುಗಡೆ ಜಾಗದಲ್ಲಿ ಪ್ರಯಾಣಿಕರು ಬಿಸಿಲಿನಲ್ಲಿ ಕಾಯು ವಂತಾಗಿದೆ. ಹಾಗಾಗಿ 17 ಲ. ರೂ. ವೆಚ್ಚದಲ್ಲಿ ಶೆಲ್ಟರ್ ನಿರ್ಮಿಸಲು ಶಂಕುಸ್ಥಾಪನೆ ನೆರವೇರಿ ಸಿದ್ದು ಶೀಘ್ರವಾಗಿ ಕಾಮಗಾರಿ ಕೈಗೊಳ್ಳಲಾ ಗುವುದು ಎಂದು ತಿಳಿಸಿದರು.

ನವೋದಯ ವಿದ್ಯಾ ಶಾಲೆಯ ಉಪನ್ಯಾಸಕ ಮಂಜಪ್ಪ ಕೆಂಪೇಗೌಡರ ಜೀವನ ಚರಿತ್ರೆ ಕುರಿತು ಸವಿವರವಾಗಿ ತಿಳಿಸಿಕೊಟ್ಟರು. ಸಾರಿಗೆ ಸಂಸ್ಥೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತ ರಾದ ಸುರೇಶ್ ಮೇಟಿಕೆರೆ, ಬಸವ ರಾಜು, ಹೊನ್ನೇಗೌಡ, ಹುಚ್ಚೇಗೌಡ,ಸಿ.ಎಸ್. ಮಧು ಸೂಧನ್, ಚಿದಾನಂದ್ ದ್ಯಾವನೂರು, ಕುಶಲಕರ್ಮಿ ಎನ್.ರಾಮಚಂದ್ರ ಅವರಿಗೆ ಸಂಸ್ಥೆಯ ವತಿಯಿಂದ ಸನ್ಮಾನಿಸಲಾಯಿತು.

ಘಟಕ ವ್ಯವಸ್ಥಾಪಕ ಜ್ಞಾನೇಶ್ ಅಧ್ಯಕ್ಷತೆ ವಹಿಸಿದ್ದರು, ಬಿಜೆಪಿ ಮುಖಂಡ ಸಿ.ಆರ್. ಚಿದಾನಂದ, ಸಾರ್ವಜನಿಕ ಆಸ್ಪತ್ರೆ ಶಸ್ತ್ರ ಚಿಕಿತ್ಸಕ ಡಾ||ಧರಣೇಶ್, ಕೆಂಪೇಗೌಡ ವೇದಿಕೆ ಸಂಸ್ಥಾಪಕ ಅಧ್ಯಕ್ಷ ಆನಂದ್ ಕಾಳೆನಹಳ್ಳಿ, ಎಪಿಎಂಸಿ ಮಾಜಿ ಅಧ್ಯಕ್ಷ ವಳಗೇರಹಳ್ಳಿ ಮಂಜುನಾಥ್, ಸಾರಿಗೆ ಸಂಸ್ಥೆಯ ಎಇಇ ಯಾದವ್ ಮತ್ತಿತರರಿದ್ದರು.

## ಕೆಂಪೇಗೌಡರ ನಗರಾಭಿವೃದ್ಧಿ ಪರಿಕಲ್ಪನೆ ಇಂದಿಗೂ ಜೀವಂತ

» ಮೊದಲನೇ ಪುಟದಿಂದ

ಮುಖಿ ಚಿಂತನೆ ಇಂದಿನ ಪೀಳಿಗೆಗೆ ದಾರಿದೀಪವಾಗಿದೆ. ಎಲ್ಲರೂ ಒಟ್ಟಾಗಿ ಬದುಕಬೇಕೆಂಬ ಉದ್ದೇಶದಿಂದಲೇ ಪ್ರತಿಯೊಂದು ಸಮಾಜಕ್ಕೂ ಪ್ರಾತಿ ನಿಧ್ಯ ನೀಡಿದ್ದರು ಎಂದರು.

**ಒಕ್ಕಲಿಗ ಸಮುದಾಯದಲ್ಲಿ ಹುಟ್ಟಿದ್ದೆ ಹೆಮ್ಮೆ**

ಸಂಸದ ಶ್ರೇಯಸ್ ಪಟೇಲ್ ಅವರು ಮಾತನಾಡಿ, ಬೆಂಗಳೂರು ಇಂದು ವಿಶ್ವದ ಗಮನ ಸೆಳೆಯು ತ್ತಿರುವ ನಗರವಾಗಿದೆ. ಅದರ ಅಡಿ ಪಾಯ ಹಾಕಿದ ಕೀರ್ತಿ ನಾಡಪ್ರಭು ಕೆಂಪೇಗೌಡರಿಗೆ ಸಲ್ಲುತ್ತದೆ. ದೂರ ದೃಷ್ಟಿಯ ನಾಯಕತ್ವ ಹೇಗಿರ ಬೇಕೆಂಬುದಕ್ಕೆ ಅವರ ಜೀವನವೇ ಮಾದರಿ. ಒಕ್ಕಲಿಗ ಸಮುದಾಯದಲ್ಲಿ ಹುಟ್ಟಿ ಸಂಸದನಾಗಿ ಸೇವೆ ಸಲ್ಲಿಸು ತ್ತಿರುವುದು ಹೆಮ್ಮೆಯ ಸಂಗತಿ. ಸಮಾಜದ ಬೇಡಿಕೆಗೆ ಸ್ಪಂದಿಸಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಗರಾಭಿವೃದ್ಧಿ ಪ್ರಾಧಿಕಾರ ದಿಂದ 5 ಕೋಟಿ ರೂ. ವೆಚ್ಚದ ಸಿಎ ನಿವೇಶನ ನೀಡಿದ್ದಾರೆಂದು ಹೇಳಿದರು.

**ನವ ಸಮಾಜ ನಿರ್ಮಾಣ**

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಟೇಲ್ ಶಿವಪ್ಪ ಅವರು ಮಾತನಾಡಿ, ಎಲ್ಲಾ ಜಾತಿ, ಜನಾಂಗಗಳನ್ನು ಒಟ್ಟಿಗೆ ಕರೆ ದೊಯ್ಯುವ ಮೂಲಕ ನವ ಸಮಾಜ ನಿರ್ಮಾಣ ಮಾಡಿದ ನಾಯಕ ಕೆಂಪೇಗೌಡರು. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅವಧಿಯಲ್ಲಿ ಕೆಂಪೇಗೌಡರ ಜಯಂತಿಯನ್ನು ಸರ್ಕಾರದಿಂದಲೇ ಆಚರಿಸುವಂತೆ ಆದೇಶ ಮಾಡಿದರು. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೂ ಸಹ ಸಮಾನ ಮನೋ ಭಾವದಿಂದ ಸಮಾಜವನ್ನು ಮುನ್ನಡೆ ಸಲಿದ್ದಾರೆಂಬ ವಿಶ್ವಾಸ ವ್ಯಕ್ತಪಡಿಸಿದರು.

**ಆಧುನಿಕ ನಗರ ನಿರ್ಮಾಣ**

ಮೈಸೂರು ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದ ನಿವೃತ್ತ ಪ್ರಾಧ್ಯಾಪಕ ಎನ್.ಎಸ್.ಗಂಗರಾಜು ಅವರು ಉಪನ್ಯಾಸ ನೀಡಿ, ಇತಿಹಾಸ ಪುರುಷ ನಾಡಪ್ರಭು ಕೆಂಪೇಗೌಡರು ವಿಜಯನಗರ



ಸಾಮ್ರಾಜ್ಯದಿಂದ ಪ್ರೇರಣೆ ಪಡೆದು ಬೆಂಗಳೂರಿ ನಂತಹ ಆಧುನಿಕ ನಗರ ನಿರ್ಮಾಣ ಮಾಡಿದ್ದಾರೆ. ಒಂಬತ್ತು ಹೆಬ್ಬಾಗಿಲುಗಳನ್ನು ನಿರ್ಮಾಣ ಮಾಡಿ, ಕರಕುಶಲ ಕಾರ್ಮಿಕರಿಗೆ ವೃತ್ತಿಗೆ ಪೂರಕವಾದ ಪೇಟೆಗಳನ್ನು ನಿರ್ಮಿಸಿಕೊಟ್ಟಿದ್ದಾರೆ. ಕೃಷಿಗೆ ಒತ್ತು ನೀಡಿ ಹಲವು ಕೆರೆಕಟ್ಟೆಗಳನ್ನು ಕಟ್ಟಿಸಿದ್ದಾರೆಂದು ಕೊಡುಗೆಗಳನ್ನು ವಿವರಿಸಿದರು.

**ಉದ್ಯೋಗಾಧಾರಿತ ನಗರಾಭಿವೃದ್ಧಿ**

ಜಿಲ್ಲಾಪಂಚಾಯಿತಿಮುಖ್ಯಕಾರ್ಯನಿರ್ವಹಣಾಧಿಕಾರಿ ಶುಭಂ ಶುಕ್ಲಾ ಅವರು ಮಾತನಾಡಿ, ಕೆಂಪೇಗೌಡರು ಕೋಟೆಗಳ ಜೊತೆಗೆ ಕೆರೆ, ಕಟ್ಟೆ, ಕಲ್ಯಾಣಿ ನಿರ್ಮಿಸಿ ನೀರಿನ ಸಂರಕ್ಷಣೆಗೆ ಆದ್ಯತೆ ನೀಡಿದರು. ವಿವಿಧ ವೃತ್ತಿಗಳ ಜನರಿಗೆ ಪ್ರತ್ಯೇಕ ಪೇಟೆಗಳನ್ನು ನಿರ್ಮಿಸುವ ಮೂಲಕ ಉದ್ಯೋಗಾಧಾರಿತ ನಗರಾಭಿ ವೃದ್ಧಿಯ ಪರಿಕಲ್ಪನೆಯನ್ನು ಜಾರಿ ಗೊಳಿಸಿದರು. ಅವರ ಜೀವನ ಚರಿತ್ರೆ ಮುಂದಿನ ಪೀಳಿಗೆಗೆ ದಾರಿದೀಪವಾ ಗಲಿದೆ ಎಂದು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತ, ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಿ. ಕೃಷ್ಣೇಗೌಡ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಎಚ್.ಎಲ್.ಮಲ್ಲೇಶಗೌಡ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ರಘುಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕ ತಾರಾ ನಾಥ್ ಇತರರು ಉಪಸ್ಥಿತರಿದ್ದರು.

## ಗಾಯಾಳು ನೆರವಿಗೆ ಬಾರದ ಕ್ರಷರ್ ಮಾಲೀಕ: ದೂರು ದಾಖಲು

» ಮೊದಲನೇ ಪುಟದಿಂದ

ಆದರೆ ಈಗ ಸಂಪರ್ಕಕ್ಕೆ ಸಿಗುತ್ತಿಲ್ಲ. ಮೊದಲೇತಿಳಿಸಿದ್ದರೆ ಸರ್ಕಾರಿ ಆಸ್ಪತ್ರೆಗೆ ದಾಖಲಿಸುತ್ತಿದ್ದೇವೆಂದು ಗಾಯಾಳು ಚಂದನ್ ಅವರ ತಂದೆ ಎಂ.ಕೆ. ಮಂಜು ಅಳಲು ತೋಡಿಕೊಂಡರು.

ಕಳೆದ ಒಂದು ತಿಂಗಳಿದ ಚಂದನ್ ಹಿಟಾಚಿ ಚಾಲಕನಾಗಿ ಕೆಲಸ ಮಾಡಿಕೊಂಡಿದ್ದರು. ಕ್ರಷರ್‌ನ ಗುಮಾಸ್ತ ಶಂಕರ್ ಅವರ ಸೂಚನೆ ಮೇರೆಗೆ ಹಿಟಾಚಿ ರಿಪೇರಿಗೆ ಕೈಜೋಡಿಸ ಬೇಕಾಯಿತು ಎನ್ನುವುದು ಗಾಯಾಳು ಚಂದನ್ ಹೇಳಿಕೆಯಾಗಿದೆ.

ಮುಂಜಾಗ್ರತಾ ಕ್ರಮ ವಹಿಸದೆ 2 ಟನ್ ತೂಕದ ಬೂಮ್ ಅನ್ನು ಹಳೇ ಬೆಲ್ಟ್ ಬಳಸಿ ಹಿಡಿದು ಕೆಲಸ ನಿರ್ವಹಿಸಿದ್ದು, ಬೆಲ್ಟ್ ತುಂಡಾಗಿ ಕೈ, ಕಾಲು ಗಂಭೀರ ಗಾಯಗೊಳ್ಳಲು ಕಾರಣ ವಾಗಿದೆ. ನನಗೆ ನ್ಯಾಯ ದೊರಕಿಸಿಕೊಡಬೇಕೆಂದು ಅವರು ಗ್ರಾಮಾಂತರ ಠಾಣೆಗೆ ದೂರು ಸಲ್ಲಿಸಿದ್ದಾರೆ.

ಈ ಸಂಬಂಧ ಕ್ರಷರ್ ಮಾಲೀಕ ಎಂ.ಜಿ.ಮೋಹನ್, ಗುಮಾಸ್ತ ಶಂಕರ್ ಹಾಗು ಹಿಟಾಚಿ ಮೆಕ್ಯಾನಿಕ್ ಶಾಂತಿಗ್ರಾಮದ ದೊರೆ ಎಂಬುವವರ ವಿರುದ್ಧ ದೂರು ದಾಖಲಾಗಿದೆ.

## ಟೌನ್‌ಶಿಪ್‌ಗೆ ಮರುಜೀವ ನೀಡಿದ್ದೇ ಕಾಂಗ್ರೆಸ್

» ಮೊದಲನೇ ಪುಟದಿಂದ

ಪ್ರಶ್ನಿಸಿದ ಅವರು, ಸತ್ತವರ ಹೆಸರಿನಲ್ಲಿ ಹೆಬ್ಬೆಟ್ಟು ಹಾಕಿಸಿ ಡಿನೋಟಿಫಿಕೇಷನ್ ಮಾಡಿಸಿದ್ದ ಭಯಅವರಿಗೆಕಾಡುತ್ತಿರಬೇಕೆಂದು ಟೀಕಿಸಿದರು.

ಇದೇ ಮುಖ್ಯಮಂತ್ರಿ ಬಿಎಂಐಸಿಪಿ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಯೋಜನೆಗೆ ಭೂಮಿ ಕಳೆದು ಕೊಂಡ ರೈತರು ಅರ್ಜಿ ಹಾಕಿ 30 ವರ್ಷದಿಂದ ಕಾಯುತ್ತಿದ್ದಾರೆ. ಅವರಿಗೆ ನಿವೇಶನ ನೀಡಿಲ್ಲ. ಬಿಡದಿ ಟೌನ್‌ಶಿಪ್ ಯೋಜನೆ ಇನ್ನೊಂದು ನೈಸ್ ಯೋಜನೆಯಾಗಲಿದೆ. ಈ ಯೋಜನೆಗೆ ನಾಲ್ಕೂವರೆ ಸಾವಿರ ರೈತರು ಅರ್ಜಿ ಹಾಕಿ ಆಕ್ಷೇಪ ವ್ಯಕ್ತಪಡಿಸಿದರೂ ಪರಿಗಣಿಸಿಲ್ಲ. ಈಗ ಪ್ರಜಾ ಸೇವಾ ಇಲಾಖೆ ಮಾಡುತ್ತಾರಂತೆ. ಅದು ಇನ್ನೊಂದು ನೈಸ್ ಕಂಪನಿ ಆಗದಿರಲಿ ಎಂದು ವ್ಯಂಗ್ಯವಾಡಿದರು.

**ಕಾನೂನು ಹೋರಾಟದ ಎಚ್ಚರಿಕೆ**

ಡಿನೋಟಿಫಿಕೇಷನ್ ವಿರೋಧಿಸಿ 450 ದಿನಗಳಿಗೂ ಹೆಚ್ಚು ಕಾಲದಿಂದ ರೈತರು ಧರಣಿ ನಡೆಸು ತ್ತಿರುವ ಸ್ಥಳಕ್ಕೆ ಹೋಗೋಣ ಬನ್ನಿ ಎಂದು ಮುಖ್ಯಮಂತ್ರಿಗೆ ಆಹ್ವಾನಿಸಿದ ಕುಮಾರಸ್ವಾಮಿ, ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ರೈತರ ಹಿತ ಕಾಪಾಡಲು ಕಾನೂನು ಹೋರಾಟ ಮಾಡಲಾಗುವುದು. ದಾಖಲೆ ಸಿದ್ಧಪಡಿಸಲು ತಂಡ ರಚಿಸಲಾಗಿದೆ. ಸದ್ಯದಲ್ಲೇ ಡಿನೋಟಿಫಿಕೇಷನ್ ವಿರುದ್ಧ ನ್ಯಾಯಾಲಯದ ಮೊರೆ ಹೋಗಲಾಗುವುದೆಂದರು.

ನಾಗರಬಾವಿಯಲ್ಲಿ ಬಾಡಿಗೆ ಮನೆ ಮಾಡಿ ವ್ಯವಹಾರ ನಡೆಸಲಾಗುತ್ತಿದೆ. ಎಷ್ಟು ಜನ ಜೈಲಿಗೆ ಹೋಗೋಬೇಕೋ ತಯಾರಾಗಿ. 20 ವರ್ಷದ ಹಳೆಯ ಈ ಯೋಜನೆಯನ್ನು ಕೈಬಿಟ್ಟರೆ ರೈತರು ಹಿತ ಕಾಪಾಡಿದಂತಾಗುತ್ತದೆಂದು ಹೇಳಿದರು.

## ವೆನೆಜುವೆಲಾ ಭೂಕಂಪ: ಸಾವಿನ ಸಂಖ್ಯೆ 920ಕ್ಕೆ ಏರಿಕೆ

• ಪ್ರಜೋದಯ ವರದಿ

**ಲಾಗ್ವೆರಾ:** ವೆನೆಜುವೆಲಾದಲ್ಲಿ ಸಂಭವಿಸಿದ ಎರಡು ಪ್ರಬಲ ಭೂಕಂಪಗಳಿಂದ ಮೃತ ಪಟ್ಟವರ ಸಂಖ್ಯೆ ಶುಕ್ರವಾರದ ವೇಳೆಗೆ 920ಕ್ಕೆ ಏರಿಕೆಯಾಗಿದೆ. ಸಹಸ್ರಾರು ಮಂದಿ ನಾಪತ್ತೆ ಯಾಗಿದ್ದಾರೆ. ಅವಶೇಷಗಳ ಅಡಿಯಲ್ಲಿ ಸಿಲುಕಿ ರುವವರಿಗಾಗಿ ರಕ್ಷಣಾ ಪಡೆಗಳು ಶೋಧ ಕಾರ್ಯಾಚರಣೆ ಮುಂದುವರಿಸಿವೆ.

ಕ್ಯಾರಕಾಸ್‌ನಲ್ಲಿ ಕಟ್ಟಡಗಳು ಉರುಳಿರುವ ಪ್ರದೇಶಕ್ಕೆ ಭೇಟಿ ನೀಡಿದ ಮಧ್ಯಂತರ ಸರ್ಕಾರದ ನಾಯಕಿ ಡೆಲ್ಸಿ ರೊಡ್ರಿಗಸ್ ವಿರುದ್ಧ ಸ್ಥಳೀಯ ನಿವಾಸಿಗಳು ತೀವ್ರ ಆಕ್ರೋಶ ವ್ಯಕ್ತ ಪಡಿಸಿದ್ದಾರೆ. ಸರ್ಕಾರದಿಂದ ಸೂಕ್ತ ಸ್ಪಂದನೆ ಅಥವಾ ತುರ್ತು ಪರಿಹಾರ ದೊರೆಯದ ಹಿನ್ನೆಲೆಯಲ್ಲಿ ಸಾರ್ವಜನಿಕರ ಅಸಮಾಧಾನ ಹೆಚ್ಚಾಗಿದೆ.

ರಿಕ್ಟರ್ ಮಾಪನದಲ್ಲಿ 7.2 ಮತ್ತು 7.5 ತೀವ್ರತೆಯ ಎರಡು ಪ್ರಬಲ ಭೂಕಂಪಗಳು ಬುಧವಾರ ಸಂಜೆ ಕೇವಲ ಒಂದು ನಿಮಿಷದ ಅಂತರದಲ್ಲಿ ಸಂಭವಿಸಿವೆ. ಇದರಿಂದಾಗಿ ದೇಶದ ಉತ್ತರ ಭಾಗದಲ್ಲಿ ಹಲವು ಕಟ್ಟಡಗಳು ನೆಲಸಮಗೊಂಡಿವೆ.

## ವಿಶ್ವವಿಖ್ಯಾತ ನಗರ ಸೃಷ್ಟಿಸಿದ ಕೆಂಪೇಗೌಡ

• ಪ್ರಜೋದಯ ವರದಿ

**ಹೊಳೆನರಸೀಪುರ:** ನಾಡಪ್ರಭು ಕೆಂಪೇಗೌಡರ ಪರಿಶ್ರಮದಿಂದ ಬೆಂಗಳೂರು ನಗರ ವಿಶ್ವದ ಲ್ಲಿಯೇ ಪ್ರಖ್ಯಾತಿ ಪಡೆದಿದೆ ಎಂದು ನಿವೃತ್ತ ಪ್ರಾಂಶುಪಾಲ ಹೆಚ್.ಎಸ್ .ಪ್ರಭುಶಂಕರ್ ಅವರು ಹೇಳಿದರು.

ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣೆ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಕೆಂಪೇಗೌಡರು ದಕ್ಷ ಮತ್ತು ಪ್ರಾಮಾಣಿಕತೆಯನ್ನು ಮೈಗೂಡಿಸಿಕೊಳ್ಳುವುದರ ಮೂಲಕ ಬೆಂಗಳೂರನ್ನು ಸದೃಢವಾಗಿ ಕಟ್ಟಿ ಸುಂದರ, ಐತಿಹಾಸಿಕ ನಗರವನ್ನಾಗಿ ರೂಪಿಸಿದರು. ಅವರ ದೂರ ದೃಷ್ಟಿ, ಸರಳತೆ, ಧೈರ್ಯ ಮತ್ತು ಸ್ಥೈರ್ಯವನ್ನು ಇತರರು ಮೈಗೂಡಿಸಿಕೊಳ್ಳುವುದರ ಮೂಲಕ ಕೆಂಪೇಗೌಡರ ಆದರ್ಶ ಮತ್ತು ತತ್ವಗಳನ್ನು ಅಳವಡಿಸಿಕೊಳ್ಳಬೇಕೆಂದು ಕರೆ ನೀಡಿದರು.

ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ದೇವರಾಜ್ ಅವರು ಮಾತನಾಡಿ, ನಾಡಪ್ರಭು ಕೆಂಪೇಗೌಡರು ವಿಜಯನಗರ ಸಾಮ್ರಾಜ್ಯದ ಸಾಮಂತರಾಗಿದ್ದವರು. ಬೆಂಗಳೂರು ನಗರದ ನಿರ್ಮಾತೃರಾಗಿ ಅದಕ್ಕೆ ಆಧುನಿಕ ಸ್ಪರ್ಶ ಕಲ್ಪಿಸಿದರು. ಎಲ್ಲಾ ವರ್ಗದ, ಸಮಾಜಗಳ ಜನರಿಗೆ ಅನುಕೂಲವಾಗುವ



ನಿಟ್ಟಿನಲ್ಲಿ ದೂರ ದೃಷ್ಟಿಯಿಂದ ನವನಗರ ನಿರ್ಮಾ ಣದಲ್ಲಿ ತಮ್ಮದೇಯಾದ ಕೊಡುಗೆ ನೀಡಿದ್ದಾರೆ. 64 ಪೇಟೆಗಳನ್ನು ನಿರ್ಮಿಸಿ 4 ಗೋಪುರ, ಎಲ್ಲಾ ಸಮಾಜದ ಜನರಿಗೆ ದೇವಾಲಯಗಳು ಹೀಗೆ ಪ್ರತಿಯೊಬ್ಬರಿಗೂ ಸಾಮಾಜಿಕ, ಆರ್ಥಿಕ ಹಾಗು ಶೈಕ್ಷಣಿಕ ಪ್ರಗತಿಗೆ ಅನುಕೂಲ ವಾಗುವ ನಿಟ್ಟಿನಲ್ಲಿ ನಗರ ನಿರ್ಮಿಸಿ ದ್ದಾರೆಂದರು.

ಕಸಬಾ ಹೋಬಳಿ ರಾಜಸ್ವ ನಿರೀಕ್ಷಕ ಅವಿನಾಶ್, ಶಿರಸ್ತೇದಾರ್ ಲೋಕೇಶ್, ನೋಂದಣಾ ಧಿಕಾರಿ ರಾಕೇಶ್, ದ್ವಿತೀಯ ದರ್ಜೆ ಸಹಾಯಕ ಪ್ರಸಾದ್, ಶಿಕ್ಷಕ ರವಿಕುಮಾರ್ ಮತ್ತಿತರರಿದ್ದರು.

ಅಧಿಕಾರಿಗಳ ಅನುಪಸ್ಥಿತಿಗೆ ಆಕ್ರೋಶ

ತಾಲ್ಲೂಕು ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಕೆಂಪೇಗೌಡರ ಜಯಂತಿಗೆ ಅಧಿಕಾರಿಗಳು ಹಾಗು ಪ್ರಮುಖ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಗೈರಾಗಿದ್ದಕ್ಕೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು.

ತಹಶೀಲ್ದಾರ್ ಅವರ ಲಿಖಿತ ಆದೇಶವಿದ್ದರೂ ಕಾರ್ಯಕ್ರಮಕ್ಕೆ ತಾಲ್ಲೂಕಿನ ಯಾವುದೇ ಉನ್ನತ ಮಟ್ಟದ ಅಧಿಕಾರಿಗಳು ಭಾಗವಹಿಸಲಿಲ್ಲ. ಅದರಿಂದಾಗಿ ನಾಡಪ್ರಭುವಿನ ಜಯಂತಿ ಅತ್ಯಂತ ನೀರಸವಾಗಿ ನಡೆಯುವಂತಾಯಿತು.

## ಬೋರನಕೊಪ್ಪಲು ಗೋ ಶಾಲೆ ಅಭಿವೃದ್ಧಿಗೆ 1 ಕೋಟಿ ರೂ.

» ಮೊದಲನೇ ಪುಟದಿಂದ

ಕಣಕಟ್ಟೆ, ಗಂಡಸಿ, ಜಾವಗಲ್, ಬಾಣಾವರ ಹಾಗು ಅರಸೀಕೆರೆ ಸೇರಿ ವಿವಿಧ ಹೋಬಳಿ ಕೇಂದ್ರಗಳಲ್ಲಿ 35 ಪಶು ವೈದ್ಯಕೀಯ ಆಸ್ಪತ್ರೆ ಗಳು ಕಾರ್ಯ ನಿರ್ವಹಿಸುತ್ತಿವೆ. ಹೋರಿ, ಹಸು, ಕರುಗಳ ಸಂಖ್ಯೆ ಅಂದಾಜು 92 ಸಾವಿರದಷ್ಟುದ್ದು 2-3 ಸಾವಿರ ಎಮ್ಮೆಗಳಿವೆ. ಉಳುಮೆಗೆ ಬಾರದ, ಹಾಲು ಕೊಡದ ಹಾಗು ಎಳೆಯ ಗಂಡು ಕರುಗಳಿಗೆ ಗೋಶಾಲೆ ಮರುಜನ್ಮ ನೀಡುವ ತಾಣವಾಗಿ ನೆರವಾಗಿದೆ. ಬಾಣಾವರ ಹಾಗು ಕಸ್ತೂರಬಾ ಸೇವಾಶ್ರಮದ ಆವರಣದಲ್ಲಿಯೂ ಗೋ ರಕ್ಷಣೆಗೆ ಪರಿವಾರದ ಮುಖಂಡರು ಶ್ರಮಿಸುತ್ತಿರುವುದು ಆಶಾದಾಯಕ ಬೆಳವಣಿಗೆ ಯಾಗಿದೆ.

**ಹೆಚ್ಚಿದ ನಿರೀಕ್ಷೆ**

ವಿಶಾಲ 25 ಎಕರೆ ವಿಸ್ತೀರ್ಣ ಹೊಂದಿರುವ ಗೋಶಾಲೆಗೆ ಹೊಂದಿಕೊಂಡಂತೆ ತಂತಿಬೇಲಿ ಹಾಕಬೇಕು. ನೈಸರ್ಗಿಕ ಮೇವು ಬಳಕೆಯಿಂದ ಹಸು, ಕರುಗಳ ಆರೋಗ್ಯ ವೃದ್ಧಿಯಾಗಲಿದೆ. ಸರ್ಕಾರದ ಗೋಶಾಲೆಗೆ ಮಾತ್ರ ಅನುದಾನ ನೀಡುವ ಬದಲು ಖಾಸಗಿ ಸಂಘ ಸಂಸ್ಥೆಗಳು ಆರಂಭಿಸಿರುವ ಕೇಂದ್ರಗಳಿಗೂ ನೆರವಿನ ಹಸ್ತ ಚಾಚಬೇಕು ಎನ್ನುವ ನಿರೀಕ್ಷೆ ಹೆಚ್ಚಿದೆ. ಸರ್ಕಾರ, ಚುನಾಯಿತ ಪ್ರತಿನಿಧಿಗಳು, ಅಧಿಕಾರಿಗಳು ಇನ್ನಾದರೂ ಇತ್ತ ಗಮನಹರಿಸಿ ಗೋ ಪ್ರೇಮಿಗಳ ನಿರೀಕ್ಷೆಗೆ ಸ್ಪಂದಿಸುವರೇ ಎಂಬುದನ್ನು ಕಾದು ನೋಡಬೇಕಿದೆ.

## ನಗರದಲ್ಲಿ ಕೆಂಪೇಗೌಡರ ಪುತ್ಥಳಿ ಅದ್ಧೂರಿ ಮೆರವಣಿಗೆ

### 20ಕ್ಕೂ ಹೆಚ್ಚು ಕಲಾ ತಂಡಗಳು ಭಾಗಿ: ಕುಣಿದು ಕುಪ್ಪಳಿಸಿದ ಯುವಕರು

• ಪ್ರಜೋದಯ ವರದಿ

**ಹಾಸನ:** ನಾಡಪ್ರಭು ಕೆಂಪೇಗೌಡರ ಜಯಂತಿ ಅಂಗವಾಗಿ 20ಕ್ಕೂ ಹೆಚ್ಚು ಕಲಾ ತಂಡಗಳೊಂದಿಗೆ ನಗರದಲ್ಲಿ ವಿಜೃಂಭಣೆಯ ಮೆರವಣಿಗೆ ನಡೆಯಿತು.

ವೇದಿಕೆ ಕಾರ್ಯಕ್ರಮಕ್ಕೂ ಮೊದಲು ಜಿಲ್ಲಾಧಿಕಾರಿ ಕಚೇರಿ ಎದುರು ಮಠಾಧೀಶರು, ಜಿಲ್ಲೆಯ ಜನಪ್ರತಿನಿಧಿಗಳು, ಜಿಲ್ಲಾ ಡಳಿತದ ಅಧಿಕಾರಿಗಳು, ಸಮುದಾಯದ ಮುಖಂಡರು, ಗಣ್ಯರು ನಾಡಪ್ರಭು ಕೆಂಪೇಗೌಡರ ಪುತ್ಥಳಿ ಹಾಗು ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು. ನಂತರ ಹತ್ತಾರು ಕಲಾತಂಡಗಳ ಮೆರುಗಿನೊಂದಿಗೆ ಸಂಭ್ರಮ, ಸಡಗರ ಹಾಗೂ ಸಾಂಸ್ಕೃತಿಕ ಮೆರವಣಿಗೆ ನಗರದ ಪ್ರಮುಖ ರಸ್ತೆಗಳಲ್ಲಿ ನಡೆಯಿತು.

ಮೆರವಣಿಗೆಯಲ್ಲಿ ಕೀಲು ಕುದುರೆ, ವೀರಗಾಸೆ, ಚಿಟ್ಟಿ ಮೇಳ, ಡ್ರಮ್ಸ್, ಚಂಡೆ ವಾದ್ಯ, ಡೊಳ್ಳು ಕುಣಿತ, ಪೂಜಾ ಕುಣಿತ, ನಂದಿಧ್ವಜ ಕುಣಿತ ಹಾಗೂ ಗೊಂಬೆ ಕುಣಿತ ಸೇರಿ ವಿವಿಧ ಜಾನಪದ ಕಲಾತಂಡಗಳು ಆಕರ್ಷಕ ಪ್ರದರ್ಶನಗಳ ಮೂಲಕ ಸಂಭ್ರಮ ಮತ್ತಷ್ಟು ಹೆಚ್ಚಿಸಿ ದವು. ಮೆರವಣಿಗೆಯಲ್ಲಿ ಅಳವಡಿಸಿದ್ದ ಅಬ್ಬರದ ಡಿಜೆ ಸಂಗೀತಕ್ಕೆ ವಿದ್ಯಾರ್ಥಿಗಳು ಹಾಗು ಯುವಕ-ಯುವತಿಯರು ಉತ್ಸಾಹದಿಂದ ಹೆಜ್ಜೆ ಹಾಕಿ, ಕುಣಿದು ಕುಪ್ಪಳಿಸುವ ಮೂಲಕ ಸಂಭ್ರಮಿಸಿದರು. ಮೆರವಣಿಗೆಯುದ್ದಕ್ಕೂ ಕೆಂಪೇಗೌಡರ ಪರ ಜಯಘೋಷ ಮೊಳಗಿದವು.

ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ, ಸಂಸದ ಶ್ರೇಯಸ್ ಪಟೇಲ್, ಶಾಸಕ ಹೆಚ್.ಪಿ. ಸ್ವರೂಪ್ ಪ್ರಕಾಶ್, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ,





ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್, ಒಕ್ಕಲಿಗರ ಸಂಘದ ಜಿಲ್ಲಾಧ್ಯಕ್ಷ ಜಿ.ಎಲ್.ಮುದ್ದೇಗೌಡ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ರಘುಗೌಡ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಚ್.ಎಲ್.ಮಲ್ಲೇಶಗೌಡ, ಪತ್ರಕರ್ತರ ಸಂಘದ ರಾಜ್ಯ ಉಪಾಧ್ಯಕ್ಷ ಎಚ್.ಬಿ.ಮದನಗೌಡ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ ಮತ್ತಿತರರು ಹಾಜರಿದ್ದರು.

## ಕಾರು ಡಿಕ್ಕಿ: ವ್ಯಕ್ತಿ ಸಾವು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಕಾರು ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಜೋಗಿಪುರ ಸಮೀಪ ಇತ್ತೀಚೆಗೆ ನಡೆದಿದೆ.

ಜೋಗಿಪುರದ ಮಂಜುನಾಥ್ ಮೃತರು. ಜೂ.25ರ ರಾತ್ರಿ 10 ಗಂಟೆ ಸಮಯದಲ್ಲಿ ಡಿಯೋ ಬೈಕ್‌ನಲ್ಲಿ ಚನ್ನರಾಯ ಪಟ್ಟಣಕ್ಕೆ ಹೋಗುತ್ತಿದ್ದಾಗ ಹಿಂಬದಿಯಿಂದ ವೇಗವಾಗಿ ಬಂದ ಕಾರು ಡಿಕ್ಕಿಯಾಗಿದೆ. ಅಪಘಾತದ ರಭಸಕ್ಕೆ ರಸ್ತೆ ಮೇಲೆ ಬಿದ್ದಿದ್ದ ಮಂಜುನಾಥ್ ಅವರನ್ನು ಸಾರ್ವಜನಿಕರೊಬ್ಬರು ತಕ್ಷಣವೇ ಆಸ್ಪತ್ರೆಗೆ ದಾಖಲಿಸಿದರು. ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಕಾರು ಚಾಲಕ ನಿಲ್ಲಿಸದೆ ಹೋಗಿದ್ದಾನೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಅಪಘಾತ: ಬೈಕ್ ಸವಾರ ಸಾವು

**ಹಾಸನ:** ನಿರ್ಲಕ್ಷ್ಯದ ಚಾಲನೆಯಿಂದ ಬೈಕ್ ಮೇಲಿಂದ ಬಿದ್ದ ಸವಾರ ಮೃತಪಟ್ಟಿರುವ ಘಟನೆ ನಗರದ ಬಿಟ್ಟಗೌಡನಹಳ್ಳಿಯಲ್ಲಿ ನಡೆದಿದೆ.

ಲಾರಿ ಮೆಕ್ಯಾನಿಕ್ ಆಗಿದ್ದ ಮನೋಜ್ ಮೃತ ದುರ್ದೈವಿ. ಜೂ.25ರ ರಾತ್ರಿ 10.30 ಗಂಟೆಗೆ ಕೆಲಸ ಮುಗಿಸಿ ಮನೆಗೆ ಹೋಗುತ್ತಿದ್ದಾಗ ಹಂಪ್ಸ್ ಹತ್ತಿಸುವ ವೇಳೆ ನಿಯಂತ್ರಣ ತಪ್ಪಿ ರಸ್ತೆ ಮೇಲೆ ಬಿದ್ದಿದ್ದಾರೆ. ವೇಗದ ಚಾಲನೆಯೇ ಅವಘಡಕ್ಕೆ ಕಾರಣ ಎನ್ನಲಾಗಿದೆ. ತಲೆ ಹಾಗು ದೇಹದ ಇತರ ಭಾಗಗಳಿಗೆ ಗಂಭೀರ ಗಾಯ ಗಳಾಗಿ ರಸ್ತೆ ಮೇಲೆ ಬಿದ್ದಿದ್ದ ಮನೋಜ್‌ನನ್ನು ಮಂಜೇಗೌಡ ಎಂಬುವವರು ಕೂಡಲೇ ಸುಧಾರಿಸಿ ಆ್ಯಂಬುಲೆನ್ಸ್ ಮೂಲಕ ಹಿಮ್ಸ್‌ಗೆ ದಾಖಲಿಸಿದರು. ವೈದ್ಯರ ಸಲಹೆ ಮೇರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ. ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕೆಂಪೇಗೌಡರ ಆಡಳಿತ ವೈಖರಿ ಸಮಾಜಕ್ಕೆ ದಾರಿದೀಪ

• ಪ್ರಜೋದಯ ವರದಿ

**ಬೇಲೂರು:** ನಾಡಪ್ರಭು ಕೆಂಪೇಗೌಡರ ಆಡಳಿತ ವೈಖರಿ, ದೂರದೃಷ್ಟಿ ಮತ್ತು ಜನಪರ ಚಿಂತನೆ ಇಂದಿಗೂ ಸಮಾಜಕ್ಕೆ ದಾರಿದೀಪವಾಗಿದೆ. ಬೆಂಗಳೂರನ್ನು ವಿಶ್ವಮಟ್ಟದ ನಗರವಾಗಿ ರೂಪಿಸುವಲ್ಲಿ ಅವರ ದೂರ ದೃಷ್ಟಿಯೇ ಭದ್ರ ಅಡಿಪಾಯವಾಗಿದೆ ಎಂದು ಶಾಸಕ ಹೆಚ್.ಕೆ.ಸುರೇಶ್ ಅವರು ಹೇಳಿದರು.

ಪಟ್ಟಣದಲ್ಲಿ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಅಂಗವಾಗಿ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದ ಬಳಿಕ ಅವರು ಮಾತನಾಡಿದ ಅವರು, ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ವತಿಯಿಂದ ಸಾಂಕೇತಿಕವಾಗಿ ಜಯಂತಿ ಆಚರಿಸಲಾಗಿದ್ದು, ಜೂ.29 ರಂದು ಪರಮಪೂಜ್ಯ ಬಾಲಗಂಗಾಧರನಾಥ ಸ್ವಾಮೀಜಿ ಅವರ ಪುತ್ಥಳಿ ಬಳಿಯಿಂದ ಶ್ರೀ ಶಂಭುನಾಥ ಸ್ವಾಮೀಜಿ ಅವರ ಸಾನಿಧ್ಯದಲ್ಲಿ ಭವ್ಯ ಮೆರವಣಿಗೆ ನಡೆಯಲಿದೆ ಎಂದು ತಿಳಿಸಿದರು.

ಜಿಲ್ಲೆಯಲ್ಲೇ ಸುಮಾರು 15 ವರ್ಷಗಳ ಹಿಂದೆ ಮೊದಲ ಬಾರಿಗೆ ಕೆಂಪೇಗೌಡರ ಪುತ್ಥಳಿ ಸ್ಥಾಪಿಸಿ ಜಯಂತಿ ಆಚರಿಸಿದ ಹೆಗ್ಗಳಿಕೆ ಬೇಲೂರಿಗೆ ಸಲ್ಲುತ್ತದೆ. ಬೇಲೂರು ಸರ್ವಧರ್ಮ ಸೌಹಾರ್ದದ ತಾಣವಾಗಿದ್ದು,



ಅಂಬೇಡ್ಕರ್, ಬಸವೇಶ್ವರ, ಛತ್ರಪತಿ ಶಿವಾಜಿ ಮಹಾರಾಜ ಹಾಗೂ ಕೆಂಪೇಗೌಡ ಸೇರಿ ಎಲ್ಲಾ ಮಹನೀಯರ ಜಯಂತಿಗಳನ್ನು ಜಾತಿ-ಧರ್ಮ ಭೇದವಿಲ್ಲದೆ ಆಚರಿಸುತ್ತಾ ಬಂದಿರುವುದು ಹೆಮ್ಮೆಯ ಸಂಗತಿ ಎಂದರು.

ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ, ಕೆಂಪೇಗೌಡ ಸೇವಾ ಸಮಿತಿಯ ಅಧ್ಯಕ್ಷ ಎಂ.ಎ. ನಾಗರಾಜ್ ಮಾತನಾಡಿ, ರೈತರ ಹಿತವನ್ನು ಕಾಪಾಡುವ ನಿಟ್ಟಿನಲ್ಲಿ ಕೆರೆ- ಕಟ್ಟೆಗಳ ನಿರ್ಮಾಣಕ್ಕೆ ಆದ್ಯತೆ ನೀಡಿದ ಮಹಾನ್ ಆಡಳಿತಗಾರ ಕೆಂಪೇಗೌಡರು ಎಂದರು.

ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಚಂದ್ರೇಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಜೆ. ನಿಶಾಂತ್, ಪುರಸಭೆ ಅಧ್ಯಕ್ಷ ಅಕ್ರಂ ಶರೀಫ್, ಮಾಜಿ ಅಧ್ಯಕ್ಷ ಎ.ಆರ್.ಅಶೋಕ್, ಪುರಸಭೆ ಮುಖ್ಯಾಧಿಕಾರಿ ಬಸವರಾಜು ಶಿಗ್ಗಾವಿ, ಒಕ್ಕಲಿಗ ಯುವ ವೇದಿಕೆ ಅಧ್ಯಕ್ಷ ಹೆಚ್.ಎಂ.ದಿನೇಶ್ ಇದ್ದರು.

## 2027ರ ಆರಂಭದಲ್ಲಿ ಭಾರತಕ್ಕೆ ಟ್ರಂಪ್ ಭೇಟಿ

**ವಾಷಿಂಗ್ಟನ್:** ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮುಂದಿನ ವರ್ಷದ (2027ರ) ಆರಂಭದಲ್ಲಿ ಭಾರತಕ್ಕೆ ಭೇಟಿ ನೀಡುವ ಸಾಧ್ಯತೆಯಿದೆ ಎಂದು ಅಮೇರಿಕಾದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಹೇಳಿರುವುದಾಗಿ ಐಎಎನ್‌ಎಸ್ ವರದಿ ಮಾಡಿದೆ.

ಟ್ರಂಪ್ ಅವರು ಮುಂದಿನ ವರ್ಷದ ಆರಂಭದಲ್ಲಿ ಭಾರತಕ್ಕೆ ಪ್ರವಾಸ ಕೈಗೊಳ್ಳುವ ಸಂಬಂಧ ಕಾರ್ಯಪ್ರವೃತ್ತರಾಗಿದ್ದೇವೆ. ಅದಕ್ಕೆ ಸಂಬಂಧಿಸಿ ವ್ಯವಸ್ಥೆಗಳನ್ನುನೋಡಿಕೊಳ್ಳಲು ಈ ವರ್ಷ ನಾನು ಭಾರತಕ್ಕೆ ಭೇಟಿ ನೀಡುವ ಸಾಧ್ಯತೆಯಿದೆ ಎಂದು ಹೇಳಿದ್ದಾರೆ. ಇತ್ತೀಚೆಗೆ ಫ್ರಾನ್ಸ್‌ನಲ್ಲಿ ನಡೆದ ಜಿ-7 ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಅಧ್ಯಕ್ಷ ಟ್ರಂಪ್ ಅವರು ದ್ವಿಪಕ್ಷೀಯ ಮಾತುಕತೆ ನಡೆಸಿದ್ದರು. ಒಪ್ಪಂದದ ಪ್ರಗತಿ ಕುರಿತು ಪ್ರತಿಕ್ರಿಯಿಸಿದ ರೂಬಿಯೊ, ನಾವು ಒಪ್ಪಂದವನ್ನು ಪೂರ್ಣಗೊಳಿಸುವ ಅಂತಿಮ ಹಂತದಲ್ಲಿದ್ದೇವೆ. ಮಾತುಕತೆಗಳು ಬಹಳ ಸಕಾರಾತ್ಮಕ ದಿಕ್ಕಿನಲ್ಲಿ ಸಾಗಿವೆ ಎಂದಿದ್ದಾರೆ.

ರಷ್ಯಾದಿಂದ ಕಚ್ಚಾ ತೈಲ ಖರೀದಿಸುತ್ತಿರುವ ಕಾರಣದಿಂದಾಗಿ ಭಾರತದ ಸರಕುಗಳ ಮೇಲೆ ಅಮೇರಿಕಾವು ಹೆಚ್ಚಿನ ಸುಂಕ ವಿಧಿಸಿದ ನಂತರ, ಉಭಯ ದೇಶಗಳ ಸಂಬಂಧದಲ್ಲಿ ಏರು ಪೇರಾಗಿದೆ. ಸಂಬಂಧವನ್ನು ಸರಿಪಡಿಸಿಕೊಳ್ಳುವ ಉದ್ದೇಶದಿಂದ ರೂಬಿಯೊ ಕಳೆದ ತಿಂಗಳು ಭಾರತಕ್ಕೆ ಭೇಟಿ ನೀಡಿದ್ದರು. ಆದರೆ, ಜೂನ್ ಆರಂಭದಲ್ಲಿ ಗಲ್ಫ್ ಆಫ್ ಒಮಾನ್‌ನಲ್ಲಿ ಅಮೇರಿಕಾ ನೌಕಾಪಡೆಯು ವಾಣಿಜ್ಯ ಹಡಗುಗಳ ಮೇಲೆ ನಡೆಸಿದ ಕ್ಷಿಪಣಿ ದಾಳಿಯಲ್ಲಿ ಭಾರತದ ಮೂವರು ನಾವಿಕರು ಮೃತಪಟ್ಟಿದ್ದಾರೆ. ಈ ಘಟನೆಯಿಂದ ರಾಜತಾಂತ್ರಿಕ ಸಂಬಂಧ ಮತ್ತಷ್ಟು ಬಿಗಡಾಯಿಸಿದೆ.

## ವಿದ್ಯೆ ಕಲಿಸಿದ ಗುರುವಿಗೆ ಋಣಿಯಾಗಿರಬೇಕು



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಗುರುಗಳಿಗೆ ಗೌರವಿಸುವುದರ ಜೊತಗೆ ತಾವು ಓದಿದ ಶಾಲೆಯ ಅಭಿವೃದ್ಧಿಗೂ ಹಿರಿಯ ವಿದ್ಯಾರ್ಥಿಗಳು ಗಮನ ಹರಿಸಬೇಕೆಂದು ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಎನ್.ಆರ್. ಮರುಳಾರಾಧ್ಯ ಅವರು ಹೇಳಿದರು.

ತಾಲ್ಲೂಕಿನ ಹಿರೀಸಾವೆ ಸರ್ಕಾರಿ ಪ್ರೌಢಶಾಲೆಯಲ್ಲಿ 2006-07ನೇ ಸಾಲಿನ ವಿದ್ಯಾರ್ಥಿಗಳು ಏರ್ಪಡಿಸಿದ್ದ ಗುರುವಂದನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ವಿದ್ಯೆ ಕಲಿಸಿದ ಶಿಕ್ಷಕರಿಗೆ ಗೌರವ ಸಲ್ಲಿಸುವುದು ನಮ್ಮ ಸಂಸ್ಕೃತಿ. ಹಲವು ವರ್ಷ ಸಾವಿರಾರು ವಿದ್ಯಾರ್ಥಿಗಳಿಗೆ ಆಶ್ರಯ ನೀಡಿ, ಉತ್ತಮ ಜೀವನ ರೂಪಿಸಿದ ಶಾಲೆಯನ್ನು ಮರೆಯಬಾರದು. ಈಗಾಗಲೇ ಹಲವು ಕಡೆ ಹಿರಿಯ ವಿದ್ಯಾರ್ಥಿಗಳು ಶಾಲೆ ಅಭಿವೃದ್ಧಿಗೆ ವಿವಿಧ ಕಾರ್ಯಕ್ರಮ ರೂಪಿಸಿದ್ದಾರೆ. ಇಂದಿನ ಶಿಕ್ಷಣಕ್ಕೆ ಬೇಕಾದ ಆಧುನಿಕ ತಂತ್ರಜ್ಞಾನದ ಸೌಲಭ್ಯಗಳನ್ನು ಕೊಡುಗೆಯಾಗಿ ನೀಡಿ ಎಂದರು.

2006-07ನೇ ಸಾಲಿನಲ್ಲಿ ಈ ಶಾಲೆಯಲ್ಲಿ ಬೋಧನೆ ಮಾಡಿದ ಶಿಕ್ಷಕರಾದ ಪ್ರಕಾಶ್, ನಿರ್ಮಲ ಕುಮಾರಿ, ಕರಿಬಸಪ್ಪ, ರಾಮಕೃಷ್ಣ ಅವರಿಗೆ ಅಭಿನಂದಿಸಲಾಯಿತು. ಹಿರೀಸಾವೆ ಠಾಣೆಯ ಪಿಎಸ್‌ಐ ರೂಪಾದೇವಿ ಬಿರಾದರ್ ಅವರು ಗಿಡ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಸಾಪ ಹೋಬಳಿ ಘಟಕದ ಅಧ್ಯಕ್ಷ ಪ್ರಮೋದ್, ಮುಖ್ಯ ಶಿಕ್ಷಕ ಅಶೋಕ್, ಸಹಶಿಕ್ಷಕರಾದ ಪಾರ್ವತಮ್ಮ, ಜ್ಯೋತಿ ಮೈಮ್, ಅನಿತಾ, ಉಪನ್ಯಾಸಕಿ ಶಶಿಕುಮಾರಿ ಇದ್ದರು.

ಹಿರಿಯ ವಿದ್ಯಾರ್ಥಿಗಳಾದ ಗಂಗಾಧರ್, ಪುನೀತ್, ನಂದೀಶ್, ಸಲ್ಮಾನ್ ಅವರು ತಮ್ಮ ವಿದ್ಯಾರ್ಥಿ ಜೀವನದ ಅನುಭವ ಹಂಚಿಕೊಂಡರು.

## ಹೊಳೆನರಸೀಪುರದಲ್ಲಿ ರಾಮ ಮಂದಿರ ಪ್ರತಿಕೃತಿ ಪ್ರದರ್ಶನ

• ಪ್ರಜೋದಯ ವರದಿ

**ಹೊಳೆನರಸೀಪುರ:** ತಾಲ್ಲೂಕಿನ ಶ್ರೀ ಕನ್ನಿಕಾ ಪರಮೇಶ್ವರಿ ದೇವಸ್ಥಾನದ ಆವರಣದಲ್ಲಿ ಏರ್ಪಡಿಸಿರುವ ಅಯೋಧ್ಯೆ ರಾಮಮಂದಿರದ ಸುಂದರ ಮತ್ತು ಭವ್ಯವಾದ ಪ್ರತಿಕೃತಿ ಗಮನ ಸೆಳೆಯುತ್ತಿದೆ.

ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ ಬಿದಿರೆ ಗ್ರಾಮದ ವಿನಯ್ ರಾಮ್ ಎಂಬುವವರು ಈ ಭವ್ಯ ಕಲಾಕೃತಿಯನ್ನು ಸಿದ್ಧಪಡಿಸಿದ್ದಾರೆ. ದೇಶ ಹಾಗು ರಾಜ್ಯದಾದ್ಯಂತ ಒಟ್ಟು 108 ಕಡೆಗಳಲ್ಲಿ ಅಯೋಧ್ಯೆ ರಾಮಮಂದಿರದ ಮಾದರಿಯನ್ನು ಉಚಿತವಾಗಿ ಪ್ರದರ್ಶನ ಮಾಡುವ ಪ್ರತಿಜ್ಞೆ ತೊಟ್ಟಿರುವ ಇವರು, 2022 ರಿಂದ ನಿರಂತರವಾಗಿ ಈ ಪ್ರದರ್ಶನವನ್ನು ಯಶಸ್ವಿಯಾಗಿ ನಡೆಸಿ ಕೊಂಡು ಬರುತ್ತಿದ್ದಾರೆ. ಹೊಳೇನರಸೀಪುರದಲ್ಲಿ ನಡೆಯುತ್ತಿರುವುದು 108ನೇ ಪ್ರದರ್ಶನವಾಗಿದೆ.

**ಮೂರು ಮಹಡಿಗಳ ನಿಖರ ಕಲಾಕೃತಿ**

ಅಯೋಧ್ಯೆಯ ಮೂಲ ಮಂದಿರದ ಶೈಲಿಯಲ್ಲೇ ನೆಲಮಹಡಿ, ಮೊದಲ ಮಹಡಿ ಮತ್ತು ಎರಡನೇ ಮಹಡಿಗಳನ್ನು ಅತ್ಯಂತ ನಿಖರವಾಗಿ ಬಿಂಬಿಸಲಾಗಿದೆ. ಮೂಲ ಮಂದಿರದಲ್ಲಿರುವಂತೆ ಬಾಲ ರಾಮನ ಮೂರ್ತಿ, ಲಕ್ಷ್ಮಣ, ಭರತ, ಶತ್ರುಘ್ನ ಹಾಗು ಗಣಪತಿ ಮತ್ತು ದೇವಿಯ ಮೂರ್ತಿಗಳನ್ನು ಇಲ್ಲಿ ಕಲಾತ್ಮಕವಾಗಿ ಪ್ರತಿಷ್ಠಾಪಿಸಲಾಗಿದೆ. ಜೊತೆಗೆ ರಾಮಾಯಣದ ಪ್ರಮುಖ ಘಟನಾವಳಿಗಳ



ಚಿತ್ರಣ, 392 ಕಂಬಗಳು ಹಾಗು 161 ಅಡಿ ಎತ್ತರದ ಭವ್ಯ ಗೋಪುರದ ಮಾದರಿಯನ್ನು ಇಲ್ಲಿ ಕಣ್ಣಿಗೆ ಕಟ್ಟುವಂತೆ ಪ್ರದರ್ಶಿಸಲಾಗಿದೆ.

ರಾಮನ ಆದರ್ಶಗಳ ಜಾಗೃತಿ

ತ್ರೇತಾಯುಗದಲ್ಲಿ ಧರ್ಮ ಶಿಕ್ಷಣ ಮತ್ತು ಆತ್ಮ ಕಲ್ಯಾಣಕ್ಕಾಗಿ ಶ್ರೀರಾಮನು ಅವತರಿಸಿದ್ದನು. ಸೂರ್ಯನು ಎಲ್ಲರಿಗೂ ಸಮಾನವಾಗಿ ಬೆಳಕನ್ನು ಕೊಡುವಂತೆ, ಸೂರ್ಯವಂಶದ ಶ್ರೀರಾಮನ ಆದರ್ಶ ಗುಣಗಳು ಹಾಗು ಪಂಚಭೂತಗಳ ಸಮಾನತೆಯ ಸಂದೇಶವು ಜಾತಿ, ಮತ, ಭೇದವಿಲ್ಲದೆ ಎಲ್ಲರಿಗೂ ತಲುಪಬೇಕು ಎನ್ನುವುದೇ ಈ ಪ್ರದರ್ಶನದ ಮುಖ್ಯ ಉದ್ದೇಶ ಎಂದು ಕಲಾಕೃತಿಯ ನಿರ್ಮಾತೃ ವಿನಯ್ ರಾಮ್ ಅವರು ತಿಳಿಸಿದ್ದಾರೆ.

ವಯೋಸಹಜ ಕಾರಣಗಳಿಂದ ಅಯೋಧ್ಯೆಗೆ ಹೋಗಲು ಸಾಧ್ಯವಾಗದ ಹಿರಿಯರಿಗೆ ಹಾಗೂ ಮಕ್ಕಳಿಗೆ ಈ ಪ್ರದರ್ಶನವು ಅಯೋಧ್ಯೆಯ ರಾಮ ಮಂದಿರವನ್ನು ಕಣ್ಣಾರೆ ಕಂಡ ಧನ್ಯತೆಯನ್ನು ನೀಡುತ್ತಿದೆ.

ಅಪರೂಪದ ಹಾಗು ಉಚಿತ ಪ್ರದರ್ಶನವು ಮುಂಬರುವ ಬುಧವಾರ ಬೆಳಿಗ್ಗೆ 11 ಗಂಟೆ ವರೆಗೆ ಸಾರ್ವಜನಿಕರ ವೀಕ್ಷಣೆಗೆ ಲಭ್ಯವಿರಲಿದೆ.

ಯುವಜನ ಸಂಘದ ಅಧ್ಯಕ್ಷ ಆಶ್ವೀಜ, ಸ್ಪಂದನ್, ನೀಲೇಶ್, ಗೋಪಾಲ್ ಶೆಟ್ಟಿ, ಸುನಿಲ್, ನಾಗಾರ್ಜುನ್, ಸುಭಾಷ್,ಅವಿನಾಶ್, ವಿಷ್ಣು ನಾಗೇಂದ್ರ, ಎನ್.ಆರ್.ಮುತ್ತುರಾಜ್ ಇತರರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK